

ಲೇಖಕರು

## ಪೂಜ್ಯ ಆಚಾರ್ಯ ಬುದ್ಧರಕ್ಖಿತರು

ಪೂಜ್ಯರು ಮಹಾ ಬೋಧಿ ಸೊಸೈಟಿ ಬೆಂಗಳೂರಿನ ಸಂಸ್ಥಾಪಕ ಅಧ್ಯಕ್ಷರಾಗಿದ್ದಾರೆ. ಅವರು 1954ರಲ್ಲಿ ಛಟ್ಠಸಂಗಾಯನ, ಅಂದರೆ ಆರನೇ ಮಹಾ ಬೌದ್ಧ ಸಮ್ಮೇಳನದಲ್ಲಿ ಸಂಪಾದಕ ಮಂಡಳಿಯ ಸದಸ್ಯರಾಗಿ ಬರ್ಮಾದ ರಂಗೂನಿನಲ್ಲಿ ಕೆಲಸ ಮಾಡಿದರು. ಈ ಸಮ್ಮೇಳನವು ತ್ರಿಪಿಟಕವನ್ನು ಪ್ರಕಾಶಗೊಳಿಸಿತು.

1956ರಲ್ಲಿ ಬೆಂಗಳೂರಿನಲ್ಲಿ ಮಹಾ ಬೋಧಿ ಸೊಸೈಟಿಯನ್ನು ಸ್ಥಾಪಿಸಿ ನಂತರದ ದಿನಗಳಲ್ಲಿ ಅನೇಕ ಬೌದ್ಧ ಕೇಂದ್ರಗಳನ್ನು ಭಾರತ ಮತ್ತು ವಿದೇಶದಲ್ಲಿ ಸ್ಥಾಪಿಸಿದರು. ಭಿಕ್ಷು ತರಬೇತಿ ಕೇಂದ್ರ, ಮಹಾಬೋಧಿ ಬೌದ್ಧ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಿದರು. ಬೌದ್ಧ ಮಾಸಿಕ ಪತ್ರಿಕೆಗಳನ್ನು ನಡೆಸುತ್ತಿದ್ದಾರೆ. ನೂರಾರು ಪುಸ್ತಕಗಳನ್ನು ಬರೆದಿದ್ದಾರೆ. ಕನ್ನಡ ತಿಪಿಟಕ ಗ್ರಂಥಮಾಲೆ ಪ್ರಾರಂಭಿಸಿ ಭಗವಾನ್ ಬುದ್ಧರ ಪವಿತ್ರ ಉಪದೇಶಗಳನ್ನು ಪಾಳಿ ಭಾಷೆಯಿಂದ ಕನ್ನಡಕ್ಕೆ ಅನುವಾದಿಸಿ ಪ್ರಕಟಿಸುವ ಬೃಹತ್ ಯೋಜನೆಗೆ ಚಾಲನೆ ನೀಡಿದ್ದಾರೆ. ಬೌದ್ಧ ಅಧ್ಯಯನ ಕೇಂದ್ರವನ್ನು ವಿಶ್ವವಿದ್ಯಾನಿಲಯವನ್ನಾಗಿಸಲು ರೂಪುರೇಷೆಗಳನ್ನು ಕೊಟ್ಟಿದ್ದಾರೆ. ಭಾರತದಲ್ಲಿ ಇಂದು ಅತಿ ಹಿರಿಯ ಭಂತೇಜಿಯಾಗಿದ್ದು ಬೌದ್ಧ ಸಮಾಜ ನಿರ್ಮಾಣದ ಕೆಲಸದಲ್ಲಿ ತೊಡಗಿದ್ದಾರೆ. 60 ವರ್ಷಗಳ ಅವರ ಧಮ್ಮ ಸೇವೆಯಿಂದ ವಿಶೇಷವಾಗಿ ಕರ್ನಾಟಕದಲ್ಲಿ ಇಂದು ಬುದ್ಧ ಧಮ್ಮ ಅನೇಕರಿಗೆ ತಲುಪುತ್ತಿದೆ.

**BUDDHA VACHANA TRUST**
MAHA BODHI SOCIETY, GANDHINAGAR, BANGALORE - 560 009, INDIA.

ಮಹಾಬೋಧಿ ಸುವರ್ಣ ಪುಸ್ತಕ ಮಾಲಿಕೆ 38

# ಜೀವನದ ಶ್ರೇಷ್ಠ ಮಂಗಳಗಳು

ಸಂಪುಟ-10



ಪೂಜ್ಯ ಆಚಾರ್ಯ ಬುದ್ಧರಕ್ಖಿತ

# ಜೀವನದ ಶ್ರೇಷ್ಠ ಮಂಗಳಗಳು

**ಸಂಪುಟ-10**

ಲೇಖಕರು :

**ಪೂಜ್ಯ ಆಚಾರ್ಯ ಬುದ್ಧರಕ್ಖಿತ**

ಕನ್ನಡಕ್ಕೆ :

ಅನೀಶ್ ಬೋಧ್

ಬುದ್ಧ ವಚನ ಟ್ರಸ್ಟ್

ಮಹಾ ಬೋಧೀ ಸೊಸೈಟಿ

**ಗಾಂಧಿನಗರ, ಬೆಂಗಳೂರು-560 009**

ಪ್ರಕಾಶನ :

**ಬುದ್ಧ ವಚನ ಟ್ರಸ್ಟ್**

14, ಕಾಳಿದಾಸ ಮಾರ್ಗ

ಗಾಂಧಿನಗರ, ಬೆಂಗಳೂರು-560 009

ದೂರವಾಣಿ : 080-22250684

ಫ್ಯಾಕ್ಸ್ : 080-22264438

E-mail : books@mahabodhi.info

Web : www.mahabodhi.info

**© ಬುದ್ಧ ವಚನ ಟ್ರಸ್ಟ್ - ಮಾರ್ಚ್ 2011**

**1000 ಪ್ರತಿಗಳು**

**ಮುಖಪುಟ ವಿನ್ಯಾಸ : ಸಿ. ಚಂದ್ರಶೇಖರ್**

**ಬೆಲೆ ರೂ. 40/-**

ಮುದ್ರಕರು :

**ಶ್ರೀ ಅರವಿಂದ್ ಪ್ರಿಂಟರ್ಸ್**

ಸರಸ್ವತಿಪುರಂ, ಬೆಂಗಳೂರು-560 096

ದೂ : 080-23498198, ಮೊ : 9916461691

# ಮುನ್ನುಡಿ

ಜೀವನದ ಶ್ರೇಷ್ಠ ಮಂಗಳಗಳು ಭಗವಾನ ಬುದ್ಧರ ರಕ್ಷಣೆಯ ಸೂತ್ರವಾದ ಮಹಾ ಮಂಗಳ ಸುತ್ತವನ್ನು ಆಧರಿಸಿದೆ. ಇದನ್ನು ರಕ್ಷಣೆಯ ಸೂತ್ತ ಎನ್ನಲು ಕಾರಣವೇನೆಂದರೆ ಅದು 1. ಎಲ್ಲ ದುಷ್ಟ ಮತ್ತು ಕೆಟ್ಟತನಗಳಿಂದ ರಕ್ಷಿಸುತ್ತದೆ. 2. ನಮ್ಮ ಆಧ್ಯಾತ್ಮಿಕ ಜೀವನವನ್ನು ಕಾಪಾಡುತ್ತದೆ. 3. ಜೀವನದಲ್ಲಿ ಒಳ್ಳೆಯದನ್ನು ತರುತ್ತದೆ.

ಈ ಸೂತ್ರದ ಪ್ರಕಾರ ಮೂವತ್ತೆಂಟು ಮಂಗಳಗಳಿವೆ. ಹನ್ನೆರಡು ಗಾಥೆಗಳಲ್ಲಿ ಈ ಮಂಗಳಗಳನ್ನು ಜೀವನವನ್ನೇ ಜೀವನದ ಶ್ರೇಷ್ಠ ಮಂಗಳಗಳನ್ನಾಗಿ ಪರಿವರ್ತಿಸುವ ಹಂತ ಹಂತವಾಗಿರುವ ಮಾರ್ಗವನ್ನಾಗಿ ಸುಂದರವಾಗಿ ನಿರೂಪಿಸಿದ್ದಾರೆ. ಅಂದರೆ ಜೀವನ ಹೇಗೆ ನಡೆಸಬೇಕೆಂದರೆ ಇಲ್ಲಿಯೇ ಈಗಲೇ ಮತ್ತು ಭವಿಷ್ಯದಲ್ಲಿ ಸುಖವನ್ನು ತರುವಂತಹದಾಗಿರಬೇಕು. ಮಂಗಳದ ಅರ್ಥ ಅದು ಒಬ್ಬನನ್ನು ಆಧ್ಯಾತ್ಮಿಕ ಮಾರ್ಗದಲ್ಲಿ ಬೆಳೆಸುತ್ತದಲ್ಲದೆ ಅದೇ ಹೊತ್ತಿಗೆ ಭೌತಿಕ ಸಂಪತ್ತನ್ನು ತರುತ್ತದೆ.

ಜೀವನದ ಶ್ರೇಷ್ಠ ಮಂಗಳಗಳು ಸರಣಿಯನ್ನು 1956ರಲ್ಲಿ ಸ್ಥಾಪಿಸಿದ ಮಹಾ ಬೋಧಿ ಸೊಸೈಟಿಯ ಸುವರ್ಣ ಜಯಂತಿಯ ನೆನಪಿಗಾಗಿ ಹೊರತರಲಾಗಿದೆ.

ಎಲ್ಲ ಜೀವಿಗಳೂ ಸುಖವಾಗಿರಲಿ !

**ಪೂಜ್ಯ ಆಚಾರ್ಯ ಬುದ್ಧರಕ್ಖಿತ**
ಸಂಸ್ಥಾಪಕ ಅಧ್ಯಕ್ಷರು
ಮಹಾ ಬೋಧಿ ಸೊಸೈಟಿ, ಬೆಂಗಳೂರು



**“ಸಬ್ಬ ದಾನಂ ಧಮ್ಮ ದಾನಂ ಜಿನಾತಿ”**
**ಎಲ್ಲ ದಾನಗಳಲ್ಲಿ ಧಮ್ಮ ದಾನವು ಶ್ರೇಷ್ಠವಾದುದು**

**ಕೊಡುಗೆ :**

**ಉಪಾಸಿಕಾ ಶ್ರೀಮತಿ ಆರ್. ಪ್ರೀತಾಕುಮಾರಿಯವರು**
ದಿನಾಂಕ : 28–12–2010ರಂದು ಇಹಲೋಕವನ್ನು ತ್ಯಜಿಸಿರುತ್ತಾರೆ. ಅವರ ಸವಿನೆನಪಿಗಾಗಿ ಅವರ ಪತಿಯವರಾದ **ಉಪಾಸಕ ಶಿವಣ್ಣ** ಮತ್ತು ಮಕ್ಕಳು, ಸಹೋದರ **ಉಪಾಸಕ ಕೆ. ಕುಮಾರ್** ಮತ್ತು ಕುಟುಂಬದವರು **ಉಪಾಸಿಕಾ ಎ. ಭಾಗ್ಯಲಕ್ಷ್ಮಿ** ಮತ್ತು ಕುಟುಂಬದವರು ಈ ಪುಸ್ತಕವನ್ನು ಪ್ರಕಟಿಸಿದ್ದಾರೆ. ಅದರ ಪುಣ್ಯಫಲವು ಗತಿಸಿದ ಪ್ರೀತಾಕುಮಾರಿಯವರಿಗೆ ದೊರಕಲಿ ! ಭಗವಾನ್ ಬುದ್ಧರು ಸದಾ ಆಶೀರ್ವಾದ ಕರುಣಿಸಲೆಂದು ಅವರ ಕುಟುಂಬ ವರ್ಗದವರಾದ ನಾವೆಲ್ಲರೂ ಪ್ರಾರ್ಥಿಸುತ್ತೇವೆ.

**ಎಲ್ಲ ಜೀವಿಗಳೂ ಸುಖವಾಗಿರಲಿ !**

# ಜೀವನದ ಶ್ರೇಷ್ಠ ಮಂಗಳಗಳು

ಮಹಾ ಮಂಗಳ ಸುತ್ತದ ಆರನೆಯ ಗಾಥೆಯು ಈ ನಾಲ್ಕು ವಿಧದ ಮಂಗಳಗಳನ್ನು ಸ್ಪಷ್ಟವಾಗಿ ನಿರೂಪಿಸುತ್ತದೆ.

***"ದಾನಿಯಾಗಿರುವಿಕೆ, ಧರ್ಮಾಚರಣೆಯಲ್ಲಿ (ಶೀಲದಲ್ಲಿ) ತೊಡಗುವಿಕೆ, ಜ್ಞಾತಿ (ಬಂಧುಗಳಿಗೆ) ಗಳಿಗೆ ಸಹಾಯ ಮಾಡುವಿಕೆ ಮತ್ತು ನಿಂದಾತೀತವಾದ ಕರ್ಮಗಳಲ್ಲಿ ಮಾತ್ರ ತೊಡಗುವಿಕೆ – ಇವು ಮಂಗಳಗಳಲ್ಲಿ ಉತ್ತಮವಾಗಿವೆ."***

ನಾಲ್ಕು ಬೌದ್ಧ ಮೌಲ್ಯಗಳನ್ನು ಈ ಗಾಥೆಯಲ್ಲಿ ನಿರೂಪಿಸಲಾಗಿದೆ.

1. ದಾನವನ್ನು ನೀಡುತ್ತ ದಾನವನ್ನು ಅಭ್ಯಸಿಸುವಿಕೆ.
2. ಹತ್ತು ಕುಶಲ ಕಮ್ಮಪಥವನ್ನು ಅಭ್ಯಾಸಿಸುತ್ತ ಶೀಲವನ್ನು ಎತ್ತಿಹಿಡಿಯುವಿಕೆ.
3. ತನ್ನ ಕುಟುಂಬದವರಿಗೆ ಸಹಾಯ ಮಾಡುವ ರೀತಿಯಲ್ಲೇ ಬಂದುಗಳಿಗೆಲ್ಲಾ ಸಹಾಯ ಮಾಡುವ ಸದ್ಗುಣವನ್ನು ವಿಕಸಿಸುವಿಕೆ.
4. ನಿಂದಾತೀತ ಕರ್ಮಗಳಲ್ಲಿ ತೊಡಗಿಸುವಿಕೆ.

ಈ ಮೇಲಿನ ಎಲ್ಲಾ ಮೌಲ್ಯಗಳನ್ನು ಸಾಧಿಸಬೇಕಾದರೆ ಆರ್ಯ ಅಷ್ಟಾಂಗ ಮಾರ್ಗದ 3 ನಿಂದಾತೀತವಾದ ಅಂಗಗಳಾದ ಸಮ್ಮಾ ವಾಚಾ, ಸಮ್ಮಾ ಕರ್ಮ ಮತ್ತು ಸಮ್ಮಾ ಜೀವನ ಪಾಲಿಸಬೇಕಾಗುತ್ತದೆ.

ಒಬ್ಬನು ದಾನವನ್ನು ತೆರಿಗೆಯ ನಿವಾರಣೆಗಾಗಿಯೋ ಅಥವಾ ತೆರಿಗೆ ಇಲಾಖೆಯಿಂದ ವಿನಾಯಿತಿ ಪಡೆಯಲು ನೀಡುತ್ತಾನೆ ಅಥವಾ ಕೀರ್ತಿ ಪಡೆಯಲೋ ಅಥವಾ ತೋರಿಕೆಗೋ ಅಥವಾ ತನ್ನ ವೃತ್ತಿಯಲ್ಲಿ ವಿಶೇಷತೆ ಪಡೆಯಲು ನೀಡುತ್ತಾನೆ. ಇವೆಲ್ಲವೂ ಆಮಿಷದಾನದ ಅಡಿಯಲ್ಲೇ ಬರುತ್ತವೆ. ಅಂದರೆ ಭೌತಿಕತೆಯ ದಾನ ಅಥವಾ ಭೌತಿಕತೆಯ ಆಚೆಯ ಪ್ರೇರಣೆಯಿಲ್ಲದ ದಾನವಾಗಿರುತ್ತದೆ.



ಆದರೆ ಒಬ್ಬನು ಯಾವುದೇ ರೀತಿಯ ಭೌತಿಕತೆಯ ಅಪೇಕ್ಷೆಯಿಲ್ಲದೆ ದಾನ ನೀಡುವನೋ ಕೇವಲ ವಿಮುಕ್ತಿಯ ಉದ್ದೇಶವುಳ್ಳವನೋ ಅಂದರೆ ಕಮ್ಮ ಮತ್ತು ಪುನರ್ಜನ್ಮದ ಚಿತ್ತದಿಂದ ಮುಕ್ತನಾಗಲು ಬಯಸುತ್ತಿರುವನೋ ಆಗ ಈ ವಿಧದ ದಾನವು ಧಮ್ಮದಾನದ ಅಡಿಯಲ್ಲಿ ಬರುವುದು. ಪರಮಾರ್ಥಕ್ಕೆ ದಾನ. ಇದರಿಂದಾಗಿ ಧಮ್ಮದ ಉತ್ತೇಜನಕ್ಕೆ ಕಾರಣವಾಗುತ್ತದೆ. ಧಮ್ಮವು ತಿಳಿಯುವಂತೆ ಆಗುವುದು ಮತ್ತು ಧಮ್ಮದ ಆಚರಣೆಗೆ ಪ್ರೋತ್ಸಾಹವು ದೊರೆಯುವುದು. ಆಗ ಅಲ್ಲಿ ಸಂಸಾರದ ಬಿಡುಗಡೆಯೊಂದನ್ನೇ ಆತನು ಹುಡುಕುವನು.

ಯಾವಾಗ ನಿಂದಾತೀತನಾಗಿ ಅಥವಾ ನಿಸ್ವಾರ್ಥವಾಗಿ ಅಭ್ಯಸಿಸಿದಾಗ ಬೌದ್ಧರ ಈ ನಾಲ್ಕು ಮೌಲ್ಯಗಳಲ್ಲಿ ಪ್ರತಿಯೊಂದು ಸಹಾ ಶ್ರೇಷ್ಠ ಮಂಗಳವನ್ನು ನೀಡುತ್ತದೆ.

## ನಾಲ್ಕು ವಿಧವಾದ ಧಮ್ಮಾಚಾರಿಗಳು

ಬುದ್ಧ ಭಗವಾನರು ನಾಲ್ಕು ವಿಧದ ಧಮ್ಮಾಚಾರಿಗಳನ್ನು ಹೆಸರಿಸಿದ್ದಾರೆ. "ಇಲ್ಲಿ ಒಬ್ಬ ನಿಷ್ಠೆಯಿಂದ ಧಮ್ಮವನ್ನು ಅಭ್ಯಸಿಸಿ ಮತ್ತು ಸಾಧನೆಯನ್ನು ಮಾಡುತ್ತಾನೆ. ಆದರೆ ಪರರು ಹಾಗೆ ಆಗಲು ಪ್ರೋತ್ಸಾಹಿಸುವುದಿಲ್ಲ. ಇಲ್ಲಿ ಆತನು ವೈಯಕ್ತಿಕವಾಗಿ ಸಂಬೋಧಿ ಪ್ರಾಪ್ತಿಗಾಗಿ ನಿಷ್ಠನಾದರೂ, ಆತನು ಪರರಲ್ಲಿ ತನ್ನ ಧಮ್ಮ ಜ್ಞಾನವನ್ನು ಹಂಚಿಕೊಳ್ಳಲಾರ. ಹಾಗೆಯೇ ಆತನು ಪರರು ಧಮ್ಮವನ್ನು ತಿಳಿಯಲು ಹಾಗು ಅಭ್ಯಾಸ ಮಾಡಲು ಪ್ರೋತ್ಸಾಹಿಸಲಾರನು.

ಎರಡನೆಯ ವಿಧದ ವ್ಯಕ್ತಿಯು ಎಂದಿಗೂ ಧಮ್ಮವನ್ನು ಅಭ್ಯಸಿಸಲಾರ. ಹಾಗೆಯೇ ಸಾಧನೆಯನ್ನು ಮಾಡಲಾರ. ಆದರೆ ಆತನು ಪರರಿಗೆ ಧಮ್ಮವನ್ನು ತಿಳಿದುಕೊಳ್ಳಲು ಹಾಗು ಅಭ್ಯಸಿಸಿ ಸಾಧನೆ ಮಾಡಲು ಪ್ರೋತ್ಸಾಹಿಸುತ್ತಾನೆ. ವೈಯಕ್ತಿಕವಾಗಿ ಆತನಿಗೆ ಧಮ್ಮದ ಫಲಗಳನ್ನು ರುಚಿ ನೋಡಲು ಆಸಕ್ತಿಯಿಲ್ಲದಿದ್ದರೂ ಆತನು ಪರರಲ್ಲಿ ಅವನ್ನು ಸ್ಥಾಪಿಸಲು ಉತ್ಸಾಹಿತನಾಗಿರುತ್ತಾನೆ. ಅದಕ್ಕಾಗಿ ಪರರಲ್ಲಿ ಪ್ರೇರೇಪಿಸುತ್ತಾನೆ.

ಮೂರನೆಯ ವಿಧದ ವ್ಯಕ್ತಿಯು ಎಂದಿಗೂ ಧಮ್ಮವನ್ನು ತಿಳಿಯುವುದಾಗಲಿ, ಅಭ್ಯಸಿಸುವುದಾಗಲಿ, ಸಾಧಿಸುವುದಾಗಲಿ, ಮಾಡುವುದಿಲ್ಲ. ಹಾಗೆಯೇ ಪರರಲ್ಲೂ ಹಾಗೇ ಮಾಡಲು ಪ್ರೋತ್ಸಾಹಿಸುವುದಿಲ್ಲ ಮತ್ತು ಹೀಗಾಗಿ ಆತನಿಗೆ ಧಮ್ಮದ ಬಗ್ಗೆ ತೀರ ನಕಾರಾತ್ಮಕ ದೃಷ್ಟಿಕೋನಗಳು ಇರುತ್ತವೆ.

ನಾಲ್ಕನೆಯ ವಿಧದ ವ್ಯಕ್ತಿಯು ತೀರವಾಗಿ ಮೂರನೆಯವನಿಗಿಂತ ವಿರುದ್ಧವಾಗಿರುತ್ತಾನೆ. ಹಾಗೆಯೇ ಆತನು ಮೊದಲ ಹಾಗೂ ಎರಡನೆಯವನಿಗಿಂತ ಮಿಗಿಲಾಗಿರುವನು. ಇಲ್ಲಿ ಆತನು ಧಮ್ಮವನ್ನು ನಿಷ್ಠೆಯಿಂದ ಅಭ್ಯಸಿಸಿ ತಿಳಿದುಕೊಳ್ಳುತ್ತಾನೆ ಹಾಗೂ ಅದರ ಪಾಲನೆಯನ್ನು ಮಾಡುತ್ತಾನೆ. ಹಾಗೆಯೇ ಆತನು ನಿಷ್ಕಪಟವಾಗಿ ಪರರಲ್ಲೂ ಧಮ್ಮವನ್ನು ತಿಳಿಸಿ ಪ್ರೋತ್ಸಾಹಿಸುತ್ತಾನೆ. ಹೀಗಾಗಿ ಆತನು ಮಾತ್ರವೇ ಧಮ್ಮ ಮಾರ್ಗದಲ್ಲಿ ಇಲ್ಲಿಯೇ ಮತ್ತು ಈಗಲೇ ಫಲ ಪಡೆಯುವವನಾಗುತ್ತಾನೆ. ಆತನ ಮನಸ್ಸು ಧಮ್ಮದ ಹೊಂಬೆಳಕಿನಿಂದಾಗಿ ಸಂವೃದ್ಧವಾಗಿ ಬಲಿಷ್ಠವಾಗುತ್ತದೆ. ಇದು ಪ್ರತಿಯೊಬ್ಬರಿಗೂ ಪ್ರಕಾಶವಾಗುತ್ತದೆ.

ಈ ನಾಲ್ಕು ವಿಧದ ವ್ಯಕ್ತಿಗಳನ್ನು ಈ ರೀತಿ ಹೋಲಿಕೆ ಮಾಡಲಾಗಿದೆ.

1. ಕತ್ತಲಿನಿಂದ ಬೆಳಕಿನತ್ತ ಚಲಿಸುತ್ತಿರುವ ವ್ಯಕ್ತಿ.
2. ಬೆಳಕಿನಿಂದ ಕತ್ತಲಿನೆಡೆಗೆ ಚಲಿಸುತ್ತಿರುವ ವ್ಯಕ್ತಿ.
3. ಕತ್ತಲಿಂದ ಕತ್ತಲೆಗೆ ಚಲಿಸುತ್ತಿರುವ ವ್ಯಕ್ತಿ.
4. ಬೆಳಕಿನಿಂದ ಬೆಳಕಿನೆಡೆಗೆ ಚಲಿಸುತ್ತಿರುವ ವ್ಯಕ್ತಿ.

ಮೊದಲ ವಿಧದ ವ್ಯಕ್ತಿಯು ಧಮ್ಮವನ್ನು ಪಾಲಿಸುತ್ತಾನೆ. ಆದರೆ ಪರರಲ್ಲಿ ಹಾಗೆಯೇ ಪ್ರೋತ್ಸಾಹಿಸಲಾರನು, ಅಂತಹವನು ಧಮ್ಮವನ್ನು ಕೇವಲ ತನಗಾಗಿ ಇಲ್ಲಿ ಮತ್ತು ನಂತರವೂ ಫಲ ಪಡೆಯಲು ಆಚರಿಸುತ್ತಿರುವವನಾಗಿದ್ದಾನೆ. ಆದರೆ ಆತನ ಮನಸ್ಸು ಪರರ ಬಗ್ಗೆ ಕಾಳಜಿ ವಹಿಸದಿದ್ದರಿಂದಾಗಿ ಆತನ ಮನಸ್ಸು ಪೂರ್ಣವಾಗಿ ಸಂವೃದ್ಧವಾಗುವುದಿಲ್ಲ.



ಹಾಗೆಯೇ ಪೂರ್ಣವಾಗಿ ಸಶಕ್ತವೂ ಆಗುವುದಿಲ್ಲ. ಆತನ ಗಳಿಕೆಯು ಪಾರ್ಶ್ವದ್ದಾಗಿದೆ ಹೊರತು ಪೂರ್ಣವಾದುದಲ್ಲ. ಈ ಮಾಪನದಿಂದಾಗಿ, ಆತನು ಕತ್ತಲೆಯಿಂದ ಬೆಳಕಿನೆಡೆಗೆ ಹೋಗುವವನಾಗಿದ್ದಾನೆ.

ಎರಡನೆಯ ವಿಧದ ವ್ಯಕ್ತಿಯು ಪರರಿಗೆ ತಿಳಿಯಲು ಅಭ್ಯಸಿಸಲು, ಪಾಲಿಸಲು, ಪ್ರೋತ್ಸಾಹಿಸುತ್ತಾನೆ. ಆದರೆ ಅವನ್ನೆಲ್ಲಾ ಸ್ವತಃ ಆತನೇ ಪಾಲನೆ ಮಾಡುವುದಿಲ್ಲ. ಅಂತಹ ವ್ಯಕ್ತಿಯನ್ನು ಬೆಳಕಿನಿಂದ ಕತ್ತಲೆಯೆಡೆಗೆ ಸಾಗುತ್ತಿರುವವನು ಎಂದು ಸಾಮ್ಯತೆ ಮಾಡಬಹುದು. ಆತನಿಗೆ ಧಮ್ಮದ ಬಗ್ಗೆ ಸ್ವಲ್ಪ ಅರಿವು ಹಾಗೂ ನಂಬಿಕೆ ಇದ್ದೇ ಇದೆ. ಆದ್ದರಿಂದಲೇ ಆತನು ಪರರಿಗೆ ಧಮ್ಮವನ್ನು ಅರಿತು ಪಾಲಿಸಲು ಪ್ರೋತ್ಸಾಹಿಸುತ್ತಿದ್ದಾನೆ, ಆದರೆ ಆತನಲ್ಲಿ ಶ್ರದ್ಧೆಯ ಒಲವು ಅಲ್ಪವಾದ್ದರಿಂದಾಗಿ ಹಾಗೂ ಧಮ್ಮವನ್ನು ಮೊದಲು ತಾನೇ ಪಾಲಿಸಿ ನಂತರ ಪರರಿಗೆ ತಿಳಿಸಬೇಕೆಂಬ ಪ್ರಾಮಾಣಿಕತೆಯ ಕೊರತೆಯಿಂದಾಗಿ ಆತನು ಸ್ವತಃ ಪಾಲಿಸಲಾರ, ಆತನ ಪ್ರಜ್ಞಾಶಕ್ತಿಯು ಅಥವಾ ಆತನ ಭೌತಿಕ ಗಳಿಕೆಯು ಆತನ ಪರಮಾರ್ಥದ ಪೂರೈಕೆಗೆ ಹೋಗಲು ಬಿಡುತ್ತಿಲ್ಲ.

ಮೂರನೆಯ ವಿಧದ ವ್ಯಕ್ತಿಯು ಹೆಚ್ಚು ಕೆಟ್ಟ ವ್ಯಕ್ತಿಯಾಗಿರುತ್ತಾನೆ. ಆತನು ಧಮ್ಮವನ್ನು ಅರ್ಥೈಸಿಕೊಂಡು ತಾನು ಇಲ್ಲೇ ಹಾಗು ಈಗಲೇ ಅದರ ಫಲವನ್ನು ತನ್ನ ಮೋಹಚಿತ್ತದಿಂದಾಗಿ ಪಡೆಯಲಾರ. ಹಾಗೆಯೇ ಪರರ ಹಿತಕ್ಕೂ ಚಿಂತಿಸದೆ ಅವರಿಗೂ ಲಾಭ ನೀಡಲಾರ. ಜೊತೆಗೆ ಆತನು ಧಮ್ಮದ ಬಗ್ಗೆ ಮಿಥ್ಯಾದೃಷ್ಟಿಗಳನ್ನು, ಮಿಥ್ಯಾ ನಂಬಿಕೆಗಳನ್ನು ಹೊಂದಿ ಆತನು ಕತ್ತಲೆಯಿಂದ ಕತ್ತಲೆಯೆಡೆಗೆ ಸಾಗುತ್ತಿರುತ್ತಾನೆ. ಆತನಿಂದ ಯಾರಿಗೂ ಲಾಭವಿಲ್ಲ, ಬದಲಾಗಿ ಪರರಿಗೆ ಆತನಿಂದ ಹಾನಿಯಿದೆ, ಆತನು ತನ್ನನ್ನು ಹಿಂಸಿಸಿಕೊಂಡು ಪರರಿಗೂ ಹಾನಿಯುಂಟುಮಾಡುತ್ತಾನೆ.

ನಾಲ್ಕನೆಯ ವಿಧದ ವ್ಯಕ್ತಿಯು ಮೂರನೆಯವನಿಗೆ ಅತಿ ವಿರುದ್ಧವಾದ ಗುಣವನ್ನು ಹೊಂದಿರುತ್ತಾನೆ, ಇಲ್ಲಿ ಈತನು ಬೆಳಕಿನಿಂದ ಬೆಳಕಿನೆಡೆಗೆ ಸಾಗುತ್ತಿರುತ್ತಾನೆ. ಆತನು ಶ್ರೇಷ್ಠವಿಧದ ಮಾನವನಾಗಿರುತ್ತಾನೆ. ಆತನು

ಧಮ್ಮವನ್ನು ಜೀವನದಲ್ಲೇ ಅತಿ ಶ್ರೇಷ್ಠವಾದುದೆಂದು ಅರ್ಥೈಸಿಕೊಂಡಿರುತ್ತಾನೆ. ಆದ್ದರಿಂದಾಗಿ ಆತನು ಧಮ್ಮವನ್ನು ಅಭ್ಯಸಿಸಿಕೊಂಡಿರುತ್ತಾನೆ. ಆದ್ದರಿಂದಾಗಿ ಆತನು ಧಮ್ಮವನ್ನು ಅಭ್ಯಸಿಸಿ ತಿಳಿಯುತ್ತಾನೆ ಹಾಗು ಪಾಲಿಸುತ್ತಾನೆ. ಹಾಗೆಯೇ ಪರರೂ ಹಾಗೆ ಮಾಡಲು ಪ್ರೋತ್ಸಾಹಿಸುತ್ತಾನೆ. ಇನ್ನೊಂದು ವಿಧದಲ್ಲಿ ಹೇಳಬೇಕೆಂದರೆ ಮಾನವರಲ್ಲಿ ಶ್ರೇಷ್ಠರು ಹಾಗೂ ನೀಚರು ಇರುತ್ತಾರೆ. ಇಲ್ಲಿ ಶ್ರೇಷ್ಠತ್ವ ಹಾಗೂ ನೀಚತ್ವವನ್ನು ಪ್ರಾಪಂಚಿಕ ಸ್ವತ್ತುಗಳಿಂದ ನಿರ್ಧರಿಸುವುದಿಲ್ಲ. ಅಂದರೆ ಐಶ್ವರ್ಯ, ಅಧಿಕಾರ, ಬಲ, ಕೀರ್ತಿ ಇತ್ಯಾದಿಗಳಿಂದ ಅಳತೆ ಮಾಡುವುದಿಲ್ಲ. ಬದಲಾಗಿ ಧಮ್ಮದ ಅರಿವಿನ ಪಾಲನೆಯಿಂದಲೇ ಅಳತೆ ಮಾಡುತ್ತಾರೆ. ಏಕೆಂದರೆ ಧಮ್ಮವು (ಬೋಧಿ ಜ್ಞಾನ) ಮಾತ್ರ ಮನಸ್ಸನ್ನು ಸಶಕ್ತನನ್ನಾಗಿಯು ಮತ್ತು ಸಂವೃದ್ಧನನ್ನಾಗಿಯೂ ಮಾಡುವುದು. ಹಾಗೆಯೇ ಆತನನ್ನು ಶ್ರೇಷ್ಠನನ್ನಾಗಿ ಮಾಡುವುದು, ಶ್ರೇಷ್ಠ ಮಾನವನು ಬೆಳಕಿನಿಂದ ಬೆಳಕಿನೆಡೆಗೆ ಸಾಗುತ್ತಿರುತ್ತಾನೆ. ಆತನು ಕ್ರಿಯಾತ್ಮಕವಾಗಿ ಧಮ್ಮವನ್ನು ಪಾಲಿಸುತ್ತಿರುತ್ತಾನೆ. ಆತನು ಭೌತಿಕತೆಯ ಉನ್ನತಿ ಮತ್ತು ಪರಮಾರ್ಥದ ಪ್ರಗತಿ ಎರಡನ್ನೂ ಈ ಜೀವಿತದಲ್ಲೇ ಸಾಧಿಸುತ್ತಾನೆ. ಜನ್ಮವು ಉಳಿದಿದ್ದರೆ ಮುಂದಿನ ಜನ್ಮಗಳಲ್ಲಿಯೂ ಹಾಗೆಯೇ ಸಾಗುತ್ತಿರುತ್ತಾನೆ.

ಒಬ್ಬರು ಹೀಗೆ ಪ್ರಶ್ನಿಸಬಹುದು: "ಈ ಜೀವಿತದಲ್ಲಿ ನಡೆಯಬಹುದಾದುದೆಲ್ಲವನ್ನೂ ನಾವು ಕಾಣಬಹುದು, ಆದರೆ ಭವಿಷ್ಯದ ಬಗ್ಗೆ ಭರವಸೆ ಏನಿದೆ?" ಆದರೆ ಧಮ್ಮಾಚಾರಿಗೆ ಇಂದ್ರೀಯಗಳನ್ನೊಳಗೊಂಡ ಅಸ್ತಿತ್ವವು ಉನ್ನತಿಯೆಡೆ ಸಾಗುತ್ತಿರುತ್ತದೆ ಅಥವಾ ಜೀವನದಿಂದ ಜೀವನಕ್ಕೆ ವಿಕಾಸಿಸುತ್ತಲೇ ಇರುತ್ತದೆ.

ಧಮ್ಮವನ್ನು ಅರಿಯುತ್ತ, ಪಾಲಿಸುತ್ತ ಒಬ್ಬನು ದೀರ್ಘಕಾಲ ಧಮ್ಮವನ್ನು ಇಲ್ಲಿ ಈಗಲೇ ಸ್ಥಾಪಿಸಿದರೆ ವ್ಯಕ್ತಿಯು ಸಹಾ ಧಮ್ಮದಿಂದಾಗಿ ತಲೆತಲಾಂತರಗಳವರೆಗೂ ಅಥವಾ ಜನ್ಮದಿಂದ ಜನ್ಮಕ್ಕೆ ಲಾಭ ಪಡೆಯಬಹುದು.



ಬೌದ್ಧರ ಕುಟುಂಬ ಮೌಲ್ಯಗಳನ್ನು ಮಹಾ ಮಂಗಳಸುತ್ತದ ಐದನೆಯ ಮತ್ತು ಆರನೆಯ ಗಾಥೆಯಲ್ಲಿ ತಿಳಿಸಲಾಗಿದೆ. ಅದರಲ್ಲಿ ಸ್ಪಷ್ಟವಾಗಿ ಧಮ್ಮವನ್ನು ತಲೆತಲಾಂತರಗಳವರೆಗೂ ಕೌಟುಂಬಿಕ ಜೀವನದಲ್ಲಿ ಅಳವಡಿಸಿ ನೆಲೆಗೊಳಿಸಬೇಕೆಂದು ಇದೆ. ಅದೆಂದರೆ ತಂದೆ–ತಾಯಿಗಳನ್ನು ಸಲಹುವುದರಿಂದಾಗಿ, ಒಬ್ಬನು ಖಂಡಿತವಾಗಿ ಧಮ್ಮವನ್ನು ಕಾಪಾಡುತ್ತಾನೆ. ಹೀಗೆಯೇ ಪೋಷಕರಿಂದ ಮಕ್ಕಳಿಗೆ ನಂತರ ಅವರಿಂದ ಅವರ ಮಕ್ಕಳಿಗೆ ಹೀಗೆಯೇ ಒಬ್ಬನು ಅತೀತದಿಂದ ವರ್ತಮಾನಕ್ಕೆ ಮತ್ತು ವರ್ತಮಾನದಿಂದ ಭವಿಷ್ಯಕ್ಕೆ ಹೀಗೆ ಧಮ್ಮಚಕ್ರವನ್ನು ಪಾಲನೆಯಲ್ಲಿಡಬೇಕು. ಈ ಧಮ್ಮಚಕ್ರವು ನಮ್ಮ ಮುಂದಿನ ಪೀಳಿಗೆಯವರೆಗೂ ದೊರೆಯುವಂತಾಗಲು ಸಾಗುತ್ತಲೇ ಇರಬೇಕು. ಹೆಂಡತಿ ಮತ್ತು ಮಕ್ಕಳನ್ನು ಸಾಕುವುದು, ಪೋಷಿಸುವುದು ಇತ್ಯಾದಿಗಳಿಂದ ಒಬ್ಬನು ಧಮ್ಮವನ್ನು ಭವಿಷ್ಯಕ್ಕೆ ಕಾಪಾಡುವಂತೆ ಮಾಡುತ್ತಾನೆ.

ಬುದ್ಧ ಧಮ್ಮದಲ್ಲಿ ಯಾವುದೇ ರೀತಿಯ ಜಾತಿಯ ಪಕ್ಷಪಾತವಿಲ್ಲ. ಬೇರೆ ಸಮಾಜದ ವ್ಯವಸ್ಥೆಯಲ್ಲಿ ಹಾಗಿರಬಹುದು. ವಿವಿಧ ವ್ಯಕ್ತಿಗಳಲ್ಲಿ ಮತ್ತು ಲಿಂಗಗಳಲ್ಲಿ ಸಮಾನತೆ ಸ್ಥಾಪಿತವಾದಾಗಲೇ ಜೀವನದಲ್ಲಿ ಸಮಾನ ಅವಕಾಶಗಳು ದೊರೆಯುವಂತಾಗಿ ಉನ್ನತಿ ಹಾಗು ಯಶಸ್ಸು ಸಾಧಿಸಲು ಸಾಧ್ಯವಾಗುತ್ತದೆ. ಬೌದ್ಧ ಸಮಾಜದಲ್ಲಿ ನಾಲ್ಕುವಿಧದ ವ್ಯಕ್ತಿಗಳು ಇರುವರು. ಅವರೆಂದರೆ ಭಿಕ್ಖುಗಳು, ಭಿಕ್ಖುಣಿಯರು, ಉಪಾಸಕರು, ಉಪಾಸಕಿಯರು. ಸ್ಪಷ್ಟವಾಗಿ ಹೇಳಬೇಕಾದರೆ ಬೌದ್ಧ ಸನ್ಯಾಸಿಗಳ ಮತ್ತು ಬೌದ್ಧ ಗೃಹಸ್ಥರ ಸಮೂಹವನ್ನು ಒಳಗೊಂಡಿದೆ.

ಇಲ್ಲಿ ಮಾನವರ ಶ್ರೇಷ್ಠತ್ವ ಮಾನದಂಡನೆ ಮಾಡುವುದು ವ್ಯಕ್ತಿಯ ಶೀಲ ಮತ್ತು ಧಮ್ಮದ ಸದ್ಗುಣಗಳಿಂದಾಗಿ ಮಾತ್ರ. ಅದರಿಂದಾಗಿ ಮಾನವನು ಶ್ರೇಷ್ಠನಾಗುತ್ತಾನೆ ಹೊರತು ಮಾನವ ನಿರ್ಮಿತ ಜಾತಿಪದ್ಧತಿ ಅಥವಾ ವರ್ಣಾಶ್ರಮಗಳಿಂದಲ್ಲ. ಮೇಲಾಗಿ ಇಲ್ಲಿ ತನ್ನ ಸಾಧನೆ ಮತ್ತು ಪರಿಶ್ರಮದಿಂದಾಗಿ ಆತನು ಧಮ್ಮವನ್ನು ಪಾಲಿಸುತ್ತ ಉನ್ನತನಾಗಿ ಪರರಿಗೂ

ಹಾಗೇ ಆಗಲು ಪ್ರೇರಣೆ ನೀಡಬಲ್ಲನು. ಅದಕ್ಕಿಂತ ಹೆಚ್ಚಾಗಿ ಆತನು ಧಮ್ಮವನ್ನು ಅಭ್ಯಸಿಸುತ್ತ, ಪಾಲಿಸುತ್ತ, ಪರರಿಗೆ ತಿಳಿಸುತ್ತ ಧಮ್ಮವನ್ನು ಕಾಪಾಡುತ್ತಾನೆ. ಈಗಿರುವ ಮತ್ತು ಮುಂದಿನ ಬಹುಜನರ ಹಿತಕ್ಕಾಗಿ ಮತ್ತು ಬಹುಜನರ ಸುಖಕ್ಕಾಗಿ ತಲೆತಲಾಂತರದವರೆಗೂ ಕಾಪಾಡುತ್ತಾನೆ.

ಈಗಾಗಲೇ ತಿಳಿಸಿರುವಂತೆ ಮಹಾಮಂಗಳ ಸುತ್ತದ ಆರನೆಯ ಗಾಥೆಯು ಕೌಟುಂಬಿಕ ಮೌಲ್ಯಗಳ ಬಗ್ಗೆ ಜೀವನದ ಶ್ರೇಷ್ಠ ಮಂಗಳಗಳನ್ನು ತಿಳಿಸಿದೆ. ಅದೇಂದರೆ:

1. ದಾನ – ನೀಡುವುದರಲ್ಲಿ ಸದಾ ಮುಂದಾಗಿ, ಸಹೃದಯನಾಗಿರುವುದು.
2. ಧಮ್ಮಾಚರಿಯಾ – ಶೀಲವಂತನಾಗಿ, ಯೋಗ್ಯ ಜೀವನೋಪಾಯದಿಂದ ಕೂಡಿರುವವನಾಗಿ, ಶ್ರೇಷ್ಠ ಜೀವನ ನಡೆಸುವ ಬೌದ್ಧನಾಗಿರುವುದು.
3. ಞಾತಕಾನಂ ಸಂಘಹೊ – ಬಂಧುಗಳಿಗೆ ಸಹಾಯ ಮಾಡುವವನಾಗಿರುವುದು.
4. ಅನವಜ್ಜಾನಿ ಕಮ್ಮಾನಿ – ತನ್ನ ಎಲ್ಲಾ ಕರ್ಮಗಳಲ್ಲಿ ನಿಂದಾತೀತನಾಗಿರುವುದು.

ಈ ನಾಲ್ಕು ಶ್ರೇಷ್ಠ ಮಂಗಳಗಳು ಪರಸ್ಪರ ಸಂಬಂಧಗಳನ್ನು ಹೊಂದಿವೆ. ಈಗಾಗಲೇ ಹೇಳಿರುವಂತೆ ದಾನವು 2 ವಿಧದ್ದಾಗಿದೆ. ಆಮಿಷದಾನ (ಭೌತಿಕ ವಸ್ತುಗಳ ದಾನ) ಮತ್ತು ಧಮ್ಮದಾನ (ಪರಮಾರ್ಥ ದಾನ) ಇದರಲ್ಲಿ ಧಮ್ಮದಾನವೇ ಶ್ರೇಷ್ಠವಾದುದಾಗಿದೆ.

ಬುದ್ಧ ಭಗವಾನರು ಧಮ್ಮಪದದಲ್ಲಿ "ಸಬ್ಬದಾನಂ ಧಮ್ಮದಾನಂ ಜಿನಾತಿ" "ಎಲ್ಲಾ ದಾನಗಳಲ್ಲಿ ಧಮ್ಮದಾನವು ಶ್ರೇಷ್ಠ"ವೆಂದು ಹೇಳಿದ್ದಾರೆ. ಭೌತಿಕ ಉಡುಗೊರೆಗಳು ಪ್ರಾಪಂಚಿಕ ಸುಖವನ್ನು ನೀಡುತ್ತವೆ. ಆದರೆ ಧಮ್ಮದಾನವು ಭೌತಿಕ ಮತ್ತು ಪರಮಾರ್ಥ ಸುಖಗಳೆರಡನ್ನೂ ನೀಡುತ್ತವೆ. ಅಂದರೆ ಪ್ರಾಪಂಚಿಕ ಅಸ್ತಿತ್ವದ ದುಃಖಗಳಿಂದ ಬಿಡುಗಡೆ ನೀಡುತ್ತದೆ. ಆದ್ದರಿಂದಲೇ ಅದು ಸದಾ ಉತ್ಕೃಷ್ಟವಾಗಿದೆ.



ಮತ್ತೆ ಧಮ್ಮ ದಾನವು ಸಿದ್ಧವಾಗುವುದು ಒಬ್ಬನು ಶೀಲವಂತನೂ ಮತ್ತು ವಿಶ್ವಾಸಿಯೂ ಆದಾಗಲೇ. ಭಗವಾನರು ಧಮ್ಮಪದದಲ್ಲಿ ನಿಜಕ್ಕೂ ಯಾವುದು ಶ್ರೇಷ್ಠವೆಂದು ಹೀಗೆ ಹೇಳಿದ್ದಾರೆ:

***"ಆರೋಗ್ಯ ಪರಮಾ ಲಾಭಾ***
***ಸಂತುಟ್ಠಿ ಪರಮಂ ಧನಂ,***
***ವಿಸ್ಸಾಸೋ ಪರಮಾ ಞಾತಿ***
***ನಿಬ್ಬಾಣಂ ಪರಮಂ ಸುಖಂ"*** – ಧಮ್ಮಪದ 204

*"ಲಾಭಗಳಲ್ಲಿ ಆರೋಗ್ಯವೇ ಪರಮ ಲಾಭಕರವೂ*
*ಐಶ್ವರ್ಯಗಳಲ್ಲಿ ಸಂತೃಪ್ತಿಯೇ ಪರಮ ಧನವಾಗಿದೆ,*
*ಬಂಧುಗಳಲ್ಲಿ, ವಿಶ್ವಾಸಿಯೇ ಪರಮ ನಂಟ*
*ಸುಖಗಳಲ್ಲಿ ನಿಬ್ಬಾಣವೇ ಪರಮಸುಖವಾಗಿದೆ."* – ಧಮ್ಮಪದ 204

ಸಂಸಾರದ ದುಃಖಗಳಿಂದ ಮುಕ್ತನಾಗಲು, ಧಮ್ಮದಾನವು ಅಪಾರ ಕೃಪೆಯನ್ನು ತೋರಿದೆ. ಅದು ಜೀವನದಲ್ಲಿ ಇಲ್ಲಿ ಮತ್ತು ಈಗಲೇ ಜೀವನದ ಗುಣಮಟ್ಟವನ್ನು ಸುಧಾರಿಸುತ್ತದೆ. ಜೊತೆಗೆ ತಲೆತಲಾಂತರದವರೆಗೂ ದಾನದಂತಹ ಆಸ್ತಿಯನ್ನು ಕಾಪಾಡುವುದು. ಆದ್ದರಿಂದಲೇ ಬುದ್ಧ ಧಮ್ಮದಲ್ಲಿ ಧಮ್ಮದಾನಕ್ಕೆ ಅತ್ಯಂತ ಮಹತ್ವವನ್ನು ನೀಡುತ್ತಾರೆ. ಯಾರು ಧಮ್ಮದ ರಕ್ಷಣೆಗೆ, ಅಭಿವೃದ್ಧಿಗೆ ಕಾರಣಕರ್ತರೋ ಅವರು ಮಾನವತೆಗೆ ಶ್ರೇಷ್ಠದಾತರಾಗಿರುತ್ತಾರೆ.

ಕೌಟುಂಬಿಕ ಮೌಲ್ಯಗಳ ಬಗ್ಗೆ ಹೇಳುವಾಗ ಬುದ್ಧ ಭಗವಾನರು 'ದಾನಪತಿ'ಯ ಬಗ್ಗೆ ಹೀಗೆ ಹೇಳುತ್ತಾರೆ. ಯಾರಲ್ಲಿ ದಾನವು ಶೀಲದಿಂದ, ವಿಶ್ವಾಸ ಯೋಗ್ಯತನದಿಂದ ಮತ್ತು ನಿಂದಾತೀತ ಜೀವನದಿಂದ ಕೂಡಿರುವುದೋ ಆತನೇ 'ದಾನಪತಿ' ಎನ್ನುತ್ತಾರೆ. ಬೌದ್ಧರ ಕೌಟುಂಬಿಕ ಮೌಲ್ಯಗಳನ್ನು ಹಸ್ತದಲ್ಲಿರುವ ಬೆರಳುಗಳ ಬಗ್ಗೆ ಸಾಮ್ಯತೆ ನೀಡಬಹುದು. ಹೇಗೆಂದರೆ ಒಬ್ಬನು ಒಂದು ಬೆರಳನ್ನು ಎಳೆದರೆ ಮಿಕ್ಕವು ಸಹಾ ಬಾಗುತ್ತವೆ. ಆದ್ದರಿಂದಲೇ ಈ ಗಾಥೆಯಲ್ಲಿ ಜೊತೆಯಾಗಿಯೇ ನಾಲ್ಕು ಮೌಲ್ಯಗಳನ್ನು

ಜೀವನವನ್ನು ಶ್ರೇಷ್ಠವನ್ನಾಗಿಸಲು ತಿಳಿಸಿದ್ದಾರೆ. ಒಬ್ಬ ದಾನಿಯು ಶೀಲವಂತನೂ ಆಗಿರಬೇಕು. ಈ ಗಾಥೆಯಲ್ಲಿ ಶೀಲವಂತಿಕೆ ಎಂದರೆ ಹತ್ತು ಕುಶಲ ಕರ್ಮಗಳಾಗಿವೆ. ಆ ಹತ್ತು ಕುಶಲ ಕಮ್ಮ ಪಥವೆಂದರೆ:

**ಕಾಯಕಮ್ಮ (ಶಾರೀರಿಕ ಕ್ರಿಯೆಗಳು)**

1. ಯಾವುದೇ ಜೀವಿಯನ್ನು ಕೊಲ್ಲದಿರುವಿಕೆ, ಬದಲಾಗಿ ಎಲ್ಲಾ ಜೀವಗಳನ್ನು ಕಾಪಾಡುವಿಕೆ.
2. ಕದಿಯುವಿಕೆಗೆ ಸ್ವಯಿಚ್ಛೆಯಿಂದ ದೂರವಿರುವಿಕೆ, ಅದಕ್ಕೆ ಬದಲಾಗಿ ದಾನಾಚರಣೆಯನ್ನು ಪಾಲಿಸುವಿಕೆ.
3. ಕಾಮುಕತೆಯ ಮಿಥ್ಯಾಚಾರ (ವ್ಯಭಿಚಾರ) ದಲ್ಲಿ ಸ್ವಯಿಚ್ಛೆಯಿಂದ ದೂರವಿರುವಿಕೆ, ಬದಲಾಗಿ ಪವಿತ್ರತೆಭರಿತ ಕೌಟುಂಬಿಕ ಜೀವನ ಪಾಲಿಸುವಿಕೆ (ಮದ್ಯಪಾನ ಸ್ವೀಕರಿಸದಿರುವಿಕೆಯು ಈ ಕಾಯಕರ್ಮದ ಅಡಿಯಲ್ಲೇ ಬರುತ್ತದೆ.)

**ವಚಿಕಮ್ಮ (ವಾಚಕ ಕ್ರಿಯೆಗಳು)**

4. ಸುಳ್ಳು ಹೇಳುವುದರಿಂದ ಸ್ವಯಿಚ್ಛೆಯಿಂದ ದೂರವಿರುವಿಕೆ ಮತ್ತು ಪೂರ್ಣ ಅರಿವಿನಿಂದ ಸತ್ಯವನ್ನೇ ಹೇಳುವಿಕೆ.
5. ಚಾಡಿ ಹೇಳುವಿಕೆಗೆ ಸ್ವಯಿಚ್ಛೆಯಿಂದ ದೂರವಿರುವಿಕೆ ಮತ್ತು ಪೂರ್ಣ ಅರಿವಿನಿಂದ ಜನರಲ್ಲಿ ಪರಸ್ಪರ ತಿಳುವಳಿಕೆ, ಸೌಹಾರ್ದತೆ, ಐಕ್ಯತೆಯನ್ನು ಉಂಟುಮಾಡುವಿಕೆ.
6. ಪರರಲ್ಲಿ ನೋವುಂಟು ಮಾಡುವ ಕಟುನುಡಿ, ನಿಂದನೆ ಮಾಡದಿರುವಿಕೆ ಮತ್ತು ಮೃದುವಾಗಿ ದಯೆಯಿಂದ ಮಾತನಾಡುವಿಕೆ.
7. ಹರಟೆಗಳಿಂದ ದೂರವಿರುವುದು ಮತ್ತು ಪ್ರಜ್ಞಾಯುತವಾಗಿ ಹಾಗು ಅರ್ಥಬದ್ಧವಾಗಿ ಮಾತನಾಡುವಿಕೆ.

**ಮನೋಕಮ್ಮ (ಮಾನಸಿಕ ಕ್ರಿಯೆಗಳು)**

8. ದುರಾಸೆಯನ್ನು ತೊರೆಯುವುದು.



9. ದ್ವೇಷವನ್ನು ತೊರೆಯುವುದು.
10. ಮಿಥ್ಯಾದೃಷ್ಟಿಯನ್ನು ತೊರೆಯುವುದು.

ಮೇಲಿನ ವಿವರಣೆಯಿಂದ ಸ್ಪಷ್ಟವಾಗುವುದು ಏನೆಂದರೆ, ಧಮ್ಮದಾನದ ಅಭ್ಯಾಸಕ್ಕೆ ಹತ್ತು ಶೀಲದ ಆಚರಣೆಯು ಪೂರ್ಣವಾಗಲೇಬೇಕಾಗಿದೆ. ಧಮ್ಮದಾನವು ಸಕಾರಾತ್ಮಕ ಮಾನಸಿಕ ಸಾಮಿಪ್ಯವಾಗಿದೆ. ಆದ್ದರಿಂದ ದಾನಿಯ ಮನೋವೃತ್ತಿಯಲ್ಲಿ ಯಾವುದೇ ಜೀವಿಯ ಹತ್ಯೆ ಅಥವಾ ಹಿಂಸೆಯ ಬಗ್ಗೆಯೂ ಯೋಚಿಸಬಾರದು. ಆ ಮನಸ್ಸು ಸದಾ ಸರ್ವಹಿತವನ್ನೇ ಆಕಾಂಕ್ಷಿಸಬೇಕು. ಆದ್ದರಿಂದ ಈ ಅರ್ಥದಲ್ಲಿ ದಾನಿಯು ಮೆತ್ತಾ (ಮೈತ್ರಿ) ತುಂಬಿದ ಮಾನವನಾಗಿದ್ದಾನೆ. ಆತನು ಸಾರ್ವತ್ರಿಕ ಶುದ್ಧ ಪ್ರೀತಿಯಿಂದ, ಅಹಿಂಸೆಯಿಂದ ಮತ್ತು ಅಪಾಯರಹಿತತೆಯಿಂದ ಕೂಡಿರುತ್ತಾನೆ. ಹೀಗೆ ಧಮ್ಮದಾನದಿಂದಾಗಿ ಮೊದಲ ಕಮ್ಮಪಥವು ಪೂರ್ಣವಾಗುತ್ತದೆ. ಯಾವ ವ್ಯಕ್ತಿಯು ಮೆತ್ತಾ ಮತ್ತು ಕರುಣೆಯಿಂದ ಕೂಡಿರುತ್ತಾನೋ ಆತನು ದೀರ್ಘಾಯುವಿನ ಆನಂದ ಪಡೆಯುತ್ತಾನೆ. ಆತನು ಅಹಿಂಸೆ ಮತ್ತು ಕೊಲ್ಲದಿರುವಿಕೆಯಿಂದಾಗಿ ಶ್ರೇಷ್ಠನಾಗುತ್ತಾನೆ. ಅದರ ಫಲಿತವಾಗಿ ದೀಘಾಯು ಪಡೆದು ಇಲ್ಲೇ ಈಗಲೇ ಆನಂದಿಸುತ್ತಾನೆ. ಪರರಿಗೂ ಇದೇರೀತಿಯ ಲಾಭ ಪಡೆಯುವಂತಾಗಲು ಅವರಿಗೂ ಸಹಾಯ ಮಾಡುತ್ತಾನೆ. ಸರ್ವರಿಗೂ ಒಳಿತಾಗಲು ತಲೆತಲಾಂತರವಾಗಿ ಈ ಮೌಲ್ಯಗಳು ಉಳಿವಂತಾಗಲು ಆತನು/ಆಕೆಯು ಈ ರೀತಿ ಧಮ್ಮವನ್ನು ಅಭ್ಯಸಿಸುತ್ತಾರೆ.

ಉಳಿದ ಕಮ್ಮಪಥಗಳ ಜಾಗರೂಕ ವಿಶ್ಲೇಷಣೆಯಿಂದ ತಿಳಿಯುವುದು ಏನೆಂದರೆ ದಾನವು ಒಳಿತಿನ ಕಾರ್ಯಗಳ ಸಂಯೋಜನೆ ಮತ್ತು ಕ್ರಮ ಪಲ್ಲಟನೆಯ ಜಾಲಬಂಧವಾಗಿದೆ ಎಂದು ತಿಳಿಯುವುದು. ಈ ಜಾಲಬಂಧದ ಉಪಮೆಯನ್ನು ಸ್ಪಷ್ಟವಾಗಿ ಅರಿತು ದಾನಿಯು ಕಳ್ಳತನ, ಭ್ರಷ್ಟಾಚಾರ, ಮೋಸ ಇತ್ಯಾದಿಗಳಿಂದ ವಿಮುಖನಾಗುತ್ತಾನೆ ಮತ್ತು ಆತನು ಎಂದಿಗೂ ಬಯಕೆಯ ಕಾರಣದಿಂದಾಗಿ ದುಃಖಿಸುವುದಿಲ್ಲ. ಏಕೆಂದರೆ

ಆತನಲ್ಲಿ ದುರಾಸೆ ಇಲ್ಲವಾಗಿದೆ. ಹಾಗೆಯೇ ಆತನು ಬಡತನ ಮತ್ತು ನಷ್ಟದಿಂದ ಮುಕ್ತನಾಗುತ್ತಾನೆ. ಪರರ ವಸ್ತು, ಸ್ವತ್ತುಗಳಿಗಾಗಿ ಆಸೆಪಡದೆ, ದಾನಿಯು ಸಂಪತ್ತು, ಕೀರ್ತಿ, ಸ್ತುತಿಗಳಿಂದ ಸದಾ ಆನಂದಿತನಾಗಿರುತ್ತಾನೆ. ಹಾಗೆಯೇ ದಾನಿಯು ಅನೈತಿಕ ಸಂಬಂಧಗಳಲ್ಲಿಯೂ ತೊಡಗುವುದಿಲ್ಲ.

ಹೀಗಾಗಿ ಧಮ್ಮದಾನಿಯು ಸ್ತ್ರೀಯರೊಡನೆ ವ್ಯವಹರಿಸುವಾಗ ಅತ್ಯಂತ ಜಾಗರೂಕನಾಗಿರುತ್ತಾನೆ. ದಾನವು ನಿಸ್ಸಂದೇಹವಾಗಿ ಚಿತ್ತವನ್ನು ಪರಿಶುದ್ಧಿಗೊಳಿಸುತ್ತದೆ. ಹೀಗಾಗಿ ಪರಮಾರ್ಥಿಕವಾಗಿ ವಿಶುದ್ಧಿಯಾಗುವುದು. ನೈತಿಕವಾಗಿ ಪ್ರಜ್ಞನಾದ ಮತ್ತು ಪರಿಶುದ್ಧಿಯ ವ್ಯಕ್ತಿಯು ಅನೈತಿಕತೆಯ ಕಾಮುಕತೆಯಿಂದ ವಿಮುಖನಾಗುವ ಕಾರಣದಿಂದಾಗಿ ಆತನು ಭಯಾನಕ ರೋಗಗಳಾದ 'ಏಡ್ಸ್' ಇತ್ಯಾದಿಗಳಿಗೆ ಬಲಿಯಾಗಲಾರನು. ಏಕೆಂದರೆ ಅವೆಲ್ಲವೂ ದುಶ್ಶೀಲ ಜೀವನದಿಂದಾಗಿ ಬರುವಂತಹುದು ಆಗಿವೆ. ಹೀಗಾಗಿ ಅವನು/ಅವಳು ಪರಮ ಲಾಭವಾದ ಆರೋಗ್ಯವನ್ನು ಪಡೆದು ಆನಂದದಿಂದಿರುತ್ತಾರೆ.

ಹೀಗೆ ಕಾಯದಿಂದಾಗುವ ಅಕುಶಲ ಕರ್ಮಗಳಿಂದ ವಿಮುಖನಾಗಿ ಒಬ್ಬನು ಮಾತಿನಿಂದಾಗುವ ನಾಲ್ಕು ಅಕುಶಲ ವಾಚ ಕರ್ಮದಿಂದಲೂ ಹಾಗೂ ಮೂರು ಮಾನಸಿಕ ಕಮ್ಮದಿಂದಲೂ ವಿಮುಕ್ತನಾಗುತ್ತಾನೆ. ಹೀಗಾಗಿ ದಾನಿಯು ಸತ್ಯವನ್ನು ಪಾಲಿಸಲು ಇಷ್ಟಪಡುತ್ತಾನೆ. ಆದರೆ ಸುಳ್ಳನಾಗಲು ಬಯಸಲಾರ.

ಅದೇರೀತಿಯಾಗಿ ಅತನು ಯಾರು ಜಗಳವಾಡುತ್ತಿದ್ದಾರೋ, ಕಲಹದಿಂದಿರುವರೋ ಅವರಲ್ಲಿ ಯೋಗ್ಯವಾದ ತಿಳುವಳಿಕೆಯನ್ನು ತರುತ್ತಾನೆ. ಸೌಹಾರ್ದತೆಯನ್ನು ಮೂಡಿಸುತ್ತಾನೆ. ಹೀಗೆ ಶುದ್ಧನಾಗುತ್ತಾನೆ ಹೊರತು ಚಾಡಿ ಹೇಳಿ ಪರರಲ್ಲಿ ಒಡಕನ್ನು ತರಲಾರನು. ಹಾಗೆಯೇ ದಾನಿಯು ಹೃದಯಂಗಮವಾಗಿ, ಮೃದುವಾಗಿ ಮಾತನಾಡುತ್ತಾನೆ ಹೊರತು ಕಠಿಣವಾದ, ಕಟುವಾದ, ಒರಟಾದ, ನಿಂದನೆ ಮಾಡುವುದನ್ನು ಬಿಟ್ಟುಬಿಡುತ್ತಾನೆ. ಹೀಗೆ ಯಾರಿಗೂ ನೋವು ತರಲಾರನು.



ಶ್ರೇಷ್ಠತ್ವದಲ್ಲಿಯೇ ಆನಂದಿಸುವ ದಾನಿಯು ಗಂಭೀರವಾದ ವ್ಯಕ್ತಿಯಾಗಿರುತ್ತಾನೆ. ಆತನು ಕ್ಷುಲ್ಲಕವಾದ ಹರಟೆಯವನಾಗುವುದಿಲ್ಲ, ಅನರ್ಥಕಾರಿ (ಬೆಲೆ ಇಲ್ಲದ) ಮಾತುಕತೆಯಲ್ಲಿ ತೊಡಗುವುದಿಲ್ಲ. ಈ ಬಗೆಯ ನಾಲ್ಕು ರೀತಿಯ ಸಮ್ಯಕ್ ವಾಚವನ್ನು ಪಾಲಿಸುತ್ತ ಆತನು ಇಹ ಮತ್ತು ಪರಲೋಕಗಳೆರಡರಲ್ಲೂ ಸುಫಲಗಳನ್ನು ಪಡೆಯುತ್ತಾನೆ. ದಾನಿಯು, ಶ್ರದ್ಧಾಶೀಲನು ನಿಜಕ್ಕೂ ಅತ್ಯಂತ ನಂಬುಗೆಯ ವ್ಯಕ್ತಿಯಾಗಿರುತ್ತಾನೆ. ಆತನು ಅತ್ಯಂತ ವಿಶ್ವಾಸಾರ್ಹನು ಮತ್ತು ಅವಲಂಬನೆಗೆ ಅರ್ಹನು ಆಗಿರುತ್ತಾರೆ. ಇದಕ್ಕೆ ಪ್ರತಿಯಾಗಿ ಅವಿಶ್ವಾಸಾರ್ಹ ವ್ಯಕ್ತಿಯೂ ನಿಜವನ್ನು ಹೇಳಿದರೂ ಯಾರು ಸಹಾ ನಂಬುವುದಿಲ್ಲ.

ಉದಾಹರಿಸುವುದಾದರೆ ಇಂದಿನ ಜನರು ರಾಜಕಾರಣಿಗಳನ್ನು ನಂಬುತ್ತಿಲ್ಲ. ಅವರು ನಿಜವನ್ನು ನುಡಿದರೂ ಸಹಾ ಅವರನ್ನು ನಂಬುತ್ತಿಲ್ಲ. ಇದು ನಿಜಕ್ಕೂ ದೌರ್ಭಾಗ್ಯಕರ ವಿಷಯುವಾಗಿದೆ. ಏಕೆಂದರೆ ರಾಜಕಾರಣಿಗಳು ಮತ್ತು ಜನರು ಒಬ್ಬರಿಗೊಬ್ಬರು ಬೇಕಾದವರಾಗಿದ್ದಾರೆ. ಮತ್ತೆ ದಾನಿಯು ಸಂಧಾನ ಮಾಡುವವರು, ಹರಟೆರಹಿತರು, ಶಾಂತಿ ಮತ್ತು ಸೌಹಾರ್ದತೆ ತರುವವರು ಆಗಿದ್ದಾರೆ. ಆತನು ಸದಾ ಐಕ್ಯತೆಯನ್ನುಂಟು ಮಾಡುವುದರಲ್ಲಿಯೇ ಆನಂದಿಸುತ್ತಾನೆ. ಹೀಗಾಗಿ ಸರ್ವರಿಂದ ಗೌರವವನ್ನು ಪಡೆಯುತ್ತಾರೆ. ಸತ್ಯವಂತರು ಮತ್ತು ಸಂಧಾನಿಯು ಸದಾ ಒರಟು ಭಾಷೆಯಿಂದ ವಿಮುಖರಾಗಿ, ಸದಾ ಸಭ್ಯವಾದ ಮತ್ತು ಇಂಪಾದ ಶೈಲಿಯಲ್ಲೇ ಮಾತನಾಡುವರು. ಅಂತಹವರ ಮಾತುಗಳು ಸದಾ ಘನವಾಗಿರುತ್ತದೆ. ತೂಕವುಳ್ಳದ್ದಾಗಿರುತ್ತದೆ. ಆದ್ದರಿಂದ ಅವರು ಜನಪ್ರಿಯರಾಗುತ್ತಾರೆ. ಜನರು ಅವರಲ್ಲಿ ಬುದ್ಧಿವಾದ ಕೇಳಲು ಹುಡುಕಿಕೊಂಡು ಬರುತ್ತಾರೆ.

ಯಾವ ಮಾನವ ಸತ್ಯಶಾಲಿಯೋ, ವಿವಾದ ಶಮನ ಮಾಡುವವನೋ ಮತ್ತು ಸಭ್ಯ ಭಾಷಿಯೋ ಅಂತಹವನು ಅನರ್ಥಕಾರಿ ಮಾತುಗಳಾಗಲಿ ಅಥವಾ ವರ್ತನೆಗಳಾಗಲಿ ಮಾಡದೆ ಅಂತಹವನ್ನೆಲ್ಲಾ ತಡೆಯುತ್ತಾನೆ.

ಆತನು ಮಿತಭಾಷಿಯಾಗಿರುತ್ತಾನೆ ಹೊರತು ಹರಟೆಕಾರನಾಗಿರುವುದಿಲ್ಲ. ಹೀಗಾಗಿ ವ್ಯಕ್ತಿಯೊಬ್ಬನು ಇಚ್ಛಾಪೂರ್ವಕವಾಗಿ ತನ್ನನ್ನು ಸುಶಿಕ್ಷಣಗೊಳಿಸಿ ಕೊಂಡು ಅರ್ಥಭರಿತ ನುಡಿಯ ನಡವಳಿಕೆಯವನಾಗುತ್ತಾನೆ. ಅಂತಹ ಮನುಷ್ಯನು ಸ್ವಯಂಚಾಲಿತವಾಗಿ ಚಿತ್ತವಿಶುದ್ಧಿಯನ್ನು ತರುತ್ತಾನೆ. ಮೂರು ಕಾರ್ಯ ಕಮ್ಮಗಳು ಮತ್ತು ನಾಲ್ಕು ವಾಣಿಯ ಕಮ್ಮಗಳು ಇಡಿಯಾಗಿ ಶೀಲವಿಶುದ್ದಿಯನ್ನು ತರುತ್ತವೆ.

ಶೀಲವಿಶುದ್ಧಿಯೆಂದರೆ, ನೈತಿಕತೆಯ ಪರಿಶುದ್ಧಿಯಾಗಿದೆ. ಅರ್ಥಗರ್ಭಿತ ವಾಗಿ ಚಿತ್ತವನ್ನು ಶುದ್ಧಿಗೊಳಿಸುತ್ತದೆ, ಸಶಕ್ತನನ್ನಾಗಿಸುತ್ತದೆ ಮತ್ತು ಸಂವೃದ್ಧನನ್ನಾಗಿಸುತ್ತದೆ. ಹೀಗಾಗಿ ಎಲ್ಲಾ ಅನೈತಿಕ ಮಾನಸಿಕ ಚಟುವಟಿಕೆಗಳು ನಿಯಂತ್ರಿತವಾಗುತ್ತದೆ. ಉದಾಹರಿಸುವುದಾದರೆ ವ್ಯಕ್ತಿಯೊಬ್ಬನು ನೈತಿಕವಾಗಿ ಶುದ್ಧನಾದಾಗ ಆತನ ಮನಸ್ಸು ಸಹಾ ಶುದ್ಧವಾಗಿ ಆತನು ದುರಾಸೆಯ ಯೋಚನೆಗಳಿಂದ ಮುಕ್ತನಾಗುತ್ತಾನೆ. ಹಾಗೆಯೇ ದ್ವೇಷದ ಹಾಗು ಮಿಥ್ಯಾದೃಷ್ಟಿಯ ಯೋಚನೆಗಳಿಂದ ದೂರವಿರುತ್ತಾನೆ. ಪ್ರತಿಯಾಗಿ ಆತನು ಅಲ್ಪ ಬಯಕೆಗಳಿಂದ ಕೂಡಿದವನಾಗುತ್ತಾನೆ. ಮೈತ್ರಿಯಿಂದ ಕೂಡಿದವನಾಗಿ, ಯೋಗ್ಯ ದೃಷ್ಟಿಕೋನವುಳ್ಳವನಾಗುತ್ತಾನೆ. ಕಾಯ, ವಾಚ ಮತ್ತು ಮನೋ ಕಮ್ಮಗಳಲ್ಲಿ, ಮನೋ ಕಮ್ಮವೇ ಅತ್ಯಂತ ಸೂಕ್ಷ್ಮವು ಮತ್ತು ಅತ್ಯಂತ ಪ್ರಬಲವು, ಪ್ರೇರಕವೂ ಆಗಿದೆ ಎಂದು ಹೇಳಲಾಗಿದೆ.

ಆಗಾಗ್ಗೆ ವ್ಯಕ್ತಿಯು ಯೋಚಿಸುವುದು ಏನೆಂದರೆ 'ದೈಹಿಕ ಕಮ್ಮಗಳು (ಕಾರ್ಯಗಳು) ಒರಟಾಗಿರುವುದರಿಂದ, ನಯವಿಲ್ಲದ್ದರಿಂದಾಗಿ ದೈಹಿಕ ಕಾರ್ಯಗಳೇ ಹೆಚ್ಚು ಶಕ್ತಿಶಾಲಿ' ಎಂದು. ನಂತರ ಅವನು ಹಿಂಬಾಲಿಸುವುದೇ ಮಾತಿನ ಕಮ್ಮಗಳು. ಏಕೆಂದರೆ ಅವು ಸಹಾ ಒರಟಾಗಿ ಮತ್ತು ಮೊಂಡಾಗಿರುವುದರಿಂದಾಗಿ. ಆದರೆ ಮಾನಸಿಕ ಕಮ್ಮಗಳು ಸೂಕ್ಷ್ಮವಾಗಿರುವುದರಿಂದ ಮತ್ತು ಅರಿಯಲು ಕಷ್ಟವೇ ಆಗಿರುವುದರಿಂದ ಅದೇರೀತಿ ದುರ್ಬಲ ಕಮ್ಮವೆಂದು ತಿಳಿಯುತ್ತಾರೆ. ಆದರೆ ಸತ್ಯವು ಅದಕ್ಕೆ



ತೀರ ವಿರುದ್ಧವಾಗಿದೆ. ಮಾನಸಿಕ ಕಮ್ಮಗಳೇ ಅತ್ಯಂತ ಸಶಕ್ತವಾಗಿವೆ. ನಂತರ ಬರುವುದೇ ಮಾತಿನ ಕಮ್ಮಗಳು ಹಾಗೂ ಕೊನೆಯಲ್ಲಿ ಬರುವುದೇ ದೈಹಿಕ ಕಮ್ಮಗಳು. ಈ ಹತ್ತು ವಿಧದ ಕುಶಲ ಐಚ್ಛಿಕ ಕ್ರಿಯೆಗಳಿಂದ (ಕಮ್ಮಗಳಿಂದ) ವ್ಯಕ್ತಿಯು ಕ್ರಿಯೆಗಳ (ಕಮ್ಮದ) ಮೇಲೆ ಪ್ರಭುತ್ವ ಪಡೆಯುವುದಷ್ಟೇ ಅಲ್ಲದೆ ಮೂರು ಬಗೆಯ ವಿಶುದ್ದಿಗಳನ್ನು ಗಳಿಸಲು ಸಾಮರ್ಥ್ಯ ಹಾಗೂ ಬಲಗಳನ್ನು ಪಡೆಯುತ್ತಾನೆ. ಅದೆಂದರೆ ಶೀಲವಿಶುದ್ದಿ (ನೈತಿಕತೆಯ ಪರಿಶುದ್ದಿ), ಚಿತ್ತವಿಶುದ್ದಿ (ಮನಸ್ಸಿನ ಪರಿಶುದ್ದಿ) ಮತ್ತು ದಿಟ್ಠಿವಿಶುದ್ದಿ (ಅರಿವಿನ, ಮಿಥ್ಯಾ ದೃಷ್ಟಿಕೋನಗಳಿಂದ) ಪರಿಶುದ್ಧಿ.

ಈ ಮಹಾ ಕೌಟುಂಬಿಕ ಮೌಲ್ಯಗಳು ವಿಶುದ್ದಿಯನ್ನು ತರುವುದರ ಜೊತೆಗೆ ಮನಸ್ಸನ್ನು ವಿಶಾಲಗೊಳಿಸುತ್ತದೆ. ಒಬ್ಬನು ವಿಶಾಲ ಮನಸ್ಕನಾದವನು, ಅದರಿಂದಾಗಿ ಪ್ರಜ್ಞಾ ವಿಕಾಸಕ್ಕೆ ಸಹಾಯವಾಗುವುದು. ಈ ರೀತಿಯಲ್ಲಿರುವ ವಿಶಾಲ ಮನಸ್ಕನು ಸಂಕುಚಿತದ ವೃತ್ತಕ್ಕೆ ಸೀಮಿತವಾಗಲಾರನು. ಅಂದರೆ ಕುಟುಂಬ ಅಥವಾ ಮಿತ್ರರು ಎಂಬಷ್ಟಕ್ಕೆ ಸೀಮಿತವಾಗಲಾರ. ಆಗ ಆತನಿಗೆ ದೂರದ ಬಂಧುಗಳು ಹತ್ತಿರದವರಾಗು ತ್ತಾರೆ. ಆಗ ಆತನ ಕೌಟುಂಬಿಕ ಪ್ರಜ್ಞೆಯು ವಿಕಾಸವಾಗುವುದು ಅಂದರೆ ಅದರಲ್ಲಿ ಸರ್ವ ಮಿತ್ರರು, ಸಾಮಾನ್ಯರು ಎಲ್ಲರೂ ಸೇರಿಕೊಳ್ಳುತ್ತಾರೆ. ಎಲ್ಲರನ್ನು ಆತನು ತನ್ನ ಸ್ವಂತ ಕುಟುಂಬದವರಂತೆ ಕಾಣುತ್ತಾನೆ. ಆತನು ನೀಡುವಿಕೆಯಲ್ಲಿ ದಾನಿಯಾಗುತ್ತಾನೆ. ವರ್ತನೆಯಲ್ಲಿ ಶೀಲವಂತನಾಗುತ್ತಾನೆ. ಮತ್ತು ಬಂಧುಗಳಿಗೆಲ್ಲ ಸಹಾಯ ಮಾಡುವವನಾಗುತ್ತಾನೆ. ಇಂತಹವೆಲ್ಲ ಆಗಬೇಕಾದರೆ ಆತನ ಸುಕಮ್ಮಗಳಿಂದಲೇ ಸಾಧ್ಯವಾಗುವುದು. ಆತನು ಇಲ್ಲಿ ಪ್ರತಿ ರೀತಿಯಲ್ಲೂ ನಿಂದಾತೀತನಾಗುವಂತೆ ಕಾರ್ಯವಹಿಸುತ್ತಾನೆ. ಕಶ್ಮಲಯುತ ಜೀವನ ಮತ್ತು ಬೌದ್ಧ ಮೌಲ್ಯಗಳು ಎಂದಿಗೂ ಜೊತೆಯಲ್ಲಿ ಸಾಗಲಾರವು.

ಇನ್ನೊಂದು ವಿಧವಾಗಿ ಹೇಳುವುದಾದರೆ ಕೇವಲ ನಿಂದಾತೀತವಾದ ಮತ್ತು ಕಲ್ಮಶರಹಿತ ಕಮ್ಮಗಳು ಮೂರು ದ್ವಾರಗಳಾದ ಕಾಯ, ವಾಚ,

ಮಾನಸಿಕವಾಗಿ ಮಾಡಿದಾಗ ಮಾತ್ರ ತ್ರಿವಿಧದ ಪರಿಶುದ್ಧತೆಯು ದೊರೆಯುವುದು. ಇವು ಕೌಟುಂಬಿಕ ಮೌಲ್ಯಗಳಲ್ಲಿ ಬರುವುದು.

ಈ ಜಾಲಬಂಧದ ಮೇಲ್ನೋಟವು ಸಹಾ ಅದ್ಭುತವಾದ ನೈತಿಕ ಪರಮಾರ್ಥ ಮೌಲ್ಯಗಳಿಂದ ಕೂಡಿವೆ. ಇದರಿಂದಾಗಿ ನಮಗೆ ಪರಮಾರ್ಥದ ಪಕ್ವತೆಯ ಸ್ವರೂಪ ತಿಳಿಯಲು ಸಹಾಯವಾಗುತ್ತದೆ ಮತ್ತು ಅವುಗಳ ವಿಕಾಸತೆಯು ತಿಳಿಯುತ್ತದೆ. ಅಪಾರ ಸಂಖ್ಯೆಯ ಉಪಾಸಕರು ಮತ್ತು ಉಪಾಸಿಕೆಯರು ಬುದ್ಧ ಭಗವಾನರ ಕಾಲದಲ್ಲಿ ಇದರಲ್ಲಿ ತಲ್ಲೀನರಾಗುತ್ತಿದ್ದರು. ಆಗ ಅವರು ಸೋತಪನ್ನರಾಗುತ್ತಿದ್ದರು, ಸಕದಾಗಾಮಿಗಳಾಗುತ್ತಿದ್ದರು, ಅನಾಗಾಮಿಗಳಾಗುತ್ತಿದ್ದರು. ಅಂದರೆ ಬುದ್ಧ ಭಗವಾನರ ಬೋಧನೆಯಿಂದಾಗುವ ಜ್ಞಾನದಿಂದ ಜ್ಞಾನೋದಯ ಪಡೆದ ಶಿಷ್ಯರಾಗಿದ್ದರು. ಅಪಾರ ಸಂಖ್ಯೆಯಲ್ಲಿ ಈ ರೀತಿಯಾಗಿ ಪರಿವರ್ತನೆ ಹೊಂದುತ್ತಿದ್ದರು. ಈ ಬಗ್ಗೆ ಪರಮ ಸತ್ಯದ ಮಾಹಿತಿ ನೀಡುವ ಪಟ್ಠಾನದಲ್ಲಿ ನಮಗೆ ಮಾಹಿತಿ ಸಿಗುತ್ತದೆ.

ಅವರು ಈ ಕೌಟುಂಬಿಕ ಮೌಲ್ಯಗಳನ್ನು ಸಾವಿರಾರು ವರ್ಷಗಳಿಂದ ಪಾಲಿಸಿಕೊಂಡು ಬಂದಿದ್ದಾರೆ. ಅವರು ಅವನ್ನು ಪೂರ್ಣಗೊಳಿಸುತ್ತಲೂ ಬಂದಿದ್ದಾರೆ. ತಮ್ಮ ಪ್ರತಿ ಉತ್ತಮ ಕಮ್ಮಕ್ಕೆ ಪ್ರತಿಯಾಗಿ ಅವರು ಭವಿಷ್ಯದಲ್ಲಿ ಬುದ್ಧರ ಉದಯವಾದಾಗ ತಾವು ಸಹಾ ಅಂತಹ ಸನ್ನಿವೇಶದಲ್ಲೇ ಆ ಕಾಲದಲ್ಲೇ ಹುಟ್ಟುವ ಆದಿಷ್ಠಾನ (ದೃಢಸಂಕಲ್ಪ) ಮಾಡುತ್ತಾರೆ. ಈ ಅದಿಷ್ಠಾನವನ್ನು ಅರ್ಥ ಮಾಡಿಕೊಳ್ಳುವುದೆಂದರೆ ಬುದ್ಧಶಾಸನದ ಕಾರಣಕ್ಕಾಗಿ ಸೇವೆ ಮಾಡುವುದೆಂದು ಅರ್ಥ. ಅಂದರೆ ಜನರಿಗೆ ಇನ್ನಷ್ಟು ಸಮರ್ಥರನ್ನಾಗಿಸುವುದು ಗೃಹಸ್ಥರಾಗಿದ್ದಾಗಲು ಉನ್ನತವಾದ ಯೋಗ್ಯ ಜೀವನ ಮತ್ತು ಯೋಗ್ಯ ಕಮ್ಮಗಳನ್ನು ಈ ನಾಲ್ಕು ಸಾಲಿನ ಗಾಥೆಯಂತೆ ಆಚರಿಸುವುದಾಗಿದೆ. ಪ್ರಾಪಂಚಿಕರು ಪ್ರಾಪಂಚಿಕತೆಯಲ್ಲಿದ್ದರೂ ಸಹಾ ಚಿತ್ತಚಾಂಚಲ್ಯದಿಂದ ಮೇಲೆದ್ದು ಲೋಕೋತ್ತರ ಆಯಾಮದ ಅಮರತ್ವ (ನಿಬ್ಬಾಣ)ವನ್ನು ಹುಡುಕುವುದೇ ಇಲ್ಲಿನ ಆದರ್ಶವಾಗಿದೆ.



# ಉಪಾಲಿ ಸುತ್ತ

## (ಮಜ್ಝಿಮನಿಕಾಯ–56)

"ನಾನು ಹೀಗೆ ಕೇಳಿದ್ದೇನೆ, ಒಮ್ಮೆ ಭಗವಾನರು ನಳಂದದ ಪಾವಾರಿಕ ಮಾವಿನ ತೋಪಿನಲ್ಲಿ ತಂಗಿದ್ದರು. ಅದೇವೇಳೆಯಲ್ಲಿ ನಿಗಂಠನಾತಪುತ್ತ (ವರ್ಧಮಾನ ಮಹಾವೀರ)ರು ಸಹಾ ನಳಂದದಲ್ಲೇ ತಮ್ಮ ನಿಗಂಠ ಅನುಯಾಯಿಗಳೊಂದಿಗೆ ತಂಗಿದ್ದರು. ಆಗ ನಿಗಂಠರ ದೀಘ (ಉದ್ದವಾದ) ತಪಸ್ಸಿ (ತಪಸ್ವಿ) ತನ್ನ ಆಹಾರವನ್ನು ಮುಗಿಸಿಕೊಂಡು ಭಗವಾನ್ ಬುದ್ಧರಲ್ಲಿಗೆ ಬಂದರು. ಅವರಿಗೆ ಗೌರವ ಅರ್ಪಿಸಿ ನಿಂತುಕೊಂಡರು. ಆತ ನಿಂತೇ ಇರುವುದನ್ನು ಕಂಡು ಭಗವಾನರು ಹೀಗೆ ಹೇಳಿದರು: "ಇಲ್ಲಿ ಆಸನಗಳಿವೆ ತಪಸ್ಸಿ, ನಿಮಗೆ ಇಷ್ಟವಾದುದರಲ್ಲಿ ಕುಳಿತುಕೊಳ್ಳಿ" ನಂತರ ದೀಘ ತಪಸ್ಸಿಯು ತಗ್ಗಾದ ಆಸನದಲ್ಲಿ ಒಂದೆಡೆ ಕುಳಿತರು. – ಮಜ್ಝಿಮನಿಕಾಯ–56

* * *

ಬುದ್ಧ ಭಗವಾನರ ಕಾಲದಲ್ಲಿ ನಾಳಂದವು ಖ್ಯಾತ ನಗರಿಯಾಗಿತ್ತು. ಅದು ಮಗಧ ರಾಜ್ಯದ ರಾಜಧಾನಿ ರಾಜಗೃಹದ ಸಮೀಪದಲ್ಲೇ ಇತ್ತು. ಭಗವಾನರು ವರ್ಷದಲ್ಲಿ ಎಂಟು ತಿಂಗಳು ಧಮ್ಮ ಬೋಧನೆಯಲ್ಲೇ ಕಾಲವನ್ನು ಸಾರ್ಥಕಗೊಳಿಸುತ್ತಿದ್ದರು. ಅವರು ತಮ್ಮ ಧಮ್ಮಾಚಾರಿಕಾ (ಬೋಧನಾ ಯಾತ್ರೆ) ದಲ್ಲಿ ಕಾಲ್ನಡಿಗೆಯಲ್ಲೇ ಬೃಹತ್ ಭಿಕ್ಷು ಸಮೂಹ ದೊಂದಿಗೆ ಸ್ಥಳದಿಂದ ಸ್ಥಳಕ್ಕೆ ಹೋಗುತ್ತಿದ್ದರು. ಹೀಗೆಯೇ ಅವರು ವಿವಿಧ ರಾಜ್ಯಗಳಾದ ಮಗಧ, ಕಾಶಿ, ಕೋಸಲ, ಅವಂತಿ, ಮದ್ದ, ಅಂಗ, ವಂಗ ಇತ್ಯಾದಿಗಳಲ್ಲಿ ಸಂಚರಿಸುತ್ತಿದ್ದರು.

ನಾಳಂದವು ಭಗವಾನರ ಅಗ್ರ ಶ್ರಾವಕರಾದ ಪರಮಪೂಜ್ಯ ಸಾರಿಪುತ್ತರ ಜನ್ಮಸ್ಥಳವೂ ಸಹಾ ಆಗಿತ್ತು. ನಾಳಂದದಲ್ಲಿ ಅಸಂಖ್ಯಾತ ಕೋಟ್ಯಾಧೀಶರು ವಾಸಿಸುತ್ತಿದ್ದರು. ಅಂತಹವರಲ್ಲಿ ಉಪಾಲಿಯು ಸಹಾ ಒಬ್ಬನಾಗಿದ್ದನು. ಆತನು ರಾಜ ಕೋಶಾಧ್ಯಕ್ಷ ಪಾವಾರಿಕ ಶ್ರೇಷ್ಠಿಯ ಹಿಂಬಾಲಕನಾಗಿದ್ದನು.

ಈ ಪಾವಾರಿಕ ಸೆಟ್ಟಿಯು (ಶ್ರೇಷ್ಠಿ) ಭಗವಾನರಿಗೆ ಅತ್ಯಂತ ಶ್ರದ್ಧಾವಂತನಾಗಿದ್ದನು. ಹೀಗಾಗಿ ಆತನು ಉತ್ತಮೋತ್ತಮವಾದ ಮಾವಿನ ತೋಪನ್ನೇ ಬುದ್ಧಸಂಘಕ್ಕೆ ದಾನವಾಗಿ ಅರ್ಪಿಸಿದ್ದನು. ಹಾಗೆಯೇ ದೊಡ್ಡದಾದ ವಿಹಾರವನ್ನು ಆ ತೋಪಿನಲ್ಲಿ ಕಟ್ಟಿಸಿದ್ದನು. ಆ ವಿಹಾರದಲ್ಲಿ ಎಲ್ಲಾ ಸೌಲಭ್ಯಗಳು ಇದ್ದವು. ಅಂದರೆ ಭಿಕ್ಷುಗಳ ಬೃಹತ್ ಸಮೂಹಕ್ಕೆ ಧ್ಯಾನಮಂದಿರ, ಗುಡಿಸಲುಗಳು, ಶಯನಗೃಹ ಇತ್ಯಾದಿ ಸೌಲಭ್ಯಗಳಿದ್ದವು.

ಕೋಟ್ಯಾಧೀಶ ಉಪಾಲಿಯು ನಿಗಂಠನಾತಪುತ್ತನ ಗೃಹಸ್ಥ ಶಿಷ್ಯನಾಗಿದ್ದನು. ನಿಗಂಠ ಪದಕ್ಕೆ ಅರ್ಥ 'ನಗ್ನರು' ಎಂದು. ನಾತಪುತ್ತನಿಗೂ ಸಹಾ ಅಪಾರ ಶಿಷ್ಯ ಸಮೂಹವಿತ್ತು, ಗೃಹಸ್ಥ ಸಮೂಹವೂ ಇತ್ತು. ಅಂತಹ ಗೃಹಸ್ಥ ಸಮೂಹಕ್ಕೆ ಅಗ್ರನೇ ಉಪಾಲಿ. ಹಾಗು ಸನ್ಯಾಸಿಗಳಿಗೆ ನಾಯಕ ದೀಘ ತಪಸ್ವಿಯೇ ಆಗಿದ್ದನು. ಈ ನಿಗಂಠರು ದೇಹದಂಡನೆಯೇ ವಿಮುಕ್ತಿಗೆ ಹಾದಿ ಎಂದು ನಂಬಿದ್ದರು. ಅವರು ದೇಹ ದಂಡನೆಯನ್ನು ಪಾಲಿಸುತ್ತಿದ್ದರು. ಅಂದರೆ ಹಿಂದಿನ ಜನ್ಮಗಳಲ್ಲಿ ಪಾಪ ಮಾಡಿರುವುದಕ್ಕಾಗಿ ಈ ಸ್ವ-ದಂಡನೆಯನ್ನು ಆಚರಿಸುತ್ತಿದ್ದರು.

ಆದರೆ ಬುದ್ಧ ಭಗವಾನರ ಬೋಧನೆಯಂತೆ ಪುಣ್ಯ ಮತ್ತು ಪಾಪ ಕಮ್ಮಗಳು ಇಚ್ಛೆಯಿಂದಲೇ ಆಗುತ್ತವೆ. ಆ ಕಮ್ಮದಲ್ಲಿ ಇಚ್ಛೆಯಿಲ್ಲದಿದ್ದಲ್ಲಿ ಆ ಕಮ್ಮಕ್ಕೆ ಫಲವಿಲ್ಲ. ನಿಷ್ಫಲ. ಏಕೆಂದರೆ ಯಾವುದೇ ಇಚ್ಛೆಯಿಲ್ಲದೆ ನೈತಿಕತೆಯ ಹೊಣೆಯಿಲ್ಲದೆ ಕಮ್ಮವು ಆಗಿವೆ. ಅಂತಹ ಕಮ್ಮವು ಪರಿಣಾಮ ನೀಡಲಾರದು. ಕಮ್ಮವು ಫಲ ನೀಡಬೇಕಾದರೆ ನೈತಿಕತೆಯ ಹೊಣೆಯಿರಬೇಕು. ಅಂದರೆ ಇಚ್ಛೆಪಟ್ಟು, ಇಷ್ಟಪಟ್ಟು ನಿರ್ಧಾರ ಕೈಗೊಂಡು ನಡೆಸಿರಬೇಕು. ಅಂತಹುದಕ್ಕೆ ಪ್ರೇರಕ ಬಲಗಳಾದ ಮೂರು ಅಕುಶಲ ಬೇರುಗಳು ಸಹಾ ಆಗಿರುವ ಲೋಭ, ದ್ವೇಷ ಮತ್ತು ಮೋಹಗಳಿರಬೇಕು. ಅಥವಾ ಕುಶಲ ಕಮ್ಮಕ್ಕೆ ಪ್ರೇರಕ ಬಲಗಳು ಹಾಗು ಬೇರುಗಳು ಆಗಿರುವ ಅಲೋಭ, ಅದ್ವೇಷ ಮತ್ತು ಅಮೋಹಗಳಿಂದ ಕೂಡಿರಬೇಕು. ಆಗ ಮಾತ್ರ ಅಂತಹ ಕ್ರಿಯೆಯು ಕಮ್ಮ ಎನಿಸಿಕೊಳ್ಳುತ್ತದೆ. ಕುಶಲ ಅಥವಾ ಅಕುಶಲ ಮೂಲಗಳಂತೆ ಅವು ಪಾಪ ಅಥವಾ ಪುಣ್ಯ ಎನಿಸಿಕೊಳ್ಳುತ್ತದೆ.



ಬುದ್ಧ ಧಮ್ಮದಲ್ಲಿ ಶೀಲವು ಹಲವಾರು ಅಂಗಗಳಿಂದ ಅವಲಂಬಿತವಾಗುತ್ತದೆ. ಅದು ಇಚ್ಛೆಯಿಂದ ಕೂಡಿದ ಕ್ರಿಯೆಯಾಗಿರುತ್ತದೆ. ಆದರೆ ಅದರ ಪ್ರೇರಕ ಅಥವಾ ಮೂಲ ಅಥವಾ ಬೇರುಗಳು ಕುಶಲ ಮೂಲಗಳಾದ ಅಲೋಭ, ಅದ್ವೇಷ ಮತ್ತು ಅಮೋಹದಿಂದಾಗಿರುತ್ತದೆ. ಹಾಗೆಯೇ ಪಾಪಕ್ಕೆ ಅಕುಶಲ ಮೂಲಗಳಾದ ದ್ವೇಷ, ಲೋಭ ಮತ್ತು ಮೋಹ ಆಗಿರುತ್ತದೆ.

ಆದರೆ ಬುದ್ಧ ಧಮ್ಮವು ತಾವು ಇಚ್ಛಿಸಿಲ್ಲದೆ, ಅರಿವಿಲ್ಲದೆ ಮಾಡಿದ ಕಮ್ಮಕ್ಕೆ ತಮ್ಮನ್ನು ಹೊಣೆಗಾರನನ್ನಾಗಿ ಮಾಡಿಕೊಳ್ಳುವುದಿಲ್ಲ. ಹಾಗು ಅದಕ್ಕಾಗಿ ಪರಿಹಾರವೆಂಬಂತೆ ದೇಹದಂಡನೆಯನ್ನು ಆಯ್ಕೆ ಮಾಡುವುದಿಲ್ಲ. ಅಂತಹ ಮಿಥ್ಯಾದೃಷ್ಟಿಯು ಬೌದ್ಧರಿಗೆ ಇಲ್ಲ. ಹೀಗಾಗಿ ಬುದ್ಧ ಧಮ್ಮವು ದೇಹದಂಡನೆಯಂತಹ ಅತಿರೇಕವನ್ನು ತಿರಸ್ಕರಿಸುತ್ತದೆ. ಅಷ್ಟೇ ಅಲ್ಲದೆ ಬೌದ್ಧರಲ್ಲಿ ದಂಡನೆ ಅಥವಾ ಶಿಕ್ಷೆ ಎಂಬಂತಹ ವಿಷಯವೇ ಇಲ್ಲವಾಗಿದೆ. ಅದಕ್ಕೆ ಬದಲಾಗಿ ಸ್ವ ಪರಿಶುದ್ಧತೆಗೆ ಗುರಿಯಾಗಿ ಕುಶಲ ಕಮ್ಮಗಳಿವೆ. ಒಂದು ಪರಿಶುದ್ಧ ಕಮ್ಮ ಅದು ಅಲೋಭ, ಅದ್ವೇಷ ಮತ್ತು ಅಮೋಹಗಳಿಂದ ಆಧಾರಿತವಾಗಿರುತ್ತದೆ. ಇವುಗಳಿಂದ ಚಿತ್ತಶುದ್ಧಿಯಾಗಿ ಶೀಲಕ್ಕೆ ಜನ್ಮ ನೀಡುತ್ತವೆ. ಶೀಲವು ಸಮಾಧಿಗೆ ಕರೆದೊಯ್ಯುತ್ತದೆ. ಶೀಲ ಮತ್ತು ಸಮಾಧಿಯು ಪ್ರಜ್ಞಾವನ್ನು ತರುತ್ತವೆ. ಅಂದರೆ ವಾಸ್ತವಿಕತೆಯ ಸತ್ಯದರ್ಶನವಾಗುತ್ತದೆ.

ಹೀಗಾಗಿ ಪರಮಾರ್ಥದ ಜೀವನವು ಪರಿಶುದ್ಧತೆಯ ಪ್ರಕ್ರಿಯೆಯನ್ನು ಹೊಂದಿರುತ್ತದೆ. ಪ್ರಾರಂಭದಲ್ಲಿ ನಾವು ಮಾಡುವ ಕಮ್ಮಗಳ ಶುದ್ಧತೆಯಾಗುವುದು. ಅದನ್ನೇ ಶೀಲವೆನ್ನುವೆವು. ಹಾಗೇ ಇದು ಚಿತ್ತ ಪರಿಶುದ್ಧತೆಯೆಡೆಗೆ ಮತ್ತು ಪ್ರಜ್ಞಾ ವಿಶುದ್ದಿಯೆಡೆಗೆ ಕರೆದೊಯ್ಯುವುದು. ಈ ಮೂರು ವಿಶುದ್ದಿಗಳಾದ ಶೀಲವಿಶುದ್ದಿ, ಚಿತ್ತವಿಶುದ್ದಿ ಹಾಗೂ ಪ್ರಜ್ಞಾ ವಿಶುದ್ದಿಯು ನಿಬ್ಬಾಣಕ್ಕೆ ತಲುಪಿಸುವುದು, ಅಂದರೆ ವಿಮುಕ್ತಿಯೆಡೆಗೆ ಕರೆದೊಯ್ಯುವುದು. ಯಾರೆಲ್ಲ ತಮ್ಮ ಸತತ ಪರಿಶ್ರಮದಿಂದಾಗಿ ನಿಬ್ಬಾಣವನ್ನು ಪ್ರಾಪ್ತಿಮಾಡಿರುವರೋ ಅವರನ್ನು ಜ್ಞಾನೋದಯ ಪಡೆದ ವ್ಯಕ್ತಿಗಳೆನ್ನುವರು.

ಈ ಇಡೀ ಪ್ರಕ್ರಿಯೆಯ ಅಭಿವೃದ್ಧಿಯನ್ನು 'ಮಜ್ಝಿಮ ಪಟಿಪದ' (ಮಧ್ಯಮ ಮಾರ್ಗ) ಎನ್ನುವೆವು. ಏಕೆಂದರೆ ಇದು ಎರಡು ಅತಿರೇಕಗಳಾದ ದೇಹದಂಡನೆ ಮತ್ತು ಇಂದ್ರಿಯ ಭೋಗಗಳನ್ನು ಮೀರಿದೆ.

ಬುದ್ಧ ಭಗವಾನರ ಕಾಲದಲ್ಲಿ 64 ವಿವಿಧ ಧಮ್ಮಗಳ ಶಾಲೆಗಳಿದ್ದವು (ಕೇಂದ್ರಗಳು). ಆದರೆ ಅವೆಲ್ಲವೂ ಈ ಅತಿರೇಕಗಳಲ್ಲೇ ಸಿಲುಕಿದ್ದವು. ಧಮ್ಮದ ಹೆಸರಿನಲ್ಲಿ ಜನರು ದೇಹದಂಡನೆಗಳಲ್ಲಿ ನಿರತರಗುತ್ತಿದ್ದರು. ಅಥವಾ ಇಂದ್ರಿಯ ಭೋಗಗಳಲ್ಲಿ ನಿರತರಾಗುತ್ತಿದ್ದರು. ಈ ರೀತಿಯಾಗಿ ಧಮ್ಮವು ಗಡುಸಾಗಿ ನಂಬಿಕೆಗಳಿಂದ ಮತ್ತು ವಿಧಿ–ಕಂದಾಚಾರಗಳಿಂದ ಆಧಾರಿತವಾಗಿ ಪ್ರಮಾಣಬದ್ಧ ಸಂಸ್ಥೆಗಳಾಗಿ ಏರ್ಪಟ್ಟವು. ಬುದ್ಧರ ಕಾಲದಲ್ಲಿಯೂ ಸಹಾ ಜನರು ಬಹುಸಂಖ್ಯಾತವಾಗಿ ಈ ಎರಡು ಅತಿರೇಕಗಳಲ್ಲೇ ಸಿಲುಕಿ ಕೊಂಡಿದ್ದರು. ಇಂದಿಗೂ ಸಹಾ ಭಾರತದಲ್ಲಷ್ಟೇ ಅಲ್ಲದೆ ಇಡೀ ಜಗತ್ತಿನಲ್ಲಿಯು ಸಹಾ ಈ ಎರಡು ಅತಿರೇಕಗಳಲ್ಲೇ ಮುಳುಗಿದ್ದಾರೆ.

ನಾಲ್ಕು ಮಹಾನ್ ಆರ್ಯಸತ್ಯಗಳನ್ನು ಸಂಶೋಧಿಸಿದ ನಂತರ, ಆ ಪರಮಾರ್ಥ ಸತ್ಯಗಳ ಸಾಕ್ಷಾತ್ಕಾರದ ನಂತರ ಭಗವಾನ್ ಬುದ್ಧರು ಎಲ್ಲಾರೀತಿಯ ಅತಿರೇಕದ ಆಚರಣೆಗಳನ್ನು, ಅವು ವೈದಿಕವಾಗಿರಬಹುದು ಅಥವಾ ಅವೈದಿಕವಾಗಿರಬಹುದು ಅವನ್ನೆಲ್ಲಾ ತಿರಸ್ಕರಿಸಿ ಮಧ್ಯಮ ಮಾರ್ಗವನ್ನು ಬೋಧಿಸಿದರು. ಆ ಮಹಾನ್ ಮಾರ್ಗವು ಎಲ್ಲಾರೀತಿಯ ಅತಿರೇಕಗಳನ್ನು ತಡೆಗಟ್ಟುತ್ತದೆ. ಪರಮಾರ್ಥ ಜೀವನವು ಸತ್ಯದ ಆಧಾರದಿಂದ ರಚಿತವಾಗಿದ್ದು, ಪರಿಶುದ್ಧತೆಗೆ ಕರೆದೊಯ್ಯುತ್ತದೆ ಹಾಗು ಜೀವನವನ್ನು ಲೋಕಿಯದಿಂದ ಲೋಕೋತ್ತರದೆಡೆಗೆ ಸಾಗಿಸುತ್ತದೆ.

ಅಂತಿಮವಾಗಿ ಜೀವನವು ಕ್ರಿಯೆಗಳಾಗಿ ರೂಪಾಂತರ ಹೊಂದುತ್ತವೆ. ಹೀಗಾಗಿ ಬುದ್ಧ ಧಮ್ಮದಲ್ಲಿ ಪರಮಾರ್ಥ ಜೀವನವು ಸರಿಯಾದ ನಿಶ್ಚಯದಿಂದ ಆರಂಭವಾಗುತ್ತದೆ ಮತ್ತು ಕಮ್ಮಗಳ ಶುದ್ಧತೆಗೆ ಮೂರು ದ್ವಾರಗಳಿವೆ. ಅವುಗಳೆಂದರೆ: ಕಾಯಕ, ವಾಚಕ ಮತ್ತು ಮನೋಕರ್ಮಗಳು. ಇವೇ ಆ ಸ್ಪಷ್ಟ ಪ್ರಧಾನ ದ್ವಾರಗಳಾಗಿವೆ. ಏಕೆಂದರೆ ಈ ದ್ವಾರಗಳ ಮೂಲಕವೇ ಕರ್ಮಗಳು ಉದಯಿಸುತ್ತವೆ ಹಾಗು ಸ್ಥಾಪಿತವಾಗುತ್ತವೆ.



ಈ ಮೂರು ರೀತಿಯ ಕಮ್ಮಗಳಲ್ಲಿ ಮಾನಸಿಕ ಕಮ್ಮವು ಅತ್ಯಂತ ಶಕ್ತಿಯುತವಾಗಿದೆ. ಆದ್ದರಿಂದ ಇದು ಅತ್ಯಂತ ಪ್ರಧಾನ್ಯಕರವಾಗಿದೆ. ಏಕೆಂದರೆ ಪ್ರತಿಯೊಂದು ಸಹಾ ಮನಸ್ಸಿನಿಂದಲೇ ಮುಂದಾಳತ್ವವನ್ನು ತಾಳುತ್ತವೆ. ದೈಹಿಕ ಕರ್ಮಗಳು ಸಹಾ.

ಈ ವಾಸ್ತವವನ್ನು ಬುದ್ಧ ಭಗವಾನರು ಧಮ್ಮಪದದ ಎರಡು ಗಾಥೆಗಳಲ್ಲಿ ಬಹು ಸುಂದರವಾಗಿ ವ್ಯಕ್ತಪಡಿಸಿದ್ದಾರೆ.

1. **"ಮನೋಪುಬ್ಬಂಗಮಾ ಧಮ್ಮಾ,**
   **ಮನೊಸೆಟ್ಠಾ ಮನೋಮಯಾ;**
   **ಮನಸಾ ಚೆ ಪದುಟ್ಠೆನಾ**
   **ಭಾಸತಿ ವಾ ಕರೊತಿ ವಾ;**
   **ತತೊ ನಂ ದುಖ್ಖಮನ್ವೆತಿ**
   **ಚಕ್ಕಂ' ವಾ ವಹತೊ ಪದಂ."** (ದ.ಪ.–1)

"ಮನಸ್ಸೇ ಎಲ್ಲಾ ಮಾನಸಿಕ ವಿಷಯ (ಸ್ಥಿತಿ)ಗಳಿಗೆ ಅಗ್ರಗಾಮಿ ಯಾಗಿದೆ. ಮನಸ್ಸೇ ಅವುಗಳ ನಾಯಕ. ಅವೆಲ್ಲವೂ ಮನಸ್ಸಿನಿಂದಲೇ ರಚಿಸಲ್ಪಟ್ಟಿದೆ. ಪ್ರದುಷ್ಟವಾದ ಮನಸ್ಸಿನಿಂದ ಒಬ್ಬನು ಮಾತನಾಡಿದರೆ ಅಥವಾ ಕಾರ್ಯ ಮಾಡಿದರೆ ಅಂತಹವನಿಗೆ ದುಃಖವು, ಚಕ್ರ ಎತ್ತಿನ ಹೆಜ್ಜೆಯನ್ನು ಹಿಂಬಾಲಿಸುವಂತೆ ಅನುಸರಿಸುವುದು."

2. **"ಮನೋಪುಬ್ಬಂಗಮಾ ಧಮ್ಮಾ,**
   **ಮನೊಸೆಟ್ಠಾ ಮನೋಮಯಾ;**
   **ಮನಸಾ ಚೆ ಪಸನ್ನೆನ**
   **ಭಾಸತಿ ವಾ ಕರೊತಿ ವಾ;**
   **ತತೊ ನಂ ಸುಖಮನ್ವೆತಿ**
   **ಛಾಯಾ ವಾ ಅನಪಾಯಿನೀ."**

"ಮನಸ್ಸೇ ಎಲ್ಲಾ ಮಾನಸಿಕ ವಿಷಯ (ಸ್ಥಿತಿ)ಗಳಿಗೆ ಅಗ್ರಗಾಮಿ ಯಾಗಿದೆ. ಮನಸ್ಸೇ ಅವುಗಳ ನಾಯಕ; ಅವೆಲ್ಲವೂ ಮನಸ್ಸಿನಿಂದಲೇ

ರಚಿಸಲ್ಪಟ್ಟಿದೆ. ಪ್ರಸನ್ನ ಮನಸ್ಸಿನಿಂದ ಒಬ್ಬನು ಮಾತನಾಡಿದರೆ ಅಥವಾ ಕಾರ್ಯ ಮಾಡಿದರೆ ಅಂತಹವನಿಗೆ ಸುಖವು ಎಂದಿಗೂ ಪ್ರತ್ಯೇಕಗೊಳ್ಳದ ನೆರಳಿನಂತೆ ಹಿಂಬಾಲಿಸುವುದು."

ಮನಸ್ಸೇ ಪ್ರತಿಯೊಂದಕ್ಕೂ ಮೂಲವಾಗಿದೆ, ಯಾವುದೆಲ್ಲವೂ ಇದೆಯೋ ಅವೆಲ್ಲವೂ ಮನಸ್ಸಿನಿಂದಲೇ ಉತ್ಪನ್ನವಾಗಿವೆ. ಅಂದರೆ ಪ್ರತಿಯೊಂದು ಮನಸ್ಸಿನಿಂದಲೇ ರಚಿತವಾಗಿವೆ. ಯಾವುದೆಲ್ಲ ಕ್ರಿಯೆಯನ್ನು ಒಬ್ಬನು ತನ್ನ ತ್ರಿದ್ವಾರಗಳಾದ ಕಾಯ, ವಾಣಿ ಮತ್ತು ಮನಸ್ಸಿನಿಂದ ಮಾಡಿದನೋ, ಅವೆಲ್ಲವೂ ಮನಸ್ಸಿನಿಂದಲೇ ಉದಯಿಸಿವೆ. ಆದುದರಿಂದ ಮನಸ್ಸು ಪರಿಶುದ್ಧವಾಗಿದ್ದರೆ ಆಗ ಪ್ರತಿಯೊಂದು ಪರಿಶುದ್ಧವಾಗುತ್ತವೆ. ಹಾಗೆಯೇ ಪ್ರತಿಯೊಂದು ಪರಿಶುದ್ಧವಾಗಿದ್ದಲ್ಲಿ ಮನಸ್ಸು ಶುದ್ಧವಾಗಿರುತ್ತದೆ. ಸರಳ ಸತ್ಯವೇನೆಂದರೆ ಯಾವುದೇ ಕಾರ್ಯವನ್ನು ಅಶುದ್ಧವಾದ ಮನಸ್ಸಿನಿಂದ ಮಾಡಿದಾಗ ನೋವುಭರಿತ ಅನುಭವವು ಹಿಂಬಾಲಿಸುವುದು. ಅದೇರೀತಿಯಾಗಿ ಯಾವುದೆಲ್ಲವನ್ನು ಪರಿಶುದ್ಧವಾದ ಮನಸ್ಸಿನಿಂದ ಯೋಚಿಸಿದರೆ, ಮಾತನಾಡಿದರೆ ಅಥವಾ ಕಾರ್ಯ ಮಾಡಿದರೆ ಆತನು ಪರಿಶುದ್ಧವಾದ ಸ್ಥಿತಿಗಳ ಕಡೆಗೆ ಚಲಿಸುತ್ತಿರುತ್ತಾನೆ. ಪರಿಶುದ್ಧತೆ ಮತ್ತು ಸುಖವು ಉನ್ನತವಾದ ಉದ್ದೇಶವಾದ ನಿಬ್ಬಾಣಕ್ಕೆ ಕರೆದೊಯ್ಯುತ್ತದೆ.

ಮೊದಲ ಗಾಥೆಯಲ್ಲಿ ಸಾಮ್ಯತೆಯನ್ನು ಸಹಾ ಬಳಸಲಾಗಿದೆ. "ದುಃಖವು ಚಕ್ರ ಎತ್ತಿನ ಹೆಜ್ಜೆಗಳನ್ನು ಹಿಂಬಾಲಿಸುವಂತೆ ಅನುಸರಿಸುವುದು."

ಎರಡನೆಯ ಗಾಥೆಯಲ್ಲಿ ಈ ಸಾಮ್ಯತೆಯನ್ನು ಬಳಸಲಾಗಿದೆ "ಸುಖವು ಎಂದಿಗೂ ಪ್ರತ್ಯೇಕಗೊಳ್ಳದ, ನೆರಳಿನಂತೆ ಹಿಂಬಾಲಿಸುವುದು."

ನಾತಪುತ್ತರು ದೇಹದಂಡನೆಯನ್ನು ಪ್ರತಿಪಾದಿಸುವವರಲ್ಲಿ ನಾಯಕರಾಗಿದ್ದರು. ಅವರು ಇಂತಹ ವಿರೋದಾತ್ಮಕ ವಾದವನ್ನು ಉಲ್ಲೇಖಿಸುತ್ತಿದ್ದರು. ಅದೇನೆಂದರೆ ದೇಹ ದಂಡನೆಯಲ್ಲಿ ಸಿಗುವಂತಹ ನೋವಿನ ಸ್ಥೂಲತೆಯೇ ಶಕ್ತಿಯುತವಾದುದು. ದೇಹದಷ್ಟು, ಮಾತು ಅಲ್ಲ ಮತ್ತು ಮಾನಸಿಕವೂ ಅಲ್ಲ. ಹಾಗೆಯೇ ಮಾನಸಿಕ ಶಿಕ್ಷೆಯು ಕ್ಷುಲ್ಲಕ ಎಂದು ಹೆಸರಿಸಿದ್ದರು. ತಾನು ಮಾಡಿದ ಯಾವುದೇ ತಪ್ಪಿಗಾಗಿ ತನ್ನನ್ನು



(ದೇಹವನ್ನು) ಶಿಕ್ಷಿಸಿಕೊಳ್ಳುವುದನ್ನು (ಚಿತ್ರಹಿಂಸೆ ಮಾಡಿಕೊಳ್ಳುವುದನ್ನು) ಸಮರ್ಥಿಸುತ್ತಿದ್ದರು. ಆತ ಹೇಳುವಂತೆಯೇ ಅದೇ ಅದರ ಗಂಭೀರತೆಯನ್ನು ಸಾರುತ್ತಿತ್ತು. ಅವರ ಸಿದ್ಧಾಂತದಂತೆ "ಕೆಟ್ಟದು ಅಥವಾ ಒಳ್ಳೆಯದು ಸಾರ್ವತ್ರಿಕ ತತ್ವಕ್ಕೆ ಆಧಾರವಾಗಿಲ್ಲ" ಎನ್ನುತ್ತಿದ್ದರು.

ಮತ್ತೆ ಅವರು ಹೀಗೂ ಹೇಳುತ್ತಿದ್ದರು: "ತಣ್ಣೀರನ್ನು ಕುಡಿಯಬಾರದು, ಹಾಗೆಯೇ ಸ್ನಾನವನ್ನೂ ಮಾಡಬಾರದು. ಅದು ಪಾಪ, ಏಕೆಂದರೆ ತಣ್ಣೀರಿನಲ್ಲಿ ಅಸಂಖ್ಯಾತ ಜೀವಿಗಳಿರುತ್ತವೆ. ಆದ್ದರಿಂದಾಗಿ ನೀರು ಕುಡಿಯುವುದು ಅಥವಾ ಸ್ನಾನ ಮಾಡುವುದು ಪಾಪವೆನ್ನುತ್ತಿದ್ದರು. ನಿಜಕ್ಕೂ ಅಂತಹ ನಂಬಿಕೆಗಳನ್ನು ನಿಷ್ಠವಾಗಿ ತಾಪಸಿಗಳು ಪಾಲಿಸಿದ್ದೇ ಆದರೆ ಅವರು ಸಾಯಬಹುದು.

ಬುದ್ಧ ಧಮ್ಮದಲ್ಲಿ ಇದಕ್ಕೆ ಪ್ರತಿಯಾಗಿ ನುಡಿಯುವುದು ಏನೆಂದರೆ: ಒಳಿತು ಅಥವಾ ಕೆಡಕು ನಿರ್ಧರಿಸುವುದು ಮೂರು ಬಗೆಯ ಪ್ರೇರಣೆಗಳಿಂದ ಹಾಗು ಇಚ್ಛೆಯಿಂದಾಗಿ. ಪಾಪವು ಇಲ್ಲಿ ಪಾಪ ಎನಿಸುವುದು ಏತಕ್ಕೆಂದರೆ ಅವು ಲೋಭದಿಂದ, ದ್ವೇಷದಿಂದ ಮತ್ತು ಮೋಹದಿಂದ ಪ್ರೇರಣೆ ಪಡೆದಿರುತ್ತವೆ ಅಥವಾ ಲೋಭ, ದ್ವೇಷ ಮತ್ತು ಮೋಹದಿಂದಾಗಿ ಬೇರೂರುತ್ತವೆ ಮತ್ತು ಇಚ್ಛಾಪೂರ್ವಕವಾಗಿ ಮಾಡಲ್ಪಟ್ಟಿರುತ್ತವೆ. ಈ ಪ್ರೇರಣೆಗಳು ಜೊತೆಗೂಡಿ ಕಾರ್ಯವಾಗಿರಬಹುದು.

ಇದಕ್ಕೆ ಪ್ರತಿಯಾಗಿ ನಿಗಂಠರ ಸಿದ್ಧಾಂತವಿದೆ, ಅಲ್ಲಿ ನಗ್ನತೆ, ಕೂದಲನ್ನು ಕೈಯಿಂದಲೇ ಕಿತ್ತುಹಾಕುವಿಕೆ, ಇತ್ಯಾದಿ ಬಗೆಯ ದೇಹದಂಡನೆಗಳಿವೆ. ಅವೆಲ್ಲಾ ಒಳ್ಳೆಯದು ಎಂದು ಅವರು ಭಾವಿಸುತ್ತಾರೆ ಮತ್ತು ಅವರು ಮನಸ್ಸಿನ ಸಂಪರ್ಕದ ಬಗ್ಗೆ ಸರಿಯಾಗಿ ಯೋಚಿಸಿಯೇ ಇಲ್ಲ. ಹೇಗೆಂದರೆ ಗಾಳಿಯು ಬೀಸಿದಾಗ, ಕೊಂಬೆಗಳು ಮತ್ತು ಎಲೆಗಳು ಸ್ವಯಂಚಾಲಿತವಾಗಿ ಅಲ್ಲಾಡುವುದು ಮಾಡುತ್ತವೆ. ಇದಕ್ಕಾಗಿ ಮನಸ್ಸಿನ ಅಗತ್ಯವಿಲ್ಲ. ಅದೇ ರೀತಿಯಾಗಿ ನಗ್ನತೆ ಮುಂತಾದ ಬಗೆಯ ದೇಹದಂಡನೆಗಳು ತಾವಾಗಿಯೇ ಒಳ್ಳೆಯವು, ಅದಕ್ಕಾಗಿ ಮನಸ್ಸಿನ ಅಗತ್ಯವಿಲ್ಲ ಎಂದು ಬಾಲಿಷವಾಗಿ, ಅಸಂಬದ್ಧವಾಗಿ ನುಡಿದುಬಿಡುತ್ತಾರೆ.

ವಾಸ್ತವಿಕತೆ ಮತ್ತು ಸತ್ಯದ ಆಧಾರದ ನಿಲುವಿನಿಂದಾಗಿ ಈ ರೀತಿಯ ದೃಷ್ಟಿಕೋನಗಳು ಅಥವಾ ನಂಬಿಕೆಗಳು ವಕ್ರಮಾರ್ಗವುಳ್ಳದ್ದು. ಅತಿರೇಕಕಾರಿಯು ದುರ್ಮಾರ್ಗಕ್ಕೆ ಕೊಂಡೊಯ್ಯುವುದು ಸ್ಪಷ್ಟವಾಗಿದೆ. ಪ್ರಜ್ಞಾದ ಹಾಗೂ ಒಳ್ಳೆಯತನದ ಕೊರತೆಯಿಂದಾಗಿ ಇಂತಹ ದೃಷ್ಟಿಕೋನಗಳನ್ನು ಅಂಧವಾಗಿ ಹಿಂಬಾಲಿಸುತ್ತೇವೆ. ಇವುಗಳ ಸರಳ ಅರ್ಥವೇನೆಂದರೆ ಈ ಬಗೆಯ ಆಚರಣೆಗಳು ಮೋಹದಿಂದ ಬೇರೂರಿದೆ. ಆದ್ದರಿಂದಾಗಿ ಪ್ರಾಥಮಿಕವಾಗಿಯೇ ಇವು ಅಕುಶಲ ಮತ್ತು ಪಾಪಯುತವಾಗಿವೆ. ಯಾವುದೇ ಕಮ್ಮವು ಮೋಹದಿಂದ ಬೇರೂರಿದ್ದರೆ ಅಂತಹವು ಮಿಥ್ಯಾದೃಷ್ಟಿಯುಂತಹ, ದ್ವೇಷದಂತಹ ಅಂಗಗಳನ್ನು ಹೊಂದಿರುತ್ತವೆ. ಅವೆಲ್ಲ ಸನ್ನಿವೇಶಗಳನ್ನು ಅವಲಂಬಿಸಿವೆ. ಉದಾಹರಣೆಗೆ ನಗ್ನ ಸನ್ಯಾಸಿಗೆ ವಸ್ತ್ರಗಳನ್ನು ಧರಿಸಿ ಸಭ್ಯನಾಗು ಎಂದೇನಾದರೂ ಹೇಳಿದಾಗ ಆತನು ಕ್ರೋಧಗೊಳ್ಳುತ್ತಾನೆ, ಉಗ್ರನಾಗುತ್ತಾನೆ, ಪ್ರತಿಯಾಗಿ ನಿಂದಿಸಲೂ ಬಹುದು. ಇವೆಲ್ಲವೂ ವಕ್ರಮಾರ್ಗದ ಅತಿರೇಕದ ನಂಬಿಕೆ ಹೊಂದಿರುವುದ ರಿಂದಾಗಿ ಅವು ಅಕುಶಲಗಳಾದ ಲೋಭ, ದ್ವೇಷ ಮತ್ತು ಮೋಹಗಳನ್ನು ತರುತ್ತವೆ.

ಇದು ನಿಜಕ್ಕೂ ಸರಳವಾದ ಮನಶಾಸ್ತ್ರೀಯ ಸತ್ಯವಾಗಿದೆ. ಆದರೂ ದೇಹದಂಡನೆಯ ನಾಯಕರಾಗಿದ್ದ ನಾತಪುತ್ತರು ಈ ಸಿದ್ಧಾಂತವನ್ನು ಬೋಧಿಸಿದರು ಮತ್ತು ಜನರಿಗೆ ಅಂಧವಾಗಿ ಹಿಂಬಾಲಿಸಲು ಪ್ರೋತ್ಸಾಹಿಸಿದರು. ಇದು ಸತ್ಯದ ನಗೆಪಾಟಲಾಗಿದೆ. ಆದ್ದರಿಂದಲೇ ಬುದ್ಧ ಭಗವಾನರು ಮಾನಸಿಕ ಕಮ್ಮಕ್ಕೆ ಮಹತ್ವತೆಯನ್ನು ನೀಡಿದ್ದರು. ವಕ್ರನಂಬಿಕೆ ಮತ್ತು ವಕ್ರಾಚರಣೆಯು ಅತಿ ಕೆಟ್ಟ ರೂಪದ ಮಾನಸಿಕ ಕಮ್ಮವನ್ನು ಹೊಂದಿದ್ದು, ಇದು ಎಲ್ಲಾ ಪಾಪಯುತ ಸ್ಥಿತಿಗಳನ್ನು ಉದಯಿಸುವಂತೆ ಮಾಡಿ ದುಃಖಕ್ಕೆ ದೂಡುತ್ತದೆ.

ದೀಘ ತಪಸ್ವಿಯು ನಿಗಂಠನಾತಪುತ್ತನ ಮುಖ್ಯ ಶ್ರಮಣ ಶಿಷ್ಯನಾಗಿದ್ದು ಮತ್ತು ತನ್ನ ಸಿದ್ಧಾಂತದಲ್ಲಿ ಪ್ರಾವಿಣ್ಯತೆ ಪಡೆದವನಾಗಿದ್ದನು. ಒಂದುದಿನ ಆತನು ಬುದ್ಧ ಭಗವಾನರನ್ನು ಪಾವರಿಕ ಮಾವಿನ ತೋಪಿನಲ್ಲಿ



ಭೇಟಿಯಾದನು. ಅಲ್ಲಿ ಆತನು ತನ್ನ ಸಿದ್ಧಾಂತವನ್ನು, ಭಗವಾನರ ಸಿದ್ಧಾಂತದೊಂದಿಗೆ ಹೋಲಿಸಿ ನೋಡಿದನು. ಆತನು ಆಗಿನ ಕಾಲದ ತಪಸ್ವಿಗಳ ರೀತಿಯಂತೆ ಒಂದೆಡೆ ನಿಂತುಕೊಳ್ಳುತ್ತಾನೆ. ಆದರೆ ಬುದ್ಧ ಭಗವಾರು ಆತನಿಗೆ ಕುಳಿತುಕೊಳ್ಳುವಂತೆ ನುಡಿಯುತ್ತಾರೆ.

ಬುದ್ಧ ಭಗವಾನರಿಗೆ ಆತನ ಭೇಟಿ ಹಾಗು ಭೇಟಿಯ ಉದ್ದೇಶ ಮೊದಲೇ ತಿಳಿದಿತ್ತು. ನಂತರದ ಪರಿಣಾಮವು ತಿಳಿದಿತ್ತು. ಭಗವಾನರು ರಾತ್ರಿ 2 ರಿಂದ 4ರವರೆಗೆ ಮಾತ್ರ ನಿದ್ರಿಸುತ್ತಿದ್ದರು. ನಂತರ ಅವರು ಮಹಾಕರುಣಾ ಸಮಾಪತ್ತಿ ಧ್ಯಾನದಲ್ಲಿ ತಲ್ಲೀನರಾಗತ್ತಿದ್ದರು. ಆ ಧ್ಯಾನದಲ್ಲಿ ಅವರು ಯಾರಿಗೆ ಸಹಾಯ ಮಾಡಲೆಂದು ಇಡೀ ಲೋಕಗಳೆಲ್ಲ ವೀಕ್ಷಿಸುತ್ತಿದ್ದರು. ಯಾರು ಧಮ್ಮ ಮಾರ್ಗಕ್ಕೆ ಬರಲು ಪಕ್ವರಾಗಿದ್ದಾರೆ ಎಂದು ಅರಿಯುತ್ತಿದ್ದರು. ಹೀಗೆ ಅವರು ತಮ್ಮ ಸಮಂತ ಚಕ್ಷುವಿನಿಂದ ಪೂರ್ವವಾಗಿಯೇ ಅರಿಯುತ್ತಿದ್ದರು.

ಆ ದಿನ ಪ್ರಾತಃಕಾಲ ಅವರ ಚಕ್ಷುವಿಗೆ ದೀಘ ತಪಸ್ಸಿ ಕಾಣುತ್ತಾನೆ. ಆ ದಿನ ನಡೆಯುವ ಚರ್ಚೆಯು ಸಹಾ ಅವರಿಗೆ ಕಾಣುತ್ತದೆ. ಅಲ್ಲಿ ನಡೆಯಲಿರುವ ಪ್ರಶ್ನೆಗಳು, ಇದರಲ್ಲಿ ನಿಗಂಠನಾತಪುತ್ತರ ಒಳಗೊಳ್ಳುವಿಕೆ ತಿಳಿಯುತ್ತದೆ. ಹಾಗೆಯೇ ಮುಖ್ಯ ಗೃಹಸ್ಥ ಭಕ್ತನಾದ ಉಪಾಲಿಯ ಬಗ್ಗೆ ನಂತರ ಭವಿಷ್ಯದಲ್ಲಿ ಆಗುವ ಬದಲಾವಣೆ ಎಲ್ಲವೂ ತಿಳಿಯುತ್ತದೆ.

* * *

ತಾಪಸಿಯು ಅದರಂತೆಯೇ ಕುಳಿತನು. ನಂತರ ಭಗವಾನರು ಹೀಗೆ ಪ್ರಶ್ನಿಸಿದರು "ತಪಸ್ಸಿ, ನಾತಪುತ್ತನು ಎಷ್ಟು ಬಗೆಯ ಪಾಪಕಮ್ಮಗಳನ್ನು ನಿಗಧಿಸಿದ್ದಾರೆ, ಎಷ್ಟು ಬಗೆಯಲ್ಲಿ ಪಾಪಕಮ್ಮಗಳು ಉಂಟಾಗುವುದಕ್ಕೆ ಹಾಗು ಪಾಪ ಮುಂದುವರಿಕೆಗೆ ಎಷ್ಟು ಬಗೆಯ ಕಾರ್ಯಗಳಿವೆ ಎಂದು ಹೇಳಿದ್ದಾರೆ."

ಆಗ ತಾಪಸಿ ಹೇಳುವುದೇನೆಂದರೆ: ನಾತಪುತ್ತರು ಕಮ್ಮ ಎನ್ನುವ ಶಬ್ದವನ್ನು ಬಳಸುವುದಿಲ್ಲ ಬದಲಾಗಿ ದಂಡ (ಶಿಕ್ಷೆ) ಅಥವಾ ತಪ್ಪು ಎನ್ನುವ

ಶಬ್ದವನ್ನು ಬಳಸುತ್ತಾರೆ. ಅವರಲ್ಲಿ ಮೂರು ಬಗೆಯ ದಂಡಗಳಿವೆ. ಶಾರೀರಿಕ ದಂಡ, ಮಾತಿನ ದಂಡ ಮತ್ತು ಮಾನಸಿಕ ದಂಡ (ತಪ್ಪು). ಇವುಗಳಲ್ಲಿ ಶಾರೀರಿಕ ದಂಡವೇ ಶಕ್ತಿಶಾಲಿಯಾದುದು. ಆದ್ದರಿಂದ ಇದೇ ಹೆಚ್ಚು ಗಂಭೀರವಾದುದು ಎಂದು ಹೇಳುತ್ತಾನೆ.

ಆಗ ಬುದ್ಧ ಭಗವಾನರು ಆತನಿಗೆ "ಶಾರೀರಿಕ ತಪ್ಪೇ (ದಂಡ) ಅತ್ಯಂತ ದೋಷಯುಕ್ತವಾದುದು" ಎಂದು ಮೂರುಬಾರಿ ಕೇಳಿದಾಗಲೂ ಆತನು ಹೌದು ಎಂದು ಉತ್ತರಿಸುತ್ತಾನೆ. ನಂತರ ದೀಘ ತಪಸ್ಸಿಯು ಸಹಾ ಭಗವಾನರಲ್ಲಿ ಅದೇ ಪ್ರಶ್ನೆಗಳನ್ನು ಕೇಳುತ್ತಾನೆ. ಆಗ ಭಗವಾನರು 'ದಂಡ'ವಲ್ಲ 'ಕಮ್ಮ' ಎಂಬ ಪದ ಸೂಕ್ತವಾದುದು ಎಂದು ಹೇಳುತ್ತಾರೆ. ನಂತರ 'ಮಾನಸಿಕ ಕಮ್ಮವೇ' ಅತ್ಯಂತ ಶಕ್ತಿಯುತವಾದುದು, ಗಂಭೀರವಾದುದು ಎಂದು ಹೇಳಿದಾಗ ಆತನು ಅಲ್ಲಿಂದ ಎದ್ದು ತನ್ನ ಗುರುವಿನ ಬಳಿಗೆ ಬರುತ್ತಾನೆ.

ಉಪಾಲಿ ಸುತ್ತದಲ್ಲಿ ದೀಘ ತಪಸ್ಸಿಯ ಹಾಗು ಭಗವಾನರ ನಡುವೆ ನಡೆದ ಸಂಭಾಷಣೆ ಹೀಗಿದೆ:

ಭಗವಾನರು: "ತಪಸ್ಸಿಯೆ, ನಿಗಂಠನಾತಪುತ್ತರು ಯಾವರೀತಿಯ ಕಮ್ಮಗಳನ್ನು ಪಾಪ ಉಂಟಾಗುವಿಕೆಗೆ ಮತ್ತು ಪಾಪ ಕಮ್ಮಗಳು ಮುಂದುವರಿಕೆಗೆ ಇದೆ ಎಂದು ಹೇಳುತ್ತಾರೆ?"

ದೀಘ ತಪಸ್ಸಿ: "ಪೂಜ್ಯ ಗೋತಮರೇ, ನಿಗಂಠನಾತಪುತ್ತರು 'ಕಮ್ಮ' ಎಂಬ ಪದವನ್ನು ಬಳಸುವುದಿಲ್ಲ, ಅವರು 'ದಂಡ (ತಪ್ಪು/ಶಿಕ್ಷೆ)' ಎಂಬ ಪದವನ್ನು ಬಳುಸತ್ತಾರೆ."

ಭಗವಾನರು: "ಸರಿ ತಪಸ್ಸಿ, ಪಾಪಕಮ್ಮ ಉಂಟಾಗಲು ಮತ್ತು ಮುಂದುವರೆಯಲು ನಾತಪುತ್ತರು ಎಷ್ಟುಬಗೆಯ ದಂಡಗಳನ್ನು ವಿಧಿಸುತ್ತಾರೆ?"

ದೀಘ: "ಪೂಜ್ಯ ಗೋತಮರೇ, ನಿಗಂಠನಾತಪುತ್ತರು ಮೂರು ಬಗೆಯ ದಂಡಗಳನ್ನು ವಿಧಿಸುತ್ತಾರೆ. ಅವೆಂದರೆ ಶಾರೀರಿಕ ದಂಡ, ಮಾತಿನ



ದಂಡ ಮತ್ತು ಮಾನಸಿಕ ದಂಡ, ಇವೇ ಪಾಪಕಮ್ಮಗಳು ಉಂಟಾಗಲು ಮತ್ತು ಮುಂದುವರೆಯಲು ಕಾರಣವಾಗಿವೆ."

ಭಗವಾನರು: "ಈಗ ತಪಸ್ಸಿ, ಕಾಯ ದಂಡವು ವಿಶಿಷ್ಟವಾದುದು ಮತ್ತು ಬೇರೆಯದಕ್ಕಿಂತ ಭಿನ್ನವಾದುದೇ? ಹಾಗೆಯೇ ವಾಚಕ ದಂಡ ಮತ್ತು ಮಾನಸಿಕ ದಂಡವು ಸಹಾ ವಿಶಿಷ್ಟ ಹಾಗು ಬೇರೆಯದಕ್ಕಿಂತ ಭಿನ್ನವಾದುದೇ?"

ದೀಘ: ""ಪೂಜ್ಯ ಗೋತಮರೇ, ಕಾಯದಂಡವು ವಿಶಿಷ್ಟವಾದುದು ಹಾಗು ವಾಚಕ ದಂಡ ಹಾಗೂ ಮಾನಸಿಕ ದಂಡಕ್ಕಿಂತ ಭಿನ್ನವಾದುದು. ಹಾಗೆಯೇ ವಾಚಕ ಮತ್ತು ಮಾನಸಿಕ ದಂಡಗಳು ಸಹಾ ಉಳಿದವಕ್ಕಿಂತ ಭಿನ್ನವಾಗಿವೆ."

ಭಗವಾನರು: "ಈಗ ತಪಸ್ಸಿಯೇ, ಹೀಗೆ ವಿಶ್ಲೇಷಿತವಾದ ಮತ್ತು ವ್ಯತ್ಯಾಸವಾದ ಈ ಮೂರು ವಿಧದ ದಂಡಗಳಲ್ಲಿ ಅಂದರೆ ಶಾರೀರಿಕ ದಂಡ, ವಾಚಕ ದಂಡ ಮತ್ತು ಮಾನಸಿಕ ದಂಡದಲ್ಲಿ ಯಾವುದು ಅತ್ಯಂತ ಗಂಭೀರವಾದುದು, ಮಹಾದೋಷಿಯು ಯಾವುದು? ಯಾವುದರಿಂದ ಪಾಪ ಉಂಟಾಗುವುದು ಮತ್ತು ನಡೆಸಿಕೊಂಡು ಹೋಗುವುದು. ಅವು ಶಾರೀರಿಕ ದಂಡವೇ ಅಥವಾ ವಾಚಕ ದಂಡವೇ ಅಥವಾ ಮಾನಸಿಕ ದಂಡವೇ?"

ದೀಘ: "ಪೂಜ್ಯ ಗೋತಮರೇ, ಈ ಮೂರು ಬಗೆಯ ದಂಡಗಳನ್ನು ವಿಶ್ಲೇಷಿಸಿ, ವಿಮರ್ಶಿಸಿ, ನಿಗಂಠನಾತಪುತ್ತರು ಶಾರೀರಿಕ ದಂಡವನ್ನೇ ಅತ್ಯಂತ ಗಂಭೀರವಾದುದು, ಮಹಾ ದೋಷಿಯಾದುದು, ಪಾಪ ಉಂಟಾಗಲು ಮತ್ತು ಪಾಪ ಮುನ್ನಡೆಯಲು ಶಾರೀರಿಕ ದಂಡವೇ ಕಾರಣ ಹೊರತು ವಾಚಕ ದಂಡವಲ್ಲ ಹಾಗೆಯೇ ಮಾನಸಿಕ ದಂಡವಲ್ಲ."

ಭಗವಾನರು: "ತಪಸ್ವಿ ನೀವು ಹೇಳಿದ್ದು ಶಾರೀರಿಕ ದಂಡವೇ?"

ದೀಘ ತಪಸ್ಸಿ: "ಪೂಜ್ಯ ಗೋತಮರೇ, ಶಾರೀರಿಕ ದಂಡವೆಂದೇ ನಾನು ಹೇಳಿದ್ದು."

ಭಗವಾನರು: "ತಪಸ್ಸಿ, ಶಾರೀರಿಕ ದಂಡವೇ ನೀವು ಹೇಳಿದ್ದು?"

ದೀಘ: "ಹೌದು ಪೂಜ್ಯ ಗೋತಮರೇ, ಶಾರೀರಿಕ ದಂಡವೆಂದೇ ನಾನು ಹೇಳಿದ್ದು."

ಭಗವಾನರು: "ತಪಸ್ಸಿ, ಶಾರೀರಿಕ ದಂಡವೆಂದೇ ಹೇಳಿದ್ದೀರಾ?"

ದೀಘ: "ಹೌದು, ಶಾರೀರಿಕ ದಂಡವೆಂದೇ ನಾನು ಹೇಳಿದ್ದೇನೆ."

ಹೀಗೆ ಭಗವಾನರು ದೀಘ ತಪಸ್ಸಿಯ ನಿರ್ಣಯವನ್ನು ಮೂರನೆಯ ಬಾರಿಗೆ ದೃಢಪಡಿಸಿಕೊಂಡರು.

ಇದಾದನಂತರ ದೀಘ ತಪಸ್ಸಿಯು ಭಗವಾನರಲ್ಲಿ ಹೀಗೆ ಕೇಳಿದನು: "ಪೂಜ್ಯ ಗೋತಮರೇ, ಯಾವ ಬಗೆಯ ದಂಡವನ್ನು ನೀವು ಪಾಪಕಮ್ಮ ಉಂಟಾಗಲು ಮತ್ತು ಪಾಪ ಮುನ್ನಡೆಯಲು ಇದೆ ಎಂದು ನೀವು ಹೇಳುವಿರಿ?"

ಭಗವಾನರು: "ತಪಸ್ಸಿ, ತಥಾಗತರು ದಂಡವನ್ನು ಹಾಕುವುದಿಲ್ಲ, ತಥಾಗತರು ಪರಿಹಾರಾತ್ಮಕ ಕಮ್ಮಗಳನ್ನು ನುಡಿಯುವರು."

ದೀಘ: "ಸರಿ ಪೂಜ್ಯ ಗೋತಮರೇ, ಎಷ್ಟು ಬಗೆಯ ಕಮ್ಮಗಳನ್ನು ನೀವು ಪಾಪಕಮ್ಮ ಉಂಟಾಗಲು ಮತ್ತು ಪಾಪ ಮುನ್ನಡೆಯಲು ಇವೆ ಎಂದು ಹೇಳುವಿರಿ?"

ಭಗವಾನರು: "ತಪಸ್ಸಿ, ನಾನು ಮೂರು ಬಗೆಯ ಕಮ್ಮಗಳು ಇವೆ ಎಂದು ಹೇಳುತ್ತೇನೆ. ಅವೇ ಪಾಪಕಮ್ಮಗಳು ಉಂಟಾಗಲು ಮತ್ತು ಮುನ್ನಡೆಯಲು ಇವೆ ಎನ್ನುತ್ತೇನೆ. ಅವೆಂದರೆ: ಶಾರೀರಿಕ ಕಮ್ಮ, ವಾಚಕ ಕಮ್ಮ ಮತ್ತು ಮಾನಸಿಕ ಕಮ್ಮ."

ದೀಘ: "ಪೂಜ್ಯ ಗೋತಮರೇ, ಹಾಗಾದರೆ ಶಾರೀರಿಕ ಕಮ್ಮವು ವಿಶಿಷ್ಟವಾಗಿ ಅನ್ಯಕಮ್ಮಗಳಿಂದ ಭಿನ್ನವಾದುದೇ? ಹಾಗೆಯೇ ವಾಚಕ ಕಮ್ಮವು ಮತ್ತು ಮಾನಸಿಕ ಕಮ್ಮವು ವಿಶಿಷ್ಟವಾಗಿ ಅನ್ಯಕ್ಕಿಂತ ಭಿನ್ನವಾದುದೇ?"



ಭಗವಾನರು "ತಪಸ್ಸಿ, ಶಾರೀರಿಕ ಕಮ್ಮವು ವಿಶಿಷ್ಟವಾಗಿ ಅನ್ಯಕ್ಕಿಂತ ವಿಭಿನ್ನವಾಗಿದೆ. ಅದೇರೀತಿಯಲ್ಲೇ ವಾಚಕ ಕಮ್ಮವು ಮತ್ತು ಮಾನಸಿಕ ಕಮ್ಮವು ಸಹಾ. ಅನ್ಯಕ್ಕಿಂತ ವಿಶಿಷ್ಟವಾಗಿ ಭಿನ್ನವಾಗಿದೆ."

ದೀಘ: "ಪೂಜ್ಯ ಗೋತಮರೇ, ನೀವು ವಿಶ್ಲೇಷಿಸಿದಂತಹ ಮತ್ತು ವಿಭಜಿಸಲ್ಪಟ್ಟ ಈ ಮೂರು ಕಮ್ಮಗಳಾದ ಶಾರೀರಿಕ ಕಮ್ಮ, ವಾಚಕ ಕಮ್ಮ ಮತ್ತು ಮಾನಸಿಕ ಕಮ್ಮಗಳಲ್ಲಿ ಯಾವುದು ಅತ್ಯಂತ ಗಂಭೀರವಾದುದು, ಮಹಾ ದೋಷಿ ಯಾವುದು? ಯಾವುದರಿಂದಾಗಿ ಪಾಪಕಮ್ಮ ಉಂಟಾಗಿ ಮುಂದುವರೆಯುವುದು."

ಭಗವಾನರು: "ತಪಸ್ಸಿ, ಹೀಗೆ ವಿಶ್ಲೇಷಿಸಲ್ಪಟ್ಟು, ವಿಭಜಿಸಲ್ಪಟ್ಟಂತಹದ ರಲ್ಲಿ ಮಾನಸಿಕ ಕಮ್ಮವೇ ಅತ್ಯಂತ ಗಂಭೀರವಾದುದು, ಮಹಾ ದೋಷಿಯಾದುದು, ಪಾಪಕಮ್ಮ ಉಂಟಾಗಲು ಮತ್ತು ಮುಂದುವರೆಯಲು ಇದೇ ಕಾರಣವಾಗಿದೆಯೇ ಹೊರತು ಶಾರೀರಿಕ ಕಮ್ಮವಲ್ಲ. ಹಾಗೆಯೇ ವಾಚಕ ಕಮ್ಮವೂ ಅಲ್ಲ."

ದೀಘ ತಪಸ್ಸಿ: "ಪೂಜ್ಯ ಗೋತಮರೇ, ಮಾನಸಿಕ ಕಮ್ಮವೆಂದೇ ನೀವು ಹೇಳುತ್ತಿರುವುದು?"

ಭಗವಾನರು: "ಹೌದು ತಪಸ್ಸಿ, ಮಾನಸಿಕ ಕಮ್ಮವೆಂದೇ ನಾನು ಹೇಳುತ್ತೇನೆ."

ದೀಘ ತಪಸ್ಸಿ: "ಪೂಜ್ಯ ಗೋತಮರೇ, ಮಾನಸಿಕ ಕಮ್ಮವೆಂದೇ ನೀವು ಹೇಳುತ್ತಿರುವುದು?"

ಭಗವಾನರು: "ಹೌದು ತಪಸ್ಸಿ, ಮಾನಸಿಕ ಕಮ್ಮವೆಂದೇ ನಾನು ಹೇಳುತ್ತೇನೆ."

ದೀಘ ತಪಸ್ಸಿ: "ಪೂಜ್ಯ ಗೋತಮರೇ, ಮಾನಸಿಕ ಕಮ್ಮವೆಂದೇ ನೀವು ಹೇಳುತ್ತಿರುವುದು?"

ಭಗವಾನರು: "ಹೌದು ತಪಸ್ಸಿ, ಮಾನಸಿಕ ಕಮ್ಮವೆಂದೇ ನಾನು ಹೇಳುತ್ತೇನೆ."

ಹೀಗೆ ದೀಘ ತಪಸ್ಸಿಯು ಭಗವಾನರ ಹೇಳಿಕೆಯನ್ನು ಮೂರನೇಬಾರಿ ದೃಢೀಕೃತ ಮಾಡಿಕೊಂಡು ಅಲ್ಲಿಂದ ಎದ್ದು ನೇರವಾಗಿ ನಿಗಂಠನಾತಪುತ್ತರ ಬಳಿಗೆ ಹೋದನು.

ನಿಜಕ್ಕೂ ಈ ಸುತ್ತದಲ್ಲಿ ಕುತೂಹಲಕಾರಿ ಸಂಭಾಷಣೆಗಳಿವೆ. ಅವೆಲ್ಲಾ ಭಗವಾನರ ಸಾರಯುತ ಬೋಧನೆಗಳೊಂದಿಗೆ ವ್ಯವಹರಿಸುತ್ತವೆ, ಉದಾಹರಿಸುವುದಾದರೆ ಕಮ್ಮ, ಕ್ರಿಯೆ ಮತ್ತು ಅದರ ಪರಿಣಾಮ ಅಂದರೆ ಪುನರ್ಭವ, ಪುನರ್ಜನ್ಮ ಹಾಗೆಯೇ ಜೀವನದ ನಂತರದ ಅನುಭವ. ನಾವು ಇಂದೇನು ಅನುಭವಿಸುತ್ತಿರುವೆವೋ ಅದೆಲ್ಲವೂ ಹಿಂದಿನದರ ಫಲಿತಾಂಶವಾಗಿದೆ. ಮತ್ತು ನಾವಿಂದೇನೂ ಮಾಡುವೆವೊ ಅದು ಮುಂದೆ ನಮ್ಮ ಅದೃಷ್ಟವನ್ನು (ಭವಿಷ್ಯವನ್ನು) ನಿರ್ಧರಿಸುತ್ತದೆ. ಹೀಗಾಗಿ ಈ ಕಮ್ಮ ನಿಯಮವು ಶಾರೀರಿಕ, ವಾಚಕ ಮತ್ತು ಮಾನಸಿಕ ಕಮ್ಮಗಳಿಂದ ನಿರ್ಧರಿತವಾಗುತ್ತದೆ.

ಅದಕ್ಕೆ ಇರುವ ಇನ್ನೊಂದು ಹೆಸರೇ ಸಂಸಾರ (ಪ್ರಾಪಂಚಿಕ ಅಸ್ತಿತ್ವದ ಚಕ್ರ). ಇದೇ ಭಗವಾನರ ಮತ್ತು ದೀಘ ತಪಸ್ಸಿಯ ಸಂಭಾಷಣೆಯ ವಿಷಯ ವಸ್ತುವಾಗಿತ್ತು. ದೀಘ ತಪಸ್ಸಿಯು ನಿಗಂಠನಾತಪುತ್ತನ ಅಗ್ರ ಶಿಷ್ಯನಾಗಿದ್ದನು. ಆತನು ನಗ್ನ ತಪಸ್ವಿಗಳಿಗೆಲ್ಲ ನಾಯಕನಾಗಿದ್ದನು. ನಿಗಂಠರು ದೇಹದಂಡನೆಯನ್ನೇ ಆಚರಿಸುತ್ತಾ ಮತ್ತು ಅದನ್ನೇ ವಿಮುಕ್ತಿಗೆ ಇರುವ ಮಾರ್ಗವೆಂದು ಸಾರುತ್ತ ಆ ತತ್ವವನ್ನು ಹರಡಿಸುತ್ತಿದ್ದರು.

ಕಮ್ಮ ಮತ್ತು ಪುನರ್ಜನ್ಮ ಇವು ಭಗವಾನರ ಬೋಧನೆಯಲ್ಲಿ ಅತ್ಯಂತ ಸಾರಯುತ ಅಂಶವಾಗಿದೆ. ಹೇಗೆ ಕೋಳಿಯು ಮೊಟ್ಟೆಗಳನ್ನು ಉತ್ಪಾದಿಸುವುದೋ ಮತ್ತು ಮೊಟ್ಟೆಗಳು ಕೋಳಿಯನ್ನು ಉತ್ಪಾದಿಸುವುದೋ ಹಾಗೆಯೇ ಕಮ್ಮ ಅಥವಾ ಇಚ್ಛಾಪೂರ್ವಕ ಕ್ರಿಯೆಗಳು ಪರಿಣಾಮವನ್ನು ಉತ್ಪಾದಿಸುವವು ಮತ್ತು ಪರಿಣಾಮವು ಮತ್ತೆ ಹೊಸ ಕಮ್ಮವನ್ನು ಉಂಟುಮಾಡುವುದು. ಹೀಗೆಯೇ ಕಮ್ಮ ಮತ್ತು ಪುನರ್ಜನ್ಮದ ಚಕ್ರವು ಚಲಿಸುತ್ತಲೇ ಇರುತ್ತದೆ. ಗುರಿಯಿಲ್ಲದೆ ಅನಂತವಾಗಿ ಚಲಿಸುತ್ತಿರುತ್ತದೆ.



ಈ ಅಂತ್ಯವಿಲ್ಲದ ಜೀವನ ಚಕ್ರವು ಪ್ರಾಥಮಿಕವಾಗಿ ಅತೃಪ್ತಿಕರವಾಗಿದೆ. ಹೀಗಾಗಿ ನೂರಾರು ವಿಭಿನ್ನ ರೀತಿಯಲ್ಲಿ, ಅಪಾರ ದುಃಖಗಳನ್ನು ನೀಡುತ್ತದೆ.

ಬುದ್ಧ ಭಗವಾನರ ಶಾಸನದಲ್ಲಿ ಜೀವನದ ಉದ್ದೇಶ ಏನೆಂದರೆ ಕಮ್ಮದ ಸದ್ಬಳಕೆ ಮಾಡುತ್ತಾ ಈ ಜೀವನ ಚಕ್ರವನ್ನು ಸೀಳಾಗುವಂತೆ ಮುರಿಯುವುದು ಇನ್ನೊಂದು ವಿಧದಲ್ಲಿ ಹೇಳಬೇಕೆಂದರೆ ಹೇಗೆ ಒಂದು ಕೈ ಇನ್ನೊಂದನ್ನು ತೊಳೆಯುವುದೋ ಅಥವಾ ದೇಹದ ಇತರ ಭಾಗಗಳನ್ನು ತೊಳೆಯುವುದೋ ಹಾಗೆಯೇ ಒಂದು ವರ್ಗದ ಕಮ್ಮದಿಂದ ಇನ್ನೊಂದು ವರ್ಗದ ಕಮ್ಮವನ್ನು ಪರಿಶುದ್ಧಿಗೊಳಿಸಬಹುದು, ಗೆಲ್ಲಬಹುದು. ಹೀಗೆಯೇ ತ್ರಿವಿಧ ಕಮ್ಮದ ಚಕ್ರವನ್ನು ದಾಟಿ ಹೋಗುವರು.

ಈಗ ಪ್ರಶ್ನೆ ಏನೆಂದರೆ ಯಾವ ತ್ರಿವಿಧದ ಕಮ್ಮಗಳು ಶಾರೀರಿಕ, ವಾಚಿಕ ಮತ್ತು ಮಾನಸಿಕ? ಯಾವುದು ಅತ್ಯಂತ ಬಲಿಷ್ಠವಾದುದು, ಬಲವನ್ನು ಹೊಂದುತ್ತ ಚಕ್ರವನ್ನು ಮುಂದುವರೆಸುತ್ತಿರುವುದು?

ಬುದ್ಧ ಭಗವಾನರು ಮಧ್ಯಮ ಮಾರ್ಗವನ್ನು ಬೋಧಿಸಿರುವರು. ಅವರು ಹೇಳಿದ ಸತ್ಯವೇನೆಂದರೆ ಮಾನಸಿಕ ಕಮ್ಮವು ಉಳಿದ ಎರಡಕ್ಕಿಂತ ಅತ್ಯಂತ ಬಲಿಷ್ಠವಾದುದು. ಆದರೆ ನಿಗಂಠನಾತಪುತ್ತರು ಶಾರೀರಿಕ ದಂಡನೆಯ ಬಗ್ಗೆ ಬೋಧಿಸುವರು. ಅವರ ಪ್ರಕಾರ ಶಾರೀರಿಕ ದಂಡನೆಯೇ ಶಕ್ತಿಯುತವಾದುದು. ಈಗ ಇವುಗಳಲ್ಲಿ ಯಾರದು ಸರಿಯಾಗಿದೆ?

ಬುದ್ಧ ಧಮ್ಮದ ಪ್ರಕಾರ ಮನಸ್ಸೇ ಪ್ರತಿಯೊಂದರ ಮೂಲ. ಇದು ಪ್ರತಿಯೊಂದರ ಅಗ್ರಗಾಮಿಯಾಗಿದೆ. ಅದರಿಂದಾಗಿ ಕ್ರಿಯೆಯಸಹಿತ ಪ್ರತಿಯೊಂದು ಸಹಾ ಮನೋಮಯ (ಮನಸ್ಸಿನಿಂದಲೇ ನಿರ್ಮಿತ) ಮಾನಸಿಕ ಕ್ರಿಯೆಗಳು ನಾನಾರೀತಿಯಲ್ಲಿರುತ್ತವೆ, ಯೋಚಿಸುವಿಕೆ, ಯೋಜಿಸುವಿಕೆ, ಕಲ್ಪಿಸುವಿಕೆ, ಇಚ್ಛಿಸುವಿಕೆ, ಭ್ರಾಂತಿ, ಹಗಲು ಕನಸು ಇತ್ಯಾದಿ. ಮನಸ್ಸು ಹೆಚ್ಚು ಶಕ್ತಿಯುತ, ಏಕೆಂದರೆ ವಾಚಿಕ ಮತ್ತು ಶಾರೀರಿಕ ಕಮ್ಮಗಳು ಉದಯಿಸುವುದೇ ಮಾನಸಿಕ ಕರ್ಮದಿಂದಾಗಿಯೇ. ಆದರೆ ನಾತಪುತ್ತ ದೇಹದಂಡನೆಯನ್ನು ಮಾಡಿಕೊಳ್ಳುತ್ತಿದ್ದರು. ಅವರು ತಪ್ಪು ಕಾರ್ಯಕ್ಕೆಲ್ಲ ಸ್ವ-ದಂಡನೆಯನ್ನು ಮಾಡಿಕೊಳ್ಳುತ್ತಿದ್ದರು. (ನಾವೆಲ್ಲಾ ಹಿಂದಿನ

ಜನ್ಮದಲ್ಲಿ ತಪ್ಪು ಮಾಡಿದ್ದೇವೆ. ಅದಕ್ಕಾಗಿ ಈಗ ಈ ಜನ್ಮದಲ್ಲಿ ಸ್ವ-ದೇಹದಂಡನೆ ಮಾಡಿಕೊಂಡರೆ ನಮಗೆ ಮುಕ್ತಿ ಖಚಿತ – ಎಂಬುದು ನಾತಪುತ್ತರ ಸಿದ್ಧಾಂತವಾಗಿತ್ತು). ಅವರು ಹೇಳುವುದು ಏನೆಂದರೆ ಶಾರೀರಿಕ ನೋವಾಗಲಿ, ಶರೀರವಾಗಲಿ ಅತ್ಯಂತ ಸ್ಥೂಲ ಹಾಗು ನೋವುಭರಿತ. ಆದ್ದರಿಂದಾಗಿ ಕಾಯದಂಡವೇ ಪ್ರಬಲವಾದದ್ದು.

ದೀಘ ತಪಸ್ವಿಯು ನಿಗಂಠನಾತಪುತ್ತರ ಅಗ್ರ ಶಿಷ್ಯನಾಗಿದ್ದನು. ಆತನು ಬುದ್ಧ ಭಗವಾನರು ಮನಸ್ಸಿನ ಶ್ರೇಷ್ಠತೆ ಬಗ್ಗೆ ಬೋಧಿಸಿದಾಗ ಆತನಿಗೆ ಅದು ಪೂರ್ಣವಾಗಿ ಅರ್ಥವಾಗದೇ ಹೋಯಿತು. ಮನಸ್ಸು ಶರೀರಕ್ಕಿಂತ ಹೇಗೆ ಪ್ರಮುಖವಾದುದು ಎಂದು ಅರಿಯದೆ ಹೋದನು. ಯಾರೆಲ್ಲಾ ದೇಹದಂಡನೆಯಲ್ಲಿ ನಂಬಿಕೆ ತಾಳಿರುವರೋ ಅವರೆಲ್ಲಾ ತೀವ್ರತರವಾದ ತಪಸ್ಸು, ನೋವುಭರಿತ ಆಚರಣೆಗಳಲ್ಲಿ ತೊಡಗಿ ದೇಹದಲ್ಲೇ ಪರಿಮಿತವಾಗಿ, ಮನಸ್ಸಿನ ಪ್ರಧಾನ್ಯತೆಯನ್ನು ಅರಿಯದೆ ಹೋಗುತ್ತಾರೆ. ಏಕೆಂದರೆ ಅವರು ದೇಹದ ಬಗ್ಗೆ ಮೊದಲೇ ಪೂರ್ವಾಗ್ರಹಪೀಡಿತರಾಗಿರುತ್ತಾರೆ. ಅವರು ದೇಹಕ್ಕೆ ಚಿತ್ರಹಿಂಸೆ ನೀಡುತ್ತಾ, ಆ ನೋವಿನಿಂದಾಗಿ ಕೂಡಿ, ಈ ಬಗೆಯ ಸ್ವ-ಶಾರೀರಿಕ ಹಿಂಸೆಯ ಬಯಕೆಯು ಮಾನಸಿಕವಾದದ್ದು ಎಂದು ಅರಿಯದೆ ಹೋಗುತ್ತಾರೆ. ಈ ಸರಳಸತ್ಯ ಅವರಿಗೆ ಹೊಳೆಯದೆ ಹೋಗುತ್ತದೆ.

ಅವರು ಕೇವಲ ತಮ್ಮನ್ನು ಶಿಕ್ಷಿಸಲು ಇಚ್ಛಿಸುವುದರಿಂದಾಗಿ ಅವರು ಈ ರೀತಿಯ ಕಠೋರ ದೇಹದಂಡನೆಗಳೆಲ್ಲಾ ಮಾಡಿಕೊಳ್ಳುತ್ತಾರೆ. ಆದರೆ "ಶಿಕ್ಷಿಸುವುದನ್ನು ಇಚ್ಛಿಸುವುದು" ಮಾನಸಿಕ ಕ್ರಿಯೆಯೇ ಆಗಿದೆ. ಆದರೆ ಈ ವಿಷಯವು ಅವರಿಗೆ ಪ್ರಧಾನವಾಗಿ ಕಾಣಿಸುವುದಿಲ್ಲ. ಈ ಸತ್ಯದ ಅಭಾಸವು ಸಂಸಾರದಲ್ಲಿ ಇಕ್ಕಟ್ಟಿನದ್ದಾಗಿದೆ. ಮನಸ್ಸು ಸ್ವ-ಆಯ್ಕೆಗಾಗಿ ಎಷ್ಟೊಂದು ಅಂಧವಾಗುತ್ತದೆ ಎಂದರೆ ಅದು ನೈಜ್ಯ ಸತ್ಯವನ್ನು ಕಾಣಲಾರದು. ನಾತಪುತ್ತರು ಆಗಾಗ್ಗೆ ಈ ಉದಾಹರಣೆ ಹೇಳುವರು: "ಯಾವಾಗ ಗಾಳಿಯು ಬೀಸುವುದೋ ಆಗ ರೆಂಬೆ ಮತ್ತು ಎಲೆಗಳೆಲ್ಲಾ ಸ್ವಯಂಚಾಲಿತವಾಗಿ ಚಲಿಸುವುವು ಮತ್ತು ಅಲ್ಲಿ ಮನಸ್ಸು ಯಾವುದೇ



ರೀತಿಯಲ್ಲಿ ಜೊತೆಗೂಡಿಲ್ಲ". ಹೀಗಾಗಿ ಅವರು ಹೇಳುವುದು ಏನೆಂದರೆ ದೇಹದಂಡನೆ ಮನಸ್ಸಿನ ಅಭಾವದಿಂದಲೇ ಸಾಧ್ಯವಾಗುತ್ತದೆ. ಅದೊಂದು ಸಂಸಾರದ ನಾನಾ ಅಂಶಗಳಲ್ಲಿ ಒಂದು ಕ್ರಿಯೆ ಎನ್ನುತ್ತಾರೆ.

ಈಗ ದೀಘ ತಪಸ್ಸಿಯು ಬುದ್ಧರೊಡನೆ ಹೀಗೆ ಪ್ರಶ್ನಿಸುತ್ತಾನೆ: "ಯಾವುದು ಶಕ್ತಿಶಾಲಿ, ದೇಹವೋ ಅಥವಾ ಮನಸ್ಸೋ?" ಇದಕ್ಕೆ ಬುದ್ಧರಿಂದ ಬರುವ ನಿಖರ ಉತ್ತರ 'ಮನಸ್ಸು'. ಆದರೆ ಆತನು ಮೂರುಬಾರಿ ಇದೇ ಉತ್ತರ ಪಡೆದು ದೃಢೀಕೃತ ಮಾಡಿಕೊಂಡು, ಏನನ್ನೂ ಹೇಳದೆ ಅಲ್ಲಿಂದ ಎದ್ದು ಹೋಗಿಬಿಡುತ್ತಾನೆ.

ನಿಗಂಠನಾತಪುತ್ತನು ಅಪಾರ ಗೃಹಸ್ಥ ಶಿಷ್ಯರೊಂದಿಗೆ ಬಾಲುಕ ಎಂಬ ಹಳ್ಳಿಯಲ್ಲಿ ಕುಳಿತಿರುತ್ತಾನೆ. ಅವರಲ್ಲಿ ಕೋಟ್ಯಾಧೀಶ ಉಪಾಲಿ ಸಹಾ ಇರುತ್ತಾನೆ. ದೀಘ ತಪಸ್ಸಿಯು ಬರುತ್ತಿರುವುದನ್ನು ಕಾಣುತ್ತಾನೆ. ಆತನು ಹತ್ತಿರ ಬಂದಾಗ ನಿಗಂಠನಾತಪುತ್ತನು ಆತನಿಗೆ ಹೀಗೆ ಕೇಳುತ್ತಾನೆ. "ದೀಘ ತಪಸ್ಸಿ, ಈ ಮಟ ಮಧ್ಯಾಹ್ನದಲ್ಲಿ ನೀನು ಎಲ್ಲಿಂದ ಬರುತ್ತಿರುವೆ?"

"ಪೂಜ್ಯರೇ, ನಾನು ಸಮಣ ಗೋತಮರ ಬಳಿಯಿಂದ ಈಗಷ್ಟೇ ಬರುತ್ತಿರುವೆ."

"ತಪಸ್ಸಿ, ನೀನು ಸಮಣ ಗೋತಮರೊಂದಿಗೆ ಚರ್ಚೆ ಏನಾದರೂ ಮಾಡಿದೆಯಾ?"

"ಪೂಜ್ಯರೇ, ಹೌದು, ನಾನು ಸಮಣ ಗೋತಮರೊಂದಿಗೆ ಚರ್ಚಿಸಿದೆನು."

"ತಪಸ್ಸಿ, ಯಾವ ವಿಷಯದ ಬಗ್ಗೆ ಚರ್ಚೆಯನ್ನು ನೀನು ಅವರೊಂದಿಗೆ ಮಾಡಿದೆ?"

ಆಗ ನಿಗಂಠ ದೀಘ ತಪಸ್ಸಿಯು ನಿಗಂಠನಾತಪುತ್ತರಿಗೆ ನಡೆದ ಸಂಭಾಷಣೆಯನ್ನೆಲ್ಲಾ ನುಡಿದನು. ಅದನ್ನು ಆಲಿಸಿದ ಉಪಾಲಿಯು "ಭಲೆ ತಪಸ್ಸಿ, ಭಲೇ! ಒಳ್ಳೆಯದು. ನೀನು ಸಮಣ ಗೋತಮರ ಪ್ರಶ್ನೆಗಳಿಗೆ ಅತ್ಯಂತ ಚೆನ್ನಾಗಿ ಉತ್ತರಿಸಿದ್ದೀಯೇ. ಹೇಗೆ ಶಿಷ್ಯನೊಬ್ಬನು ಗುರುವಿನ

ಬೋಧನೆಯನ್ನು ಚೆನ್ನಾಗಿ ಗ್ರಹಿಸಿ ಉತ್ತರಿಸುವಂತೆಯೇ ಉತ್ತರಿಸಿದ್ದೀಯೆ."

"ಕಟ್ಟಕಡೆಗೆ, ಕ್ಷುಲ್ಲಕವಾದ ಮಾನಸಿಕ ದಂಡವು ಹೇಗೆತಾನೆ ಎಣಿಕೆಗೆ ಬರುವುದು? ಪ್ರತಿಯಾಗಿ ಶಾರೀರಿಕ ದಂಡವೇ ಅತ್ಯಂತ ದೋಷಯುಕ್ತವಾದುದು. ಪಾಪ ಉಂಟಾಗಲು ಮತ್ತು ಮುಂದುವರೆಯಲು ಶಾರೀರಿಕವೇ ಮಹಾ ದೋಷಿಯಾಗಿದೆಯೇ ಹೊರತು ವಾಚಿಕವೂ ಅಲ್ಲ ಮತ್ತು ಮಾನಸಿಕವೂ ಅಲ್ಲ."

ನಂತರ ನಿಗಂಠನಾತಪುತ್ತರೊಂದಿಗೆ ಉಪಾಲಿಯು ಹೀಗೆ ಹೇಳಿದನು: "ಪೂಜ್ಯರೇ, ಇದು ಅದ್ಭುತವಾಗಿದೆ! ಅದ್ಭುತವಾಗಿಯೇ ಇದೆ! ಪೂಜ್ಯ ದೀಘ ತಪಸ್ಸಿಯು ಸಮಣ ಗೋತಮರ ಪ್ರಶ್ನೆಗಳಿಗೆ ನುರಿತ ವಿದ್ಯಾರ್ಥಿಯಂತೆಯೇ ಉತ್ತರಿಸಿದ್ದಾರೆ. ಗುರುವಿನಲ್ಲಿ ಚೆನ್ನಾಗಿ ಕಲಿತವನು ಉತ್ತರಿಸುವಂತೆಯೇ ಉತ್ತರಿಸಿದ್ದಾರೆ, ಹೇಗೆತಾನೇ ಕ್ಷುಲ್ಲಕ ಮಾನಸಿಕ ದಂಡವು (ತಪ್ಪು) ಎಣಿಕೆಗೆ ಬರುತ್ತದೆ, ಅದಕ್ಕೆ ಹೋಲಿಸಿದರೆ ಶಾರೀರಿಕ ದಂಡವೂ ಎಷ್ಟೊಂದು ಸ್ಥೂಲವಾಗಿದೆ? ನಿಜಕ್ಕೂ ಶಾರೀರಿಕ ದಂಡವೇ ಪಾಪ ಉಂಟಾಗಲು ಹಾದಿ ಮುಂದುವರೆಯಲು ದೊಡ್ಡ ದೋಷವಾಗಿದೆಯೇ ಹೊರತು ವಾಚಕ ದೋಷವಲ್ಲ, ಹಾಗೆಯೇ ಮಾನಸಿಕ ದೋಷವೂ ಅಲ್ಲ."

1. "ಪೂಜ್ಯರೇ, ನಾನು ಈಗ ಸಮಣ ಗೋತಮರ ಬಳಿಯಲ್ಲಿ ಹೋಗುವೆ ಮತ್ತು ಇದೇ ವಿಷಯದ ಕುರಿತು ವಾದವನ್ನು ಮಾಡುವೆ. ಅವರ ವಿಚಾರ ತಪ್ಪು ಎಂದು ನಿರೂಪಿಸುವೆ. ಸಮಣ ಗೋತಮರು ಪೂಜ್ಯ ದೀಘ ತಪಸ್ಸಿಯವರ ಬಳಿಯಲ್ಲಿ ಹೇಳಿದಂತೆಯೇ ನನ್ನಲ್ಲೂ ಅದೇರೀತಿ ಪಾಲಿಸಿದರೆ, ಹೇಗೆ ಬಲಿಷ್ಠ ಮನುಷ್ಯನು ಉದ್ದ ಕೂದಲಿನ ಟಗರನ್ನು ಹಿಡಿದು, ಆ ಟಗರಿನ ಕೂದಲನ್ನು ಹಿಡಿದು ಆ ಕಡೆ ಈ ಕಡೆ ಜಗ್ಗಾಡುವಂತೆ, ಹಿಂದಕ್ಕೆ, ಮುಂದಕ್ಕೆ ಸುತ್ತಲೂ ಎಳೆದಾಡುವಂತೆ, ನಾನು ಸಹಾ ತಾವು ಅಪ್ಪಣೆ ನೀಡಿದರೆ ಸಮಣ ಗೋತಮರನ್ನು ವಾದವಿವಾದದಲ್ಲಿ ಅವರನ್ನು ಇಷ್ಟಬಂದಂತೆ ಎಳೆದಾಡುವೆನು, ಜಗ್ಗಾಡುವೆನು."



2. "ಹೇಗೆ ಒಬ್ಬ ಬಲಿಷ್ಠ ಭಟ್ಟಿ ಇಳಿಸುವವ, ದೊಡ್ಡದಾದ ಭಟ್ಟಿ ಪಾತ್ರೆಯನ್ನು ಆಳವಾದ ನೀರಿನ ತೊಟ್ಟಿಯಲ್ಲಿ ಮುಳುಗಿಸುವನು. ಅದನ್ನು ಒಂದು ಮೂಲೆಗೆ ಬೇಕಾದರೆ ಎಳೆದುಕೊಂಡು ಹೋಗುವನು. ಈ ಕಡೆ ಆ ಕಡೆ ಎಳೆದಾಡುವನು, ಹಿಂದಕ್ಕೆ ಮುಂದಕ್ಕೆ ಎಳೆದಾಡುವನು, ಸುತ್ತಲೂ ಎಳೆದಾಡುವನೋ ಅದೇರೀತಿಯಲ್ಲಿ ನಾನು ಸಮಣ ಗೋತಮರನ್ನು ವಾದದಲ್ಲಿ ಎಳೆದಾಡುತ್ತೇನೆ."

3. "ಹೇಗೆ ಒಬ್ಬ ಬಲಿಷ್ಠ ಭಟ್ಟಿ ಇಳಿಸುವವ, ದೊಡ್ಡ ಜರಡಿಯನ್ನು ಆಳವಾದ ನೀರಿನ ತೊಟ್ಟಿಗೆ ಎಸೆಯುತ್ತಾನೆ ಮತ್ತು ಅದನ್ನು ಮೂಲೆಗೆ ತೆಗೆದುಕೊಂಡು ಹೋಗುತ್ತಾನೆ. ಅಲ್ಲಿ ಹಿಂದಕ್ಕೆ ಮತ್ತು ಮುಂದಕ್ಕೆ ಎಳೆದಾಡುತ್ತಾನೋ, ಸುತ್ತಲೂ ತಿರುಗಿಸುತ್ತಾನೋ ಹಾಗೆಯೇ ನಾನು ಸಹಾ ವಾದದಲ್ಲಿ ಸಮಣ ಗೋತಮರನ್ನು ಜಗ್ಗಾಡುತ್ತೇನೆ, ಎಳೆದಾಡುತ್ತೇನೆ."

4. "ಹೇಗೆ ಅರವತ್ತು ವರ್ಷದ ಆನೆಯು ಕೊಳದಲ್ಲಿ ರಭಸದಿಂದ ಧುಮುಕುವುದೋ, ಅಲ್ಲಿ ಕಿತ್ತಾಡುತ್ತ, ನೀರನ್ನು ಎರೆಚಾಡುತ್ತ, ನೀರಾಟವನ್ನು ಆಡುತ್ತದೋ ಅದೇರೀತಿಯಲ್ಲಿ ನಾನು ಸಹಾ ಸಮಣ ಗೋತಮರೊಂದಿಗೆ ವಾದಿಸುವೆನು."

"ಪೂಜ್ಯರೇ, ನಾನು ಈಗಲೇ ಸಮಣ ಗೋತಮರಲ್ಲಿ ಹೋಗಿ ಈ ಹೇಳಿಕೆಯ ಬಗ್ಗೆ ವಾದ ಮಾಡುವೆ."

"ಹೋಗು ಗೃಹಸ್ಥನೇ, ಈ ಹೇಳಿಕೆಯ ಆಧಾರದ ಮೇಲೆ ಸಮಣ ಗೋತಮರೊಂದಿಗೆ ವಾದಿಸು. ನಾನಾಗಲಿ ಅಥವಾ ನೀನಾಗಲಿ ಅಥವಾ ದೀಘ ತಪಸ್ಸಿಯಾಗಲಿ ಸಮಣ ಗೋತಮರೊಂದಿಗೆ ಈ ವಿಷಯ ತಪ್ಪು ಎಂದು ವಾದಿಸಬಹುದಾಗಿದೆ."

ಹಾಗೇ ನಿಗಂಠನಾತಪುತ್ತರು ಹೇಳಿದಾಗ ನಿಗಂಠ ದೀಘ ತಪಸ್ಸಿಯು ಹೀಗೆ ನುಡಿಯುತ್ತಾನೆ "ಪೂಜ್ಯರೇ, ನನಗೇನೋ ಗೃಹಸ್ಥ ಉಪಾಲಿಯು ಸಮಣ ಗೋತಮರೊಂದಿಗೆ ವಾದಿಸಲು ಹೋಗುತ್ತಿರುವುದು ಸರಿಕಾಣಿಸುತ್ತಿಲ್ಲ. ಏಕೆಂದರೆ ಸಮಣ ಗೋತಮರು ಮೋಡಿ

ಮಾಡುವವರಂತೆ, ವಶೀಕರಣ ಮಾಡುವವರಂತೆ ಮರಳು ಮಾಡುತ್ತಾರೆ. ಯಾರಿಗೆ ಗೊತ್ತು ಅವರು ತಮ್ಮ ಪರಿವರ್ತನೆ ಮಾಡುವ ಮಂತ್ರದಿಂದಾಗಿ, ಪರ ಧರ್ಮೀಯರನ್ನು ಪರಿವರ್ತನೆ ಮಾಡಿಬಿಡಬಹುದು."

"ತಪಸ್ಸಿ ಇದು ಅಸಾಧ್ಯ! ಗೃಹಸ್ಥ ಉಪಾಲಿಯು ನಮ್ಮನ್ನು ತೊರೆದು ಸಮಣ ಗೋತಮರ ಶಿಷ್ಯನಾಗುವುದು ಸಂಭವಿಸದ ಮಾತಾಗಿದೆ. ಬದಲಾಗಿ ಸಮಣ ಗೋತಮರೇ ಉಪಾಲಿಯ ಶಿಷ್ಯನಾಗಬಹುದು, ಇದು ಸಾಧ್ಯವಾಗುತ್ತದೆ."

"ಒಳ್ಳೆಯದು ಉಪಾಲಿಯೇ, ನೀನು ಹೋಗು ಈ ಹೇಳಿಕೆಯ ಬಗ್ಗೆ ಸಮಣ ಗೋತಮರೊಂದಿಗೆ ವಾದವನ್ನು ಮಾಡು. ನಾನಾಗಲಿ ಅಥವಾ ದೀಘ ತಪಸ್ಸಿಯಾಗಲಿ ಅಥವಾ ನೀನು ಮಾತ್ರ ಇದಕ್ಕೆ ಸಮರ್ಥರಾಗಿದ್ದೇವೆ."

ಆಗ ಎರಡನೆಯಬಾರಿ ದೀಘ ತಪಸ್ಸಿಯು ನಿಗಂಠನಾತಪುತ್ತರಿಗೆ ಹೀಗೆ ಹೇಳಿದನು: "ಪೂಜ್ಯರೇ, ನನಗೇನೋ ಗೃಹಸ್ಥ ಉಪಾಲಿಯು ಸಮಣ ಗೋತಮರೊಂದಿಗೆ ವಾದಿಸಲು ಹೋಗುತ್ತಿರುವುದು ಸರಿಕಾಣಿಸುತ್ತಿಲ್ಲ...... ಮಾಡಿಬಿಡಬಹುದು."

ಆಗಲೂ ನಿಗಂಠನಾತಪುತ್ತರು ಮೊದಲಿನಂತೆಯೇ ಉತ್ತರಿಸಿದರು. ಆಗ ದೀಘ ತಪಸ್ಸಿಯು ಮೂರನೆಯಬಾರಿ ಹಾಗೆಯೇ ಮೊದಲಿನಂತೆಯೇ ಕೇಳಿಕೊಂಡನು. ಆಗಲೂ ಸಹಾ ನಿಗಂಠರು ಹೀಗೆ ಹೇಳಿದರು: "ತಪಸ್ಸಿ, ಇದು ಅಸಾಧ್ಯ. ಉಪಾಲಿಯು ನಮ್ಮನ್ನು ತೊರೆದು ಗೊತಮರ ಶಿಷ್ಯನಾಗಲಾರ. ಬದಲಾಗಿ ಸಮಣ ಗೋತಮರೇ ಉಪಾಲಿಯ ಶಿಷ್ಯನಾಗಬಹುದು."

"ಒಳ್ಳೆಯದು, ಉಪಾಲಿ ಹೋಗು, ಸಮಣ ಗೋತಮರ ಈ ಹೇಳಿಕೆಯನ್ನು ಖಂಡಿಸು, ಇದಕ್ಕೆ ನಾನಾಗಲಿ, ದೀಘ ತಪಸ್ಸಿಯಾಗಲಿ ಅಥವಾ ನೀನು ಸಮರ್ಥರಾಗಿದ್ದೇವೆ."



"ಒಳ್ಳೆಯದು ಪೂಜ್ಯರೇ" ಎಂದು ಉಪಾಲಿ ಗೃಹಸ್ಥನು ತನ್ನ ಆಸನದಿಂದೆದ್ದು, ನಿಗಂಠನಾತಪುತ್ತರಿಗೆ ವಂದಿಸಿ, ಬಲಗಡೆಯಿಂದ ಪ್ರದಕ್ಷಿಣೆ ಮಾಡಿ, ಅಲ್ಲಿಂದ ಪಾವಾರಿಕ ಮಾವಿನ ತೋಪಿಗೆ ಭಗವಾನರನ್ನು ಕಾಣಲು ಬಂದನು.

ಗೃಹಸ್ಥ ಉಪಾಲಿಯು ಭಗವಾನರ ಬಳಿಗೆ ಸಮೀಪಿಸಿ, ವಂದಿಸಿ ಒಂದೆಡೆ ಕುಳಿತನು ಮತ್ತು ಹೀಗೆ ಪ್ರಶ್ನಿಸಿದನು: "ಭಂತೆ, ದೀಘ ತಪಸ್ಸಿಯು ಇಲ್ಲಿಗೆ ಬಂದಿದ್ದರೆ?"

"ಹೌದು ಗೃಹಸ್ಥನೆ, ದೀಘ ತಪಸ್ಸಿಯು ಇಲ್ಲಿಗೆ ಬಂದಿದ್ದನು."

"ಭಂತೆ, ಅವರೊಂದಿಗೆ ಏನಾದರೂ ಚರ್ಚೆಯಾಯಿತೆ?"

"ಹೌದು ಗೃಹಸ್ಥನೆ, ಆತನೊಂದಿಗೆ ಚರ್ಚೆ ಮಾಡಿದೆನು."

"ಭಂತೆ, ಯಾವರೀತಿಯ ಚರ್ಚೆ ದೀಘ ತಪಸ್ಸಿಯೊಂದಿಗೆ ಆಯಿತು?"

ಆಗ ಭಗವಾನರು ದೀಘ ತಪಸ್ಸಿಯೊಂದಿಗೆ ನಡೆದ ಇದೇ ಚರ್ಚೆಯನ್ನು ತಿಳಿಸಿದರು. ಅದನ್ನು ಆಲಿಸಿದ ಉಪಾಲಿಯು ದೀಘ ತಪಸ್ಸಿಯ ಕುರಿತು ಹೀಗೆ ತನ್ನಲ್ಲೇ ಏರುಧ್ವನಿಯಿಂದ ಹೇಳಿಕೊಂಡನು: "ಒಳ್ಳೆಯದು ತಪಸ್ಸಿ, ನಿಜಕ್ಕೂ ಅದ್ಭುತವಾದುದು. ಓ ದೀಘ ತಪಸ್ಸಿಯೇ ನೀನು ಭಗವಾನರೊಂದಿಗೆ ಚರ್ಚಿಸಿದ್ದೀಯೆ. ಹೇಗೆ ಒಬ್ಬ ನುರಿತ ಶಿಷ್ಯನು ತನ್ನ ಗುರುವಿನ ಬೋಧನೆಯನ್ನು ಬಹುಚೆನ್ನಾಗಿ ಗ್ರಹಿಸಿರುವನೋ ಹಾಗೆಯೇ ತಿಳಿಸಿದ್ದೀಯೇ. ಹೇಗೆ ತಾನೇ ಕ್ಷುಲ್ಲಕ ಮಾನಸಿಕ ದಂಡವು, ಸ್ಥೂಲವಾದ ಶಾರೀರಿಕ ದಂಡಕ್ಕೆ ಹೋಲಿಕೆಯಾಗುವುದು? ಪಾಪಗಳು ಉಂಟಾಗಲು ಮತ್ತು ಮುಂದುವರೆಯಲು ಶಾರೀರಿಕ ದಂಡವೇ ಅತ್ಯಂತ ದೋಷಿಯಾಗಿದೆ. ಹಾಗಲ್ಲದೆ ವಾಚಿಕ ದಂಡವಲ್ಲ ಅಥವಾ ಮಾನಸಿಕ ದಂಡವೂ ಅಲ್ಲ."

"ಒಳ್ಳೆಯದು ಗೃಹಸ್ಥನೇ, ನೀನು ಸತ್ಯದ ಆಧಾರದ ಮೇಲೆ ಚರ್ಚಿಸಲು ಬಂದಿರುವೆಯಾದರೆ ಅದರ ಬಗ್ಗೆ ಸ್ವಲ್ಪ ಚರ್ಚಿಸೋಣ."

"ಭಂತೆ, ನಾನು ಸತ್ಯದ ಆಧಾರದ ಮೇಲೆ ಚರ್ಚಿಸುವೆ. ಈಗ ಅದರ ಬಗ್ಗೆ ಸ್ವಲ್ಪ ಮಾತನಾಡೋಣ."

ಈಗ ಭಗವಾನರ ಮತ್ತು ಉಪಾಲಿಯ ನಡುವೆ ಜೀವಂತ ಚರ್ಚೆಯು ಆರಂಭವಾಗುತ್ತದೆ. ಉಪಾಲಿಯು ಕೋಟ್ಯಾಧೀಶನಾಗಿದ್ದನು. ಹಾಗು ನಿಗಂಠನಾತಪುತ್ತರ ಪ್ರಧಾನ ಗೃಹಸ್ಥ ಶಿಷ್ಯನಾಗಿದ್ದನು.

"ಗೃಹಸ್ಥನೇ, ಇದರ ಬಗ್ಗೆ ನೀನು ಏನೆಂದು ಯೋಚಿಸುವೆ? ಊಹಿಸು! ಇಲ್ಲಿ ಹಲವು ನಿಗಂಠ ತಪಸ್ವಿಗಳು ರೋಗಕ್ಕೆ ಈಡಾಗಿದ್ದಾರೆ ಮತ್ತು ಹಾಸಿಗೆ ಹಿಡಿದಿದ್ದಾರೆ, ನೋವು ಅನುಭವಿಸುತ್ತಿದ್ದಾರೆ. ಅವರಿಗೆ ಔಷಧವಾಗಿ ತಣ್ಣೀರನ್ನು ಬಳಸಬೇಕೆಂದು ವೈದ್ಯರು ತಿಳಿಸುತ್ತಾರೆ. ಹಾಗು ಬಿಸಿನೀರನ್ನು ತಡೆಯಲು ಹೇಳುತ್ತಾರೆ (ಕಾಮಾಲೆಯಂತಹ ರೋಗಕ್ಕೆ ತಣ್ಣೀರನ್ನೇ ಬಳಸಬೇಕೆಂದು ವೈದ್ಯರು ಹೇಳಿರುತ್ತಾರೆ)."

"ಆದರೆ ನಿಗಂಠನೊಬ್ಬನು ತನ್ನ ನಿಯಮದಂತೆ ತಣ್ಣೀರು ಬಳಸಲು ನಿರಾಕರಿಸುತ್ತಾನೆ. ಅದನ್ನು ಆತನು ಕುಡಿಯಲು ಹಾಗೂ ಸ್ನಾನ ಮಾಡಲು ನಿರಾಕರಿಸುತ್ತಾನೆ. ಆತನು ತನ್ನ ವ್ರತದಲ್ಲಿ ನಿಷ್ಠೆಯಿರುವ ತಪಸ್ವಿಯಾಗಿರುತ್ತಾನೆ. ಹೀಗಾಗಿ ಆತನು ಬಿಸಿನೀರನ್ನೇ ಬಳಸುತ್ತ ಎಂದಿಗೂ ತಣ್ಣೀರನ್ನು ಸ್ವೀಕರಿಸುವುದಿಲ್ಲ. ಇದರ ಪರಿಣಾಮವಾಗಿ ಆತನು ಸಾಯುತ್ತಾನೆ."

"ಈಗ ಗೃಹಸ್ಥನೇ, ನಿಗಂಠನಾತಪುತ್ತರ ಪ್ರಕಾರ ಆತನು ಎಲ್ಲಿ ಜನ್ಮಿಸುತ್ತಾನೆ."

ಅದಕ್ಕೆ ಉಪಾಲಿಯು ಹೀಗೆ ಉತ್ತರಿಸುತ್ತಾನೆ: "ಭಂತೆ, ಮನೊಸತ್ತ (ಮಾನಸಿಕ ಜೀವಿಗಳು) ಎಂಬ ದೇವದೇವತೆಗಳಿದ್ದಾರೆ, ಆತನು ಅಲ್ಲಿ ಪುನರ್ಜನ್ಮ ಪಡೆಯುತ್ತಾನೆ."

"ಹೀಗೇಕೆ?" ಎಂದು ಭಗವಾನರು ಪ್ರಶ್ನಿಸುತ್ತಾರೆ.

"ಏಕೆಂದರೆ ಆತನು ಸಾಯುವ ಮುನ್ನ ತನ್ನ ಮನಸ್ಸಿಗೆ ಅಂಟಿದ್ದರಿಂದಾಗಿ ಹೀಗೆ ಆಯಿತು" ಎಂದನು ಉಪಾಲಿ.

ಆಗ ಬುದ್ಧ ಭಗವಾನರು ಆತನಿಗೆ ಎಚ್ಚರಿಸುತ್ತಾರೆ: "ಗೃಹಸ್ಥನೇ, ಗೃಹಸ್ಥನೇ ಎಚ್ಚರದಿಂದಿರು, ಗಮನ ನೀಡಿದ ನಂತರ ಹೇಳಿಕೆ ನೀಡುವವನಾಗು. ಏಕೆಂದರೆ ನಿನ್ನ ಹಿಂದಿನ ಹೇಳಿಕೆ ಈಗಿನದಕ್ಕೆ



ಹೊಂದಿಕೆಯಾಗುತ್ತಿಲ್ಲ. ಅಂದರೆ ಯಾವುದನ್ನು ಈಗ ಹೇಳುತ್ತಿರುವೆಯೋ, ಅದು ನಿನ್ನ ಹಿಂದಿನ ಹೇಳಿಕೆಗೆ ವಿರುದ್ಧವಾಗಿದೆ."

"ಹಾಗಿದ್ದರೂ ಗೃಹಸ್ಥನೇ, ನೀನು ಇಂತಹ ಹೇಳಿಕೆಯನ್ನೇ ಹೇಳಿದ್ದೆ: 'ಭಂತೆ ನಾನು ಸತ್ಯಕ್ಕೆ ಆಧಾರಿತವಾಗಿ ಚರ್ಚಿಸುವೆ, ಹೀಗಾಗಿ ಚರ್ಚಿಸೋಣ" ಎಂದು.

ಆಗ ಉಪಾಲಿಯು ಹೀಗೆ ಮುಂದುವರಿಸಿದನು: "ಭಗವಾನರು ಏನೆಂದೇ ಹೇಳಲಿ, ಆದರೂ ಸಹಾ ಪಾಪವುಂಟಾಗಲು ಮತ್ತು ಮುಂದುವರೆಯಲು ಶಾರೀರಿಕ ದಂಡವೇ ಮಹಾ ದೋಷಿಯೆಂದು ನಾನು ಹೇಳುತ್ತೇನೆ ಹೊರತು ವಾಚಕ ದಂಡವಲ್ಲ ಹಾಗೆಯೇ ಮಾನಸಿಕ ದಂಡವೂ ಅಲ್ಲ."

* * *

ಹೀಗೆ ಹೇಳುವಾಗ ಉಪಾಲಿಗೆ ಶ್ರದ್ಧೆಯುಂಟಾಗಿತ್ತು, ಹಾಗಿರುವಾಗಲೂ ಆತನು ಬುದ್ಧ ಭಗವಾನರಿಂದ ಮತ್ತುಷ್ಟು ಅದ್ಭುತ ಉಪಮೆ ಹಾಗು ವಿವರಣೆ ಆಲಿಸಲು ಆತನು ಮತ್ತೆ ವಾದ ಮುಂದುವರೆಯಲು ಪಟ್ಟು ಹಿಡಿಯುತ್ತಾನೆ, ಮುಂದೆ ಈ ವಿಷಯವನ್ನು ಆತನು ಕೊನೆಯಲ್ಲಿ ತಾನು ರೋಗಿ ನಿಗಂಠರ ಉಪಮೆ ಆಲಿಸಿಯೇ ಮನಸ್ಸಿನಲ್ಲಿಯೇ ಒಪ್ಪಿದೆನು ಹಾಗು ಶ್ರದ್ಧೆಯು ಮೂಡಿತೆಂದು ಹೇಳುತ್ತಾನೆ.

* * *

ಈಗ ಬುದ್ಧ ಭಗವಾನರು ಹೀಗೆ ಕೇಳುತ್ತಾರೆ: "ಗೃಹಸ್ಥನೇ, ಇದರ ಬಗ್ಗೆ ನೀನು ಹೇಗೆ ಯೋಚಿಸುವೆ? ಊಹಿಸು! ನಿಗಂಠನೊಬ್ಬನು ನಾಲ್ಕು ರೀತಿಯ ಸಂಯಮಗಳನ್ನು ಆಚರಿಸುತ್ತಾನೆ. ಅವೆಂದರೆ: 1. ಎಲ್ಲಾ ಬಗೆಯ ನೀರಿನೊಂದಿಗೆ ಸಂಯಮ. 2. ಎಲ್ಲಾ ಪಾಪಗಳೊಂದಿಗೆ ಸಂಯಮ. 3. ಎಲ್ಲಾ ಪಾಪಗಳೊಂದಿಗೆ ಸಂಯಮ ತಾಳಿ ಶುದ್ಧನಾಗಿರುವಿಕೆ. 4. ಎಲ್ಲಾ ಕೆಟ್ಟದರೊಂದಿಗೆ ನಿಯಂತ್ರಣ ಸಾಧಿಸಿ ಸಂಯಮ ಹೆಚ್ಚಿಸುವಿಕೆ; ಹೀಗಿದ್ದರೂ ಆತನು ನಡೆದಾಡುವಾಗ ಹಲವು ಸಣ್ಣ ಕ್ರಿಯೆಗಳ (ಚಿಕ್ಕ

ಜೀವಿಗಳ) ಸಾವಿಗೆ ಕಾರಣಕರ್ತನಾಗುತ್ತಾನೆ. ಅಂತಹ ಅಸಂಗತತೆಗೆ ಯಾವ ಫಲವನ್ನು ನಿಗಂಠಪುತ್ತರು ಹೇಳಿರುವರು?"

"ಭಂತೆ, ಹಾಗೇ ಮಾನಸಿಕವಾಗಿ ಇಚ್ಛೆಪಡದಿದ್ದಾಗ ಅದು ಗಂಭೀರವಾದುದಲ್ಲ ಎನ್ನುತ್ತಾರೆ."

"ಆದರೆ ಗೃಹಸ್ಥನೇ, ಒಬ್ಬನು ಇಚ್ಛೆಪಟ್ಟು ಹಾಗೆ ಮಾಡಿದ್ದರೆ?"

"ಆಗ ಭಂತೆ, ಅದು ಗಂಭೀರವಾದಂತಹ ಪಾಪ."

"ಆದರೆ ಗೃಹಸ್ಥನೇ, ಇಚ್ಛೆಪಡುವಿಕೆಯನ್ನು ನಿಗಂಠನಾತಪುತ್ತರು ಯಾವ ವಿಧದ ದಂಡದಲ್ಲಿ ವರ್ಗೀಕರಿಸುವರು?"

"ಭಂತೆ, ಮಾನಸಿಕ ದಂಡದಲ್ಲಿ."

"ಗೃಹಸ್ಥನೇ, ಗೃಹಸ್ಥನೇ ಎಚ್ಚರದಿಂದಿರು! ಗಮನಕೊಟ್ಟು, ಚಿಂತಿಸಿ ನಂತರ ಹೇಳಿಕೆ ನೀಡು. ನಿನ್ನ ಹಿಂದಿನ ಹೇಳಿಕೆ, ಈಗಿನದಕ್ಕೆ ಹೊಂದಿಕೆಯಾಗುತ್ತಿಲ್ಲ. ಅಂದರೆ ಯಾವುದನ್ನು ಈಗ ನುಡಿಯುತ್ತಿರುವೆಯೋ ಅದು ನಿನ್ನ ಹಿಂದಿನ ಹೇಳಿಕೆಗೆ ವಿರುದ್ಧವಾಗಿದೆ."

"ಒಳ್ಳೆಯದು ಗೃಹಸ್ಥನೇ, ನೀನು ಈ ರೀತಿಯ ನಿರ್ಧಾರವನ್ನು ಮಾಡಿರಲಿಲ್ಲವೇ?" "ಭಂತೆ, ನಾನು ಸತ್ಯದ ಆಧಾರದ ಮೇಲೆ ಚರ್ಚಿಸುವೆ, ಹೀಗಾಗಿ ಚರ್ಚೆಯಾಗಲಿ ಎಂದು ಹೇಳಿರಲಿಲ್ಲವೇ?"

"ಭಗವಾನರು ಏನೇ ಹೇಳಲಿ, ಆದರೂ ಶಾರೀರಿಕ ದಂಡ (ತಪ್ಪು) ಮಹಾ ದೋಷಿಯೆಂದೇ ಹೇಳುತ್ತೇನೆ. ಅದೇ ಪಾಪ ಉಂಟಾಗಲು ಮತ್ತು ಪಾಪ ಮುಂದುವರೆಯಲು ಕಾರಣವೆನಿಸುತ್ತದೆ, ಹೊರತು ವಾಚಿಕ ಕಮ್ಮವಲ್ಲ, ಹಾಗೆಯೇ ಮಾನಸಿಕ ಕಮ್ಮವೂ ಅಲ್ಲ."

"ಗೃಹಸ್ಥನೇ ಇದರ ಬಗ್ಗೆ ಹೇಗೆ ಯೋಚಿಸುವೆ. ನಾಳಂದ ನಗರವು ಸಂವೃದ್ಧಿಯಿಂದಿದೆ, ಅಭಿವೃದ್ಧಿ ಹೊಂದಿದೆ, ಪ್ರಗತಿಯ ಪಥದಲ್ಲಿದೆ ಮತ್ತು ಜನರಿಂದ ತುಂಬಿದೆಯಲ್ಲವೇ?"

"ಹೌದು ಭಂತೆ, ಸಂವೃದ್ಧವಾಗಿದೆ, ಪ್ರಗತಿಪಥದಲ್ಲಿದೆ ಮತ್ತು ಅಪಾರ ಜನರಿಂದ ತುಂಬಿದೆ."



"ಗೃಹಸ್ಥನೇ, ಇದರ ಬಗ್ಗೆ ಹೇಗೆ ಯೋಚಿಸುವೆ, ಊಹಿಸು! ವ್ಯಕ್ತಿಯೋರ್ವನು ಖಡ್ಗವೊಂದನ್ನು ಝಳಪಿಸುತ್ತ, ತಿರುಗಿಸುತ್ತ ಹೀಗೆ ಹೇಳುವನು: 'ಒಂದೇ ಕ್ಷಣದಲ್ಲಿ ತಕ್ಷಣವೇ ಇಡೀ ನಾಳಂದದ ಜೀವಿಗಳನ್ನೆಲ್ಲಾ ಮಾಂಸದ ರಾಶಿಯನ್ನಾಗಿ ಮಾಡುವೆನು. ಮಾಂಸದ ಗುಡ್ಡೆಯನ್ನಾಗಿ ಮಾಡುವೆನು' ಗೃಹಸ್ಥನೇ ನೀನೇನು ಯೋಚಿಸುವೆ, ಆವ್ಯಕ್ತಿಯು ಹಾಗೆ ಮಾಡಲು ಶಕ್ತನೇ."

"ಭಂತೆ, 10, 20, 30, 40 ಅಥವಾ 50 ಜನರು ಇದ್ದರೂ ಸಹಾ ನಾಳಂದ ನಗರದ ಜೀವಿಗಳನ್ನು ಮಾಂಸದ ರಾಶಿ ಅಥವಾ ಮಾಂಸದ ಗುಡ್ಡೆಯನ್ನಾಗಿ ಮಾಡಲಾರರು. ಹಾಗಿರುವಾಗ ಏಕೈಕ ವ್ಯಕ್ತಿಯು ಯಾವ ಲೆಕ್ಕ? ಆತನು ಹಾಗೆ ಮಾಡಲಾರನು."

"ಗೃಹಸ್ಥನೇ ಇದನ್ನು ಹೇಗೆ ಯೋಚಿಸುವೆ, ಊಹಿಸು! ಒಬ್ಬ ಸಮಣನೋ ಅಥವಾ ಒಬ್ಬ ಬ್ರಾಹ್ಮಣನೋ ಇದ್ದಿಶಕ್ತಿ ಸಂಪನ್ನನಾಗಿ ಹಾಗು ಮನಸ್ಸಿನ ಮೇಲೆ ಪ್ರಭುತ್ವ ಸಾಧಿಸಿರುವವನಾಗಿ, ಅತೀಂದ್ರಿಯ ಬಲಗಳನ್ನು ಪಡೆದವನಾಗಿದ್ದು, ಹೀಗೆ ಹೇಳುತ್ತಾನೆ: 'ಕೇವಲ ಒಂದೇ ದ್ವೇಷದ ಮಾನಸಿಕ ಸ್ಥಿತಿಯ ಕಮ್ಮದಿಂದಾಗಿ ನಾನು ಈ ನಾಳಂದ ನಗರವನ್ನು ಬೂದಿ ಮಾಡಿಬಿಡುವೆ'. ಗೃಹಸ್ಥನೇ ನೀನು ಯಾವರೀತಿ ಯೋಚಿಸುವೆ, ಅಂತಹ ಸಮಣ ಅಥವಾ ಬ್ರಾಹ್ಮಣ ಅಂತಹುದನ್ನು ಮಾಡುವನೇ?"

"ಹೌದು ಭಂತೆ, ಇದ್ದಿಸಂಪನ್ನನಾದ, ಮನಸ್ಸಿನ ಮೇಲೆ ಅಪಾರ ಪ್ರಭುತ್ವವಿರುವ ಅತೀಂದ್ರಿಯ ಬಲಗಳು ಇರುವವನು ಖಂಡಿತವಾಗಿ ಒಂದೇ ನಾಳಂದವೇಕೆ, 10, 20, 30, 40 ಅಥವಾ 50 ನಾಳಂದಗಳನ್ನು ಸಹಾ ತನ್ನ ದ್ವೇಷಯುತ ಮಾನಸಿಕ ಏಕಚಿತ್ತದಿಂದ, ಮಾನಸಿಕ ಕಮ್ಮದಿಂದಾಗಿ ಮಾಡಬಲ್ಲನು. ಅಂತಹವನಿಗೆ ಕ್ಷುಲ್ಲುಕವಾದ ನಾಳಂದ ಲೆಕ್ಕವೇ?"

"ಗೃಹಸ್ಥನೇ, ಗೃಹಸ್ಥನೇ ಎಚ್ಚರದಿಂದಿರು, ಗಮನಕೊಟ್ಟು ನಂತರ ಹೇಳಿಕೆ ನೀಡುವವನಾಗು. ನಿನ್ನ ಹಿಂದಿನ ಹೇಳಿಕೆಯು ಈಗಿನದಕ್ಕೆ ಹೊಂದಿಕೆಯಾಗುತ್ತಿಲ್ಲ. ಅಂದರೆ ಈಗೇನು ನುಡಿಯುತ್ತಿರುವೆಯೋ ಅದು ಹಿಂದಿನ ಹೇಳಿಕೆಗೆ ತದ್ವಿರುದ್ಧವಾಗಿದೆ."

“ಒಳ್ಳೆಯದು ಗೃಹಸ್ಥನೇ, ನೀನು ಹೀಗೆ ಆಗಲೇ ಹೇಳಿರಲಿಲ್ಲವೆ: ‘ಭಂತೆ, ನಾನು ಸತ್ಯದ ಆಧಾರದಿಂದ ಚರ್ಚಿಸುತ್ತೇನೆ ಎಂದು. ಹಾಗೆಯೇ ಚರ್ಚಿಸೋಣ ಎಂದು ಹೇಳಿರಲಿಲ್ಲವೇ.”

“ಭಗವಾನರು ಏನೇ ಹೇಳಲಿ, ಆದರೂ ಶಾರೀರಿಕ ದಂಡವೇ ಅತ್ಯಂತ ದೋಷಯುಕ್ತವಾದುದು. ಅದೇ ಪಾಪ ಉಂಟಾಗಲು ಮತ್ತು ಪಾಪ ಮುಂದುವರೆಯಲು ಕಾರಣವಾಗಿದೆಯೇ ಹೊರತು ವಾಚಿಕ ಕಮ್ಮವಲ್ಲ ಮತ್ತು ಮಾನಸಿಕ ಕಮ್ಮವೂ ಅಲ್ಲ.”

“ಗೃಹಸ್ಥನೇ, ಇದರ ಬಗ್ಗೆ ಏನನ್ನು ಹೇಳುವೆ. ದಂಡಕ, ಕಳಿಂಗ, ಮೆಜ್ಝ ಮತ್ತು ಮಾತಂಗ ಭೂಭಾಗಗಳು ಹೇಗೆ ಅರಣ್ಯಗಳಾಗಿ ಪರಿವರ್ತನೆಯಾಯಿತು, ತಿಳಿದಿರುವೆಯಾ?”

“ಹೌದು ಭಂತೆ, ನಾನು ದಂಡಕ, ಕಳಿಂಗ, ಮೆಜ್ಝ ಮತ್ತು ಮಾತಂಗ ಭೂಭಾಗಗಳು ಹೇಗೆ ಅರಣ್ಯಗಳಾಗಿ ಪರಿವರ್ತನೆಯಾಯಿತು ಎಂದು ತಿಳಿದಿರುವೆ.”

“ಗೃಹಸ್ಥನೇ, ದಂಡಕ, ಕಳಿಂಗ, ಮೆಜ್ಝ ಮತ್ತು ಮಾತಂಗಗಳು ಹೇಗೆ ಅರಣ್ಯಗಳಾಯಿತು?”

“ಭಂತೆ, ನಾನು ಕೇಳಿದಂತೆ ದಂಡಕ, ಕಳಿಂಗ, ಮೆಜ್ಝ ಮತ್ತು ಮಾತಂಗಗಳು ಋಷಿಗಳ ದ್ವೇಷಯುತ ಮಾನಸಿಕ ಏಕಚಿತ್ತದ ಕಾರಣದಿಂದ ಆಗಿವೆ.”

“ಗೃಹಸ್ಥನೇ, ಗೃಹಸ್ಥನೇ ಎಚ್ಚರದಿಂದಿರು, ಗಮನಕೊಟ್ಟು ಕೇಳಿ ನಂತರ ಹೇಳಿಕೆ ನೀಡುವವನಾಗು. ನಿನ್ನ ಹಿಂದಿನ ಹೇಳಿಕೆಯು ಈಗಿನ ಹೇಳಿಕೆಗೆ ಹೊಂದಾಣಿಕೆ ಆಗುತ್ತಿಲ್ಲ. ಅಂದರೆ ಈಗೇನು ನುಡಿಯುತ್ತಿರುವೆಯೋ ಅದು ನಿನ್ನ ಹಿಂದಿನ ಹೇಳಿಕೆಗೆ ತದ್ವಿರುದ್ಧವಾಗಿದೆ.”

“ಒಳ್ಳೆಯದು ಗೃಹಸ್ಥನೇ, ನೀನು ಆಗಲೇ ಈ ರೀತಿಯಲ್ಲಿ ಹೇಳಿರಲಿಲ್ಲವೆ? ‘ಭಂತೆ, ನಾವು ಸತ್ಯದ ಆಧಾರದ ಮೇಲೆ ಚರ್ಚಿಸೋಣ, ಸತ್ಯದ ಆಧಾರಿತ ಚರ್ಚೆ ಆಗುವಂತಾಗಲಿ ಎಂದು ಹೇಳಿರಲಿಲ್ಲವೇ.”



“ಭಂತೆ, ನಾನು ತಮ್ಮ (ಭಗವಾನರ) ಮೊದಲ ಉಪಮೆಗೆ ಪೂರ್ಣ ಸ್ಪಷ್ಟ ಅರಿವಾಗಿ ತೃಪ್ತನಾದೆನು. ಆದರೂ ನಾನು ವಾದವನ್ನು ಮುಂದುವರೆಸಲು ನಿರ್ಧರಿಸಿದೆನು. ಏಕೆಂದರೆ ನಾನು ಭಗವಾನರ ಸಮಸ್ಯೆ ಪರಿಹಾರ ಮಾಡುವಂತಹ ವೈವಿಧ್ಯಗಳನ್ನು ಹೆಚ್ಚು ಹೆಚ್ಚಾಗಿ ಕೇಳಲು ಬಯಸಿದೆನು.”

“ಅದ್ಭುತವು ಭಂತೆ! ಅತ್ಯದ್ಭುತವು ಭಂತೆ! ಭಗವಾನರು ಧಮ್ಮವನ್ನು ಹಲವಾರು ವಿಧಗಳಲ್ಲಿ ಸ್ಪಷ್ಟಪಡಿಸಿದ್ದಾರೆ. ಹೇಗೆಂದರೆ ತಲೆಕೆಳಗಾಗಿರುವುದನ್ನು ಸರಿಯಾಗಿ ಮಾಡಿದಂತೆ, ಅಡಗಿರುವುದನ್ನು ತೆರೆದಿಟ್ಟಂತೆ, ಕಳೆದುಹೋದ ಹಾದಿಯನ್ನು ತೋರಿಸುವಂತೆ, ಕಣ್ಣುಳ್ಳವರಿಗೆ ಕತ್ತಲೆಯಲ್ಲಿ ದೀಪ ಹಿಡಿದಂತೆ, ಪೂಜ್ಯರಾದ ಭಗವಾನರಲ್ಲಿ ನಾನು ಶರಣು ಹೋಗುವೆನು. ಹಾಗೆಯೇ ಅವರ ಧಮ್ಮಕ್ಕೂ ಶರಣು ಹೋಗುವೆನು ಮತ್ತು ಅವರ ಸಂಘಕ್ಕೂ ಶರಣು ಹೋಗುವೆನು. ಭಗವಾನರು ನನ್ನನ್ನು ಉಪಾಸಕನೆಂದು ಇಂದಿನಿಂದ ಜೀವನವಿರುವವರೆಗೂ ಶರಣು ಬಂದವನೆಂದು ಪರಿಗಣಿಸಿರಿ.”

“ಓ ಗೃಹಸ್ಥನೇ, ಪೂರ್ಣವಾಗಿ ಅನ್ವೇಷಿಸಿದ ನಂತರವೇ ಕಾರ್ಯವನ್ನು ಮಾಡುವಂತಾಗು. ನಿನ್ನಂತಹ ಜನಪ್ರಿಯರು ಪೂರ್ಣವಾಗಿ ಅನ್ವೇಷಿಸಿ, ಚಿಂತಿಸಿ, ನಿರ್ಧಾರಕ್ಕೆ ಬರುವುದು ಯೋಗ್ಯವಾದುದು.”

“ಭಂತೆ, ತಾವು ಈ ಮಾತನ್ನು ನುಡಿದುದ್ದರಿಂದಾಗಿ ನಾನು ಹಿಂದಿಗಿಂತಲೂ ಸ್ಪಷ್ಟ ಅರಿವು ಉಳ್ಳವನಾದೆನು ಹಾಗು ಇನ್ನಷ್ಟು ತೃಪ್ತಿ ಹೊಂದಿದೆನು. ಏಕೆಂದರೆ, ಭಂತೆ ನಾನು ಬೇರೆ ಮತಧರ್ಮದವರಿಗೆ ಶಿಷ್ಯನಾಗಿದ್ದರೆ, ಅವರೆಲ್ಲಾ ಇಡೀ ನಾಳಂದ ನಗರದಲ್ಲೆಲ್ಲಾ ಸುತ್ತಾಡಿ ದೊಡ್ಡ ಪತಾಕೆಗಳು ಹಾರಿಸಿ ಹೀಗೆ ಘೋಷಿಸುತ್ತಿದ್ದರು. ಏನೆಂದರೆ: ‘ಗೃಹಸ್ಥ ಉಪಾಲಿಯು ನಮ್ಮಲ್ಲಿಗೆ ಶಿಷ್ಯನಾಗಿ ಬಂದಿದ್ದಾನೆ’. ಆದರೆ ಇನ್ನೊಂದೆಡೆ ಭಗವಾನರು ಹೀಗೆ ಹೇಳಿದ್ದಾರೆ: ‘ಗೃಹಸ್ಥನೇ ಪೂರ್ಣವಾಗಿ ಅನ್ವೇಷಿಸಿದ ನಂತರ ಕಾರ್ಯ ಮಾಡುವಂತಹವನಾಗು, ನಿನ್ನಂಥಹ ಜನಪ್ರಿಯರು ಪೂರ್ಣವಾಗಿ ಅನ್ವೇಷಿಸಿ, ವಿಶ್ಲೇಷಿಸಿ, ವಿಮರ್ಶಿಸಿ ಕಾರ್ಯ ಮಾಡುವುದು ಯೋಗ್ಯವಾದುದು’ ಎಂದು ಹೇಳುತ್ತೀರಿ. ಭಗವಾನ್ ನಾನು ಎರಡನೆಯ

ಬಾರಿಯು ಬುದ್ಧರಿಗೆ ಶರಣು ಹೋಗುವೆನು. ಹಾಗೆಯೇ ಧಮ್ಮ ಮತ್ತು ಸಂಘಕ್ಕೂ ಸಹಾ. ಭಗವಾನರು ನನ್ನನ್ನು ಉಪಾಸಕನೆಂದು ಇಂದಿನಿಂದ ಜೀವನಪರ್ಯಂತದವರೆಗೆ ಪರಿಗಣಿಸಲಿ."

"ಗೃಹಸ್ಥನೇ, ನಿಮ್ಮ ಕುಟುಂಬವು ನಿಗಂಠರಿಗೆ ಬಹುಕಾಲದಿಂದ ಪೋಷಿಸುತ್ತ ಬಂದಿದೆ, ಯಾವಾಗಲೇ ಆಗಲಿ ಅವರು ಬಂದಾಗ ಹಿಂದಿನಂತೆಯೇ ಅವರನ್ನು ಆಹಾರ ಇತ್ಯಾದಿಗಳಿಂದ ಸತ್ಕರಿಸಬೇಕು."

"ಭಗವಾನ್, ಹೀಗೆ ತಾವು ಹೇಳಿದ್ದರಿಂದಾಗಿ ನಾನು ಮತ್ತಷ್ಟು ಸ್ಪಷ್ಟವಾದೆನು ಹಾಗು ಇನ್ನಷ್ಟು ತೃಪ್ತಿ ಹೊಂದಿದೆನು. ಭಗವಾನ್, ಸಮಣ ಗೋತಮರು ಹೀಗೆ ಹೇಳಿದ್ದಾರೆ ಎಂದು ಜನರಿಂದ ಹೀಗೆ ಗಾಳಿ ಸುದ್ದಿಯನ್ನು ಕೇಳಲ್ಪಟ್ಟಿದ್ದೆ: 'ದಾನವನ್ನು ನನಗೆಯೇ ನೀಡಲಿ ಮತ್ತು ಪರರಿಗೆ ನೀಡದಿರಲಿ, ದಾನವನ್ನು ನನ್ನ ಶಿಷ್ಯರಿಗೆ ಮಾತ್ರ ನೀಡಲಿ, ಪರರ ಶಿಷ್ಯರಿಗೆ ನೀಡದಿರಲಿ, ನನಗೆ ನೀಡಿದ ದಾನವೇ ಫಲಕಾರಿ ಹೊರತು ಉಳಿದವರಿಗೆ ನೀಡಿದ್ದಲ್ಲ. ನನ್ನ ಶಿಷ್ಯರಿಗೆ ನೀಡಿದ ದಾನ ಮಾತ್ರ ಫಲಕಾರಿ, ಪರರ ಶಿಷ್ಯರಿಗೆ ನೀಡಿದ ದಾನ ನಿಷ್ಫಲ' ಎಂದು. ಆದರೆ ಇಲ್ಲಿ ನಾನು ಪ್ರತ್ಯಕ್ಷವಾಗಿಯೇ ಕಾಣುತ್ತಿರುವುದು ಏನೆಂದರೆ: 'ಭಗವಾನರು ನಿಗಂಠರಿಗೆ ದಾನ ನೀಡುವುದಕ್ಕಾಗಿ ಪ್ರೋತ್ಸಾಹಿಸುತ್ತಿದ್ದಾರೆ'. ಭಂತೆ, ಇದನ್ನು ನಾನು ಕಾಲ ಕೂಡಿಬಂದಾಗ ತಿಳಿಯುವವನಾಗುತ್ತೇನೆ. ಭಂತೆ, ಇದರಿಂದಾಗಿ ನಾನು ಮೂರನೆಯ ಬಾರಿಯೂ ಭಗವಾನರಿಗೆ ಶರಣು ಹೋಗುತ್ತೇನೆ ಮತ್ತು ತಮ್ಮ ಧಮ್ಮಕ್ಕೂ ಶರಣು ಹೋಗುತ್ತೇನೆ ಹಾಗೆಯೇ ಸಂಘಕ್ಕೂ ಶರಣು ಹೋಗುತ್ತೇನೆ. ಭಗವಾನರು ನನ್ನನ್ನು ಇಂದಿನಿಂದ ಜೀವನಪರ್ಯಂತ ಉಪಾಸಕನೆಂದು ಪರಿಗಣಿಸಿ ಸ್ವೀಕರಿಸಲಿ."

ನಂತರ ಭಗವಾನರು ಆತನಿಗೆ ಹಂತ ಹಂತವಾಗಿ ಧಮ್ಮವನ್ನು ಬೋಧಿಸಿದರು. ದಾನದ ಲಾಭಗಳು, ಶೀಲದ ಬಗ್ಗೆ ಮತ್ತು ಶೀಲದ ಲಾಭಗಳ ಬಗ್ಗೆ, ದಿವ್ಯ ಸ್ಥಿತಿಗಳಾದ ಸುಗತಿಯ ಬಗ್ಗೆ, ಇಂದ್ರಿಯ ಭೋಗಗಳ ಅಪಾಯ ಮತ್ತು ಅವನತಿಯ ಬಗ್ಗೆ. ಕಶ್ಮಲಗಳ ಬಗ್ಗೆ, ತ್ಯಾಗಗಳ ಲಾಭಗಳ



ಬಗ್ಗೆ. ಇವುಗಳ ಬಗ್ಗೆಯ ಬೋಧನೆಯ ನಂತರ ಉಪಾಲಿಯ ಮನಸ್ಸು ಪರಮಾರ್ಥ ವಿಕಾಸಕ್ಕಾಗಿ ಪಕ್ವವಾಗಿ ಈ ಕ್ಷಣದಲ್ಲಿ ನಿಂತಿರುವುದು ಕಂಡು, (ಅಂದರೆ ನೀವರಣ (ಮಾನಸಿಕ ತಡೆರಹಿತ) ರಹಿತ ಪೂರ್ಣ ಶ್ರದ್ಧೆಯಿಂದ ಕೂಡಿದ ಮನಸ್ಸಿನ ಸ್ಥಿತಿ) ಆಗ ಬುದ್ಧರು ಅದ್ವಿತೀಯ ಬೋಧನೆಯಾದ ಆರ್ಯಸತ್ಯವನ್ನು ತಿಳಿಸಿದರು. ಅಂದರೆ ದುಃಖಸತ್ಯ, ದುಃಖ ಸಮುದಯ ಸತ್ಯ, ದುಃಖ ನಿರೋಧ ಸತ್ಯ, ಮತ್ತು ದುಃಖ ನಿರೋಧ ಮಾರ್ಗ ಸತ್ಯಗಳನ್ನು ಬೋಧಿಸಿದರು.

ಹೇಗೆ ಕಲೆರಹಿತ ಸ್ಪಷ್ಟ ಶುಭ್ರವಾದ ಬಿಳಿ ವಸ್ತ್ರವನ್ನು ಬಣ್ಣದಲ್ಲಿ ಅದ್ದಿದಾಗ, ಆ ವಸ್ತ್ರವು ಸಮವಾಗಿ, ಪೂರ್ಣವಾಗಿ ವರ್ಣಮಯ ವಾಗುತ್ತದೋ, ಅದೇರೀತಿಯಲ್ಲಿ ಗೃಹಸ್ಥ ಉಪಾಲಿಯಲ್ಲಿ, ಆಸನದಲ್ಲಿ ಕುಳಿತಿರುವಂತೆಯೇ ಕಲೆಯಿಲ್ಲದ, ನಿರ್ಮಲ ಧಮ್ಮದ ದರ್ಶನವು ಉದಯಿಸಿತು. ಅದೆಂದರೆ: "ಯಾವುದೆಲ್ಲವೂ ಉದಯಿಸುವ ಧಮ್ಮವನ್ನು ಹೊಂದಿದೆಯೋ, ಅವೆಲ್ಲವೂ ನಿರೋಧ (ಅಳಿಯುವ/ಗತಿಸುವ/ನಿಲ್ಲುವ) ಧಮ್ಮವನ್ನು ಹೊಂದಿದೆ."

ಆಗ ಗೃಹಸ್ಥ ಉಪಾಲಿಯು ಧಮ್ಮದ ಮೂಲಕ ಲೋಕೋತ್ತರ ಧಮ್ಮವನ್ನು ಕಂಡನು. ಧಮ್ಮವನ್ನು ಪ್ರಾಪ್ತಿಮಾಡಿದನು. ಧಮ್ಮವನ್ನು ಸ್ಪಷ್ಟವಾಗಿ ಗ್ರಹಿಸಿದನು. ಧಮ್ಮವನ್ನು ಆಳದ ಅರಿವಿನೊಂದಿಗೆ ವೀಕ್ಷಿಸಿದನು. ಹೀಗೆಯೇ ಸಂಶಯಗಳೆಲ್ಲವನ್ನು ದಾಟಿದನು, ದ್ವಂದ್ವಗಳಿಂದ ಮುಕ್ತನಾದನು. ನಂತರ ಬುದ್ಧರಲ್ಲಿ, ಧಮ್ಮದಲ್ಲಿ ಮತ್ತು ಸಂಘದಲ್ಲಿ ಅಪಾರ ಶ್ರದ್ಧೆಯನ್ನು ಪಡೆದವನಾದನು. ಹೀಗಾಗಿ ಆತನು ಲೋಕದ ಯಾವುದಕ್ಕೂ ಅವಲಂಬಿತನಾಗದಂತಹ ಬಿಡುಗಡೆ ಪಡೆದನು.

ನಂತರ ಉಪಾಲಿಯು ಭಗವಾನರಲ್ಲಿ "ಭಗವಾನ್, ನಾನು ಈಗ ಹೋಗಲೇಬೇಕಾಗಿದೆ, ಮಾಡಬೇಕಾದ್ದು ಬಹಳಷ್ಟಿದೆ" ಎಂದು ಹೇಳಿದನು.

ಭಗವಾನ್ ಬುದ್ಧರು "ಗೃಹಸ್ಥನೇ, ಕಾಲೋಚಿತವಾಗಿ ನಿನಗೆ ಸರಿ ಎನಿಸಿದ್ದನ್ನು ಮಾಡು" ಎಂದರು.

## ಒಂದು ವಿಶ್ಲೇಷಣೆ

ಉಪಾಲಿ ಸುತ್ತದಲ್ಲಿ ಎರಡು ವಾಸ್ತವಿಕ, ಸ್ಪಷ್ಟ ಹಾಗೂ ತೀರ ವ್ಯತಿರಿಕ್ತವಾದ, ವೈರುದ್ಧವುಳ್ಳ, ಮಾನವ ದೃಷ್ಟಿಕೋನಗಳನ್ನು ಅತ್ಯಂತ ಕೌಶಲ್ಯಯುತವಾಗಿ ತೆರೆದಿಟ್ಟಿದೆ. ಇವು ಇಡೀ ವಿಶ್ವದಲ್ಲಿ ಸಾಮಾನ್ಯವಾಗಿ ಸಾಕ್ಷಿ ಎನಿಸಿದೆ. ಹಾಗೆಯೇ ಮಾನವನ ಭವಿಷ್ಯವನ್ನು ಉದಾತ್ತವಾಗಿ ಪರಿಣಾಮವುಂಟುಮಾಡಿವೆ. ಜೀವನದಲ್ಲಿ ಹಿಂದೆ ಉಪಾಲಿ ಸುತ್ತದಲ್ಲಿ ಸಮೀಪಿಸುವಂತೆ ಈಗಲೂ ಸಮೀಪಿಸುತ್ತದೆ ಮತ್ತು ಇಂದಿಗೂ ಸಹಾ ಹೆಚ್ಚಾಗಿ ವ್ಯಕ್ತವಾಗಿದೆ. ಹಾಗೆಯೇ ಭವಿಷ್ಯದಲ್ಲೂ ಸಹಾ ಈ ಸುತ್ತದ ಅಗತ್ಯತೆ ಖಂಡಿತವಿದೆ. ಈ ಸುತ್ತವು ಕಾಲತೀತವಾಗಿ ಮತ್ತು ದೇಶಾತೀತವಾಗಿದ್ದು, ಸಾರ್ವತ್ರಿಕವಾಗಿ ಬಳಕೆಯಲ್ಲಿರುವುದು.

ಮಾನವನಲ್ಲಿ ಆಕ್ರಮಿತವಾಗುವ ಎಲ್ಲಾಬಗೆಯ ಸಾರವನ್ನು ಅತಿರೇಕಗಳನ್ನು ಎರಡು ಸೂತ್ರಗಳಲ್ಲಿ ವ್ಯಕ್ತಗೊಳಿಸಬಹುದು. ಅವೆಂದರೆ: "ಮನಸ್ಸಿನ ಮೇಲೆ ಮೈ" (Matter over Mind) ಅಂದರೆ ದೇಹವು ಮನಸ್ಸಿನ ಮೇಲೆ ಆಳ್ವಿಕೆ ಮಾಡುವಂತಹುದು. ಮತ್ತು ಹೀಗಾಗಿ ಶರೀರವೇ ಜೀವನದಲ್ಲಿ ಶಕ್ತವಾದದ್ದು ಎನ್ನುತ್ತಾರೆ. ಇದಕ್ಕೆ ವಿರುದ್ಧವಾಗಿರುವ ಹೇಳಿಕೆ ಎಂದರೆ "ಮೈ ಮೇಲೆ ಮನಸ್ಸು" (Mind over Matter) ಅಂದರೆ ಮನಸ್ಸೊಂದೇ ಶರೀರದ ಆಳ್ವಿಕೆ ನಡೆಸುವಂತಹುದು. ಹೀಗಾಗಿ ಮನಸ್ಸೇ ಜೀವನದಲ್ಲಿ ಸಶಕ್ತವಾದದ್ದು.

ಬುದ್ಧ ಭಗವಾನರು ತಮ್ಮ ಮೊದಲ ಸುತ್ತವಾದ ಧಮ್ಮಚಕ್ರ ಪವತ್ತನ ಸುತ್ತದಲ್ಲಿ ಎರಡುಬಗೆಯ ಅತಿರೇಕಗಳನ್ನು ತಿಳಿಸಿದ್ದಾರೆ. ಅವೆಂದರೆ: ಇಂದ್ರಿಯ ಭೋಗದಲ್ಲಿ ತಲ್ಲೀನವಾಗುವಿಕೆ ಮತ್ತು ದೇಹದಂಡನೆಯಲ್ಲಿ ಆನಂದಿಸುವಿಕೆ. ಇವೆರಡೂ ಸಹಾ ಧರ್ಮದ ಹೆಸರಿನಲ್ಲಿ ಆಚರಣೆಯಲ್ಲಿವೆ. ಧಮ್ಮವು ಸ್ವ-ಪರಿಶುದ್ಧತೆಗಾಗಿಯೇ ಇರುವುದರಿಂದಾಗಿ ಎಲ್ಲಾ ಶಾರೀರಿಕ ಮತ್ತು ಮಾನಸಿಕ ಬಂಧನಗಳಿಂದ ಬಿಡುಗಡೆಯಾಗಬೇಕು. ಆದರೆ ಒಬ್ಬ ವ್ಯಕ್ತಿಯು ಈ ಎರಡರದಲ್ಲಿ ಯಾವುದೇ ಅತಿರೇಕಕ್ಕೆ ಬಲಿಯಾದಾಗ,



ಆಗ ಧರ್ಮವೇ ಕಳಂಕಿತವಾಗುತ್ತದೆ. ಉಚ್ಛಮಟ್ಟದಲ್ಲಿ ಭ್ರಷ್ಟವಾಗಿ ದುಃಖಕ್ಕೆ ಮತ್ತು ದೌರ್ಭಾಗ್ಯಕ್ಕೆ ಕರೆದೊಯ್ಯುತ್ತದೆ.

ಈಗ ಈ ಎರಡು ಅತಿರೇಕಗಳು ಅತಿ ಸನಿಹದಿಂದ ಸಂಪರ್ಕ ಏರ್ಪಟ್ಟಿವೆ. ಇವೆರಡನ್ನೂ ಈಗಾಗಲೇ ಹೇಳಲಾಗಿದೆ. ಒಂದು ಹೀಗೆ ಹೇಳುವುದು "ದೇಹವೊಂದೇ ಗಣನೀಯವಾದದ್ದು" ಅಂದರೆ ಜೀವನದಲ್ಲಿ ದೇಹವೇ ಅತ್ಯಂತ ಶಕ್ತಿಯುತವಾದದ್ದು. ಆದ್ದರಿಂದಾಗಿ ದೇಹದಲ್ಲಿ ಆನಂದಪಡಿ. ಇಂದ್ರಿಯ ಭೋಗದಲ್ಲಿ ತಲ್ಲೀನರಾಗಿ ಅಥವಾ ಕಠೋರ ದೇಹದಂಡನೆ ಮಾಡಿ. ಇದೊಂದು ವಿಧವಾದ ಭೌತಿಕತೆಯ ಜೀವನ, ದೃಷ್ಟಿಕೋನವಾಗಿದೆ.

ಹಿಂದಿನ ವೇದಗಳ ಕಾಲದಿಂದ ಬುದ್ಧರ ಕಾಲದವರೆವಿಗೂ ಭೌತಿಕತೆಯನ್ನು ಈಗಿನಂತೆಯೇ ವೈಭವೀಕರಿಸುವ ಗುರುಗಳು ಇದ್ದರು. ಅವರ ಬೋಧನೆಯಂತೆ ಎಲ್ಲಿಯವರೆಗೆ ನೀವು ಜೀವಂತವಿರುವಿರೋ ನೀವು ತಿನ್ನಿ, ಕುಡಿಯಿರಿ ಮತ್ತು ಆನಂದದಿಂದಿರಿ. ಯಾವಾಗ ನಿಮಗೆ ಸಾವು ಬರುತ್ತದೋ ಆಗ ದೇಹವು ನಾಶವಾಗಿ, ಅದರೊಂದಿಗೆ ಎಲ್ಲಾ ಆನಂದಗಳು, ಸಂತೋಷಗಳೆಲ್ಲವೂ ಕೊನೆಗೊಳ್ಳುವುದು.

ಈಗ ಈ ಭೌತಿಕತೆಯ ದೃಷ್ಟಿಕೋನವಾದ "ಮನಸ್ಸಿನ ಮೇಲೆ ಮೈ" ಇದು "ನಾನು ನಿನಗಿಂತ ಪವಿತ್ರ" ಎಂಬ ಭಾವದೊಂದಿಗೆ ವೇಷ ಧರಿಸಿರುತ್ತದೆ. ಅಂದರೆ ನಾನೇ ಅತ್ಯಂತ ಧಾರ್ಮಿಕ ಮನುಷ್ಯ. ನಾನು ಎಂಬುದು ಪ್ರಶ್ನಾತೀತವಾಗಿ ಪ್ರಾರ್ಥನೆಗೆ, ಜಪಕ್ಕೆ, ಹಾದಿಗೆ, ನೃತ್ಯಕ್ಕೆ, ಸಮಾರಂಭಕ್ಕೆ, ಹಬ್ಬಗಳಿಗೆ ಇತ್ಯಾದಿಗಳಿಗೆ ಹೊಂದಿಕೊಳ್ಳುತ್ತದೆ. ಆದ್ದರಿಂದಾಗಿ ಧರ್ಮವು ಸ್ವ-ಭೋಗದ ಸಾಧನವಾಗಿದೆ. ಇವೆಲ್ಲಾ ಬಾಹ್ಯದ ಆಕಾರಗಳೆಲ್ಲವೂ ಮನಸ್ಸಿನ ಮೇಲೆ ಸಕಾರಾತ್ಮಕವಾಗಿ ಪರಿಣಾಮ ಬೀರಲಾರವು. ಏಕೆಂದರೆ ಅಲ್ಲಿ ಧರ್ಮವೇ ಬೆಂಬಲಕಾರಿ ಸೂತ್ರವನ್ನು ಹೇಳಿದೆ. ಅದೆಂದರೆ: "ಮನಸ್ಸಿನ ಮೇಲೆ ಮೈ" ಹೀಗಾಗಿ ಅವರಿಗೆ ಬೇರೆ ದಾರಿಯೇ ಇಲ್ಲವಾಗಿದೆ.

ಇದಕ್ಕೆ ವ್ಯತಿರಿಕ್ತವಾದ ದೃಷ್ಟಿಕೋನವೇ "ಮೈ ಮೇಲೆ ಮನಸ್ಸು" ಯಾವಾಗ ಇದು ಧರ್ಮಕ್ಕೆ ಸಂಬಂಧಿಸುವುದೋ, ಆಗ ಜೀವನಕ್ಕೆ ಸಮೀಪಿಸಿದಾಗ ಅದರ ಗುರಿಯು "ಸ್ವ-ಪರಿಶುದ್ಧತೆ" ಆಗುತ್ತದೆ. ಅಂದರೆ ಚಿತ್ತದ ಪರಿಶುದ್ಧತೆಯಾಗುತ್ತದೆ. ಹಾಗೆಯೇ ಧಮ್ಮಿಕ ಸ್ವಾತಂತ್ರ್ಯಕ್ಕೆ ಸಾಧನವೂ ಆಗುತ್ತದೆ. ಬಂಧನವಾಗಲಿ ಅಥವಾ ಬಿಡುಗಡೆಯಾಗಲಿ ಮನಸ್ಸಿನಿಂದಲೇ ಆಗಿದೆ. ಆದ್ದರಿಂದಾಗಿ ನಾವು ಮನಸ್ಸನ್ನು ಈ ರೀತಿ ಅಭಿವೃದ್ಧಿಗೊಳಿಸಿ, ಪರಿಶುದ್ಧಗೊಳಿಸಬೇಕೆಂದರೆ, ಅದರಿಂದಾಗಿ ಸ್ವಪರಿವರ್ತನೆಯಾಗಿ, ನಿಬ್ಬಾಣದ ನೇರ ಸಾಕ್ಷಾತ್ಕಾರದ ಅನುಭವವಾಗಬೇಕಿದೆ. ಅಂದರೆ ಚಿಂತನಾಮಯ ಪ್ರಜ್ಞಾದಿಂದ ಭಾವನಾಮಯ ಪ್ರಜ್ಞಾ ಲಭಿಸಬೇಕಾಗಿದೆ.

ಹೇಗೆ ಒಬ್ಬನು ಧರ್ಮದ ಹೆಸರಿನಲ್ಲಿ ಇಂದ್ರಿಯ ಭೋಗದಲ್ಲಿ ತಲ್ಲೀನನಾಗುವನೋ ಹಾಗೆಯೇ ಧರ್ಮದ ಹೆಸರಿನಲ್ಲಿ ದೇಹದಂಡನೆಯನ್ನು ಮಾಡಿಕೊಳ್ಳುತ್ತಾನೆ. ತನ್ನನ್ನೇ ಚಿತ್ರಹಿಂಸೆಗೆ ಗುರಿಮಾಡಿಕೊಳ್ಳುತ್ತಾನೆ. ಅದು ಜೀವನದ ದುಃಖಗಳಿಗೆ ಅಂತ್ಯಮಾಡುವ ಮಾರ್ಗದಂತೆ ಬಳಸುತ್ತಾನೆ. ಉದಾಹರಣೆಗೆ ವ್ಯಕ್ತಿಯೊಬ್ಬನು ತಪ್ಪು ಕೃತ್ಯದಲ್ಲಿ ತಲ್ಲೀನನಾಗುವಾಗ, ಅದು ಆತನ ಮನಸ್ಸಿನ ಗಮನಕ್ಕೂ ಬಂದಾಗ, ಆಗ ದೇಹದಂಡನೆ ಮಾಡಿಕೊಳ್ಳುವ ಮನುಷ್ಯ ಸಮಾಧಾನಿಸಿಕೊಳ್ಳುವುದು ಏನೆಂದರೆ ತಾನು ದೇಹದಂಡನೆ ಮಾಡಿಕೊಳ್ಳುವುದೇ ಪರಿಹಾರವೆಂದು. ಹೀಗಾಗಿ ಮನಸ್ಸಿಗೆ ಏನೇ ಮಾಡುವುದರ ಅಗತ್ಯವಿಲ್ಲ. ಆದರೆ ವಾಸ್ತವವೇನೆಂದರೆ ಆತನ ಕೆಟ್ಟ ಕೃತ್ಯ ಸಹಾ 'ಮನೋಮಯ'ವಾಗಿದೆ. ಅಂದರೆ ಮನೋರೂಪಿತವಾಗಿದೆ. ಶರೀರ ನಿರ್ಮಿತವಷ್ಟೇ ಅಲ್ಲ, ಹೀಗಾಗಿ 'ಮೈಮೇಲೆ ಮನಸ್ಸು' ಎಂಬುದು ಖಂಡಿತವಾಗಿಯೂ ಶ್ರೇಷ್ಠವಾದುದಾಗಿದೆ. ಹೇಗೆಂದರೆ ಇದರಿಂದಾಗಿ ಒಬ್ಬನು ಎಲ್ಲಾರೀತಿಯ ಅತಿರೇಕಗಳಿಂದ ಮೀರಿಹೋಗುತ್ತಾನೆ.

ಈಗ ಭಗವಾನ್ ಬುದ್ಧರ ಹಾಗು ಉಪಾಲಿಯ ಚರ್ಚೆಯ ಅಂಶಗಳನ್ನು ಪುನರಾವಲೋಕನ ಮಾಡಿಕೊಳ್ಳುವುದು ಸಮಂಜಸವಾಗಿದೆ. ಇಲ್ಲಿ ಉಪಾಲಿಯು ತನ್ನ ಗುರುವಿನ ಮೇಲಿನ ನಂಬಿಕೆಯಂತೆ ಆ ಸಿದ್ಧಾಂತದಲ್ಲೇ ಮೊಂಡನಾಗಿ ಸಿಲುಕಿಕೊಳ್ಳುತ್ತಾನೆ. ಅದರಂತೆಯೇ ಆತನು



ಸಹಾ ದೇಹದಂಡನೆಗಳ ನಾನಾ ಆಚರಣೆಗಳಲ್ಲಿ ತೊಡಗಿಸಿಕೊಳ್ಳುತ್ತಾನೆ. ಹೀಗಾಗಿ ಅವರು ಶಾರೀರಿಕ ದಂಡವು, ವಾಚಿಕ ಮತ್ತು ಮಾನಸಿಕ ದಂಡಕ್ಕಿಂತ ಮಹಾ ದೋಷಯುಕ್ತವು ಹಾಗೂ ಸಶಕ್ತವು ಎಂದು ನಂಬಿಬಿಡುತ್ತಾರೆ. ಹೀಗಾಗಿ ನಿಗಂಠ ವಚನ ಉಕ್ತಿ ಏನೆಂದರೆ ಶಾರೀರಿಕ ತಪ್ಪು, ಮಾನಸಿಕ ಮತ್ತು ವಾಚಿಕಕ್ಕಿಂತ ಹಿರಿದಾದುದು ಹಾಗೂ ಅವರ ಶಾರೀರಿಕ ಪಾಪ ಹಿರಿದಾದಷ್ಟೂ ಅವರು ಕಠೋರ ದೇಹದಂಡನೆ ಮಾಡಿಕೊಂಡು ಪರಿಹರಿಸಿಕೊಳ್ಳುವುದು.

ಆದರೆ ಬುದ್ಧ ಭಗವಾನರು ಇದನ್ನು ತಿರಸ್ಕರಿಸಿದರು. ಭಗವಾನರು ಸ್ಪಷ್ಟವಾಗಿಯೇ ಸತ್ಯಾನ್ವೇಷಣೆಯು ಅತಿರೇಕಗಳನ್ನು ಮೀರಬೇಕೆಂದು ಹೇಳಿದ್ದಾರೆ. ಹಾಗು ಶೀಲ, ಸಮಾಧಿ ಮತ್ತು ಪ್ರಜ್ಞಾಯುತ ಮಧ್ಯಮ ಮಾರ್ಗವನ್ನು ಅನುಸರಿಸಲು ಒತ್ತು ನೀಡಿದ್ದಾರೆ. ಶೀಲವನ್ನು ಆಚರಿಸುವುದರಿಂದಾಗಿ ಒಬ್ಬನು ಸದ್ಗುಣಗಳನ್ನು ಅಭಿವೃದ್ಧಿಗೊಳಿಸುತ್ತಾನೆ ಮತ್ತು ಸ್ವ-ನಿಯಂತ್ರಣವನ್ನು ಸಾಧಿಸುತ್ತಾನೆ. ಹಾಗೆಯೇ ಸಮಾಧಿಯನ್ನು ಸಾಧಿಸುವುದರಿಂದಾಗಿ ಒಬ್ಬನು ತನ್ನ ಚಿತ್ತಶುದ್ಧಿಯನ್ನು ಮಾಡಿಕೊಂಡು ಮನಸ್ಸನ್ನು ಬಲಿಷ್ಠಗೊಳಿಸುತ್ತಾನೆ ಮತ್ತು ಅದರಿಂದಾಗಿ ಅಭಿಜ್ಞಾ (ಅತೀಂದ್ರಿಯ ಬಲಗಳನ್ನು) ಪ್ರಾಪ್ತಿಮಾಡುತ್ತಾನೆ ಮತ್ತು ಪ್ರಜ್ಞಾ ಆಧಾರಿತ ಧ್ಯಾನವಾದ ವಿಪಸ್ಸನ ಭಾವನದಿಂದಾಗಿ ಒಬ್ಬನು ಪರಮಾರ್ಥಿಕ ಹಂತದಲ್ಲಿ ಪರಿಶುದ್ಧಿ ಪಡೆಯುತ್ತಾನೆ. ಹಾಗೆಯೇ ಎಲ್ಲಾ ಬಂಧನಗಳಿಂದ ಮತ್ತು ದುಃಖಗಳಿಂದ ವಿಮುಕ್ತಿ ಸಾಧಿಸುತ್ತಾನೆ.

ಉಪಾಲಿಯು ಸತ್ಯತೆಗಾಗಿ ಬುದ್ಧ ಭಗವಾನರ ಸರಳ ಮತ್ತು ನೇರವಾದ ವಿಧಾನವನ್ನು ಮನಸ್ಸಿನಲ್ಲಿಯೇ ಅಪಾರವಾಗಿ ಮೆಚ್ಚಿಕೊಂಡನು. ಅವರ ಸೂತ್ರವಾದ "ಮೈ ಮೇಲಿನ ಮನಸ್ಸು". ಇದರ ಬಗ್ಗೆ ಇನ್ನಷ್ಟು ಸಾಮ್ಯತೆಗಳನ್ನು ಪಡೆಯುವುದಕ್ಕಾಗಿ ಮತ್ತು ಅದ್ಭುತವಾದ ಪ್ರವಚನ ಆಲಿಸಲು ಆತ ಸ್ವಲ್ಪ ಹತಮಾರಿಯಂತೆಯೂ ಕಂಡುಬರುತ್ತಾನೆ. ಆದರೆ ಭಗವಾನರಿಗೆ ಪ್ರತಿ ಸನ್ನಿವೇಶದ ಪರಿಣಾಮವು ತಿಳಿದಿತ್ತು. ಹಾಗು ಉಪಾಲಿಗೆ ಹೇಗೆ ಸಿಕ್ಕಿಸಬೇಕೆಂದು ತಿಳಿದಿತ್ತು. ಆದ್ದರಿಂದ ಅವರು ಚರ್ಚೆಗೆ ಮುನ್ನವೇ ಈ ರೀತಿ ನುಡಿದು ಆತನಲ್ಲಿ ಸತ್ಯಜಾಗೃತಿಯನ್ನುಂಟು ಮಾಡುತ್ತಾರೆ.

"ಒಳ್ಳೆಯದು ಗೃಹಸ್ಥನೇ, ನೀವು ಸತ್ಯದ ಆಧಾರಿತವಾಗಿ ಚರ್ಚೆಗೆ ಸಿದ್ಧನಾಗಿದ್ದರೆ, ನಾವು ಸ್ವಲ್ಪ ಮಾತನಾಡೋಣ" ಎಂದಾಗ ಉಪಾಲಿಯು ಒಪ್ಪುತ್ತಾನೆ. ಆಗ ಭಗವಾನರು ಒಂದರ ನಂತರ ಮತ್ತೊಂದು ಪ್ರಶ್ನೆಗಳನ್ನು ಹಾಕುತ್ತಾರೆ.

ಮೊದಲಿಗೆ ಭಗವಾನರು ನಿಗಂಠರ ವ್ಯರ್ಥವಾದ ಆಚರಣೆಯಿಂದಾಗಿ ಕಾವಾಲೆ ರೋಗದ ವರ್ಣನೆ ಮಾಡುತ್ತಾರೆ. ಯೋಗ್ಯವಾದ ಪರಿಹಾರವಿದ್ದರೂ ತಣ್ಣನೆಯ ನೀರನ್ನು ಬಿಟ್ಟು, ವ್ರತದ ಹೆಸರಿನಲ್ಲಿ ಬಿಸಿ ನೀರನ್ನು ಸೇವಿಸುತ್ತಲೇ ತಣ್ಣೀರಿಗೆ ಹಾತೊರೆಯುವುದನ್ನು ಹೇಳುತ್ತಾರೆ. ನಂತರ ತನ್ನ ದಡ್ಡತನದಿಂದಾಗಿ ಆತನು ಸತ್ತಾಗ, ಆತನಲ್ಲಿ ತೀವ್ರ ಬಯಕೆಗಳು ಇದ್ದು ಅತೃಪ್ತನಾಗಿರುವುದು ತಿಳಿಸುತ್ತಾರೆ. ಅದರ ಬಗ್ಗೆ ಭಗವಾನರು ಆತನಿಗೆ ಹೀಗೆ ಕೇಳುತ್ತಾರೆ "ಆತನೆಲ್ಲಿ ಜನ್ಮಿಸುವನು?"

ಉಪಾಲಿ "ಮನೋಚಿತ್ತ ಎಂಬ ದೇವತೆಗಳ ಮಧ್ಯೆ ಜನ್ಮಿಸುತ್ತಾನೆ" ಎನ್ನುತ್ತಾನೆ.

"ಹೀಗೇಕೆ ?"

"ಏಕೆಂದರೆ ಆತನು ಮರಣದ ಸಮಯದಲ್ಲಿ ಚಿತ್ತಬಂಧನಗಳಿಂದ ಕೂಡಿದ್ದನು."

ಈ ರೀತಿಯಾಗಿ ಉಪಾಲಿಯೇ ನೇರವಾಗಿ ಸತ್ಯವನ್ನು ಒಪ್ಪಿಕೊಂಡಂತೆ ಆಗಿತ್ತು. ಮತ್ತು ಆಗ ಬುದ್ಧ ಭಗವಾನರು ಆತನಿಗೆ ಎಚ್ಚರಿಸುತ್ತಾರೆ. ಆದರೂ ಸಹಾ ಆತನು ವಾದವನ್ನು ಮುಂದುವರೆಸುತ್ತಾನೆ. ಏಕೆಂದರೆ ಆತನು ಇನ್ನಷ್ಟು ಕೇಳಬಯಸಿದ್ದನು. ಆಗ ಭಗವಾನರು ಎರಡನೆಯ ಪ್ರಶ್ನೆಯನ್ನು ಕೇಳುತ್ತಾರೆ: "ಊಹಿಸು! ಉಪಾಲಿ, ನಿಗಂಠನು ನಾಲ್ಕು ವಿಧದ ಸಂಯಮವುಳ್ಳ ಆಚರಣೆಯನ್ನು ಮಾಡುತ್ತಾನೆ. ಅವೆಂದರೆ ತಣ್ಣೀರಿನ ಬಗ್ಗೆ ಸಂಯಮ, ಪಾಪದ ಬಗ್ಗೆ ಸಂಯಮ ಇತ್ಯಾದಿ ಹೀಗೆ ಪರಿಶುದ್ಧನಾಗಿ ಮತ್ತು ಪಾಪಗಳ ಮೇಲೆಲ್ಲಾ ಸಂಯವನ್ನು ವಿಸ್ತಾರಗೊಳಿಸುತ್ತಾನೆ. ದೇಹದಂಡನೆಯ ಕಠೋರ ಅಭ್ಯಾಸ ಮಾಡಿಯೂ ಸಹಾ ಕೆಲವೊಮ್ಮೆ



ಆತನು ಸ್ಥಳದಿಂದ ಸ್ಥಳಕ್ಕೆ ಇಡೀ ವರ್ಷ ನಡೆಯುವಾಗ ಅಪಾರ ಸಣ್ಣ ಮತ್ತು ಸೂಕ್ಷ್ಮ ಜೀವಿಗಳು ಸಾಯಲು ಕಾರಣಕರ್ತನಾಗುತ್ತಾನೆ."

ಇಷ್ಟು ಹೇಳಿ ಭಗವಾನರು ಹೀಗೆ ಪ್ರಶ್ನಿಸಿದರು: "ಈ ರೀತಿಯ ಹತ್ಯೆಗಳಿಗಾಗಿ ಯಾವರೀತಿಯ ಸ್ವ-ದಂಡನೆಯಾಗುವುದು?" ಆಗ ಉಪಾಲಿಯು ಇಚ್ಛೆಯುಕ್ತ ನಾಶ ನಡೆದಿದ್ದರೆ ಮಾತ್ರ ದಂಡನೆಯಾಗುವುದೆಂದನು. ಆಗ ಭಗವಾನರು ಮತ್ತೊಮ್ಮೆ ಆತನಿಗೆ ಇದು ಶಾರೀರಿಕ ಪ್ರಕ್ರಿಯೆಯಲ್ಲ, ಬದಲಾಗಿ ಮಾನಸಿಕ ಪ್ರಕ್ರಿಯೆ ಎನ್ನುತ್ತಾರೆ. ಆಗ ಉಪಾಲಿಗೂ ಇದು ನಿರ್ವಿವಾದ ಸತ್ಯವೆಂದು ಅರಿವಾಯಿತು. ಆಗಲೂ ಸಹಾ ಚರ್ಚೆಯೂ ಮುಂದುವರೆಯುವುದು. ಈ ಬಾರಿ ಭಗವಾನರು ಈ ರೀತಿ ಪ್ರಶ್ನಿಸುತ್ತಾರೆ: "ನಾಳಂದವು ಅತ್ಯಂತ ಸಂವೃದ್ಧಮಯ, ಪ್ರಗತಿಮಯ, ಹೆಚ್ಚು ಜನಸಂದಣಿಯುತ ಮತ್ತು ಜನಭರಿತ ನಗರಿಯಲ್ಲವೇ?"

"ಹೌದು" ಎಂದು ಉಪಾಲಿಯು ಹೇಳುವನು.

"ಊಹಿಸು! ಒಬ್ಬ ವ್ಯಕ್ತಿಯು ಕತ್ತಿಯನ್ನು ಝಳಪಿಸುತ್ತಾ "ನಾನು ಖಡ್ಗದಿಂದಾಗಿ ಈ ನಾಳಂದ ನಗರವನ್ನೇ ಮಾಂಸದ ರಾಶಿಯನ್ನಾಗಿ ಮಾಡುವೆನು" ಎಂದಾಗ "ಅದು ಸಾಧ್ಯವಾಗುವ ವಿಷಯವೇ" ಎಂದು ಪ್ರಶ್ನಿಸಿದಾಗ "ಒಬ್ಬನಲ್ಲ ಅವನಂತಹ 50 ಹಂತಕರು ಬಂದರೂ ಸಹಾ ನಾಳಂದವು ಮಾಂಸದ ರಾಶಿಯಾಗಲು ಸಾಧ್ಯವಿಲ್ಲ." ಎನ್ನುತ್ತಾನೆ ಉಪಾಲಿ.

ನಂತರ ಭಗವಾನರು ಹೀಗೆ ಕೇಳುತ್ತಾರೆ: "ಊಹಿಸು! ಒಬ್ಬ ಸಮಣ ಅಥವಾ ಬ್ರಾಹ್ಮಣನು ಇದ್ದಿಬಲಗಳನ್ನು ಹೊಂದಿದಂತಹ ಅತೀಂದ್ರಿಯ ಶಕ್ತಿಯುಳ್ಳವನು, ತಾನು ನಾಳಂದವನ್ನು ಕೇವಲ ಒಂದು ದ್ವೇಷದ ಮಾನಸಿಕ ಬಲದಿಂದಾಗಿ ಬೂದಿಯನ್ನಾಗಿ ಮಾಡುತ್ತೇನೆ ಎಂದಾಗ ಅದು ಸಾಧ್ಯವೇ?"

ಆಗ ಉಪಾಲಿಯು ಹೀಗೆ ಹೇಳುತ್ತಾನೆ: "ಹೌದು, ಅಂತಹ ಇದ್ದಿಸಂಪನ್ನನಾದ ಸಮಣ ಬ್ರಾಹ್ಮಣನು ಕೇವಲ ಒಂದು ನಾಳಂದವಲ್ಲ, ಬದಲಾಗಿ ಐವತ್ತು ನಾಳಂದಗಳನ್ನು ತನ್ನ ತಪಶಕ್ತಿಯಿಂದಾಗಿ ಬೂದಿ ಮಾಡಬಲ್ಲ" ಎನ್ನುತ್ತಾನೆ. ಆಗ ಮತ್ತೆ ಬುದ್ಧ ಭಗವಾನರು ಆತನಿಗೆ ತನ್ನ

ಪ್ರತಿವಾದಿಯ ಹೇಳಿಕೆಯನ್ನು ಸಮರ್ಥಿಸುತ್ತಿರುವುದನ್ನು ಎಚ್ಚರ ನೀಡುತ್ತಾರೆ. ಹಾಗೆಯೇ ದೇಹದ ಮೇಲಿನ ಮನಸ್ಸಿನ ಪ್ರಭುತ್ವವನ್ನು ಸ್ಪಷ್ಟಪಡಿಸುತ್ತಾರೆ.

ಹಾಗಿರುವಾಗಲೂ ಉಪಾಲಿಯು ತನ್ನ ವಾದಕ್ಕೆ ಅಂಟಿ ಹಠಮಾರಿಯಂತೆ ಕಂಡುಬಂದಾಗ, ಇನ್ನೊಂದು ಉದಾಹರಣೆ ವಿವರಿಸುತ್ತಾರೆ. "ಓ ಉಪಾಲಿ, ನಿಮಗೆ ದಂಡಕ, ಕಳಿಂಗ, ಮಜ್ಝ ಮತ್ತು ಮಾತಂಗ ಭೂಮಿಗಳು ಕಾಡುಗಳಾಗಿ ಹೇಗೆ ಪರಿವರ್ತಿತವಾಯಿತು ತಿಳಿದಿದೆಯೇ?" ಆಗ ಉಪಾಲಿಯು "ಹೌದು" ಎಂದು ಹೇಳುತ್ತಾನೆ. ಹೇಗೆಂದು ವಿವರ ಕೇಳಿದಾಗ ಉಪಾದಿಯು ಹೀಗೆ ಹೇಳುತ್ತಾನೆ "ಪೂಜ್ಯರೇ, ದಂಡಕ, ಕಾಳಿಂಗ, ಮಜ್ಝ ಮತ್ತು ಮಾತಂಗ ಭೂಮಿಯು ಋಷಿಗಳ ಮಾನಸಿಕ ಶಕ್ತಿಯ ಶಾಪದಿಂದ ಕಾಡುಗಳಾಯಿತು" ಎನ್ನುತ್ತಾನೆ.

ಕೊನೆಗೆ ಉಪಾಲಿಯು ಹೀಗೆ ಹೇಳುತ್ತಾನೆ: "ಭಂತೇ, ನಾನು ಭಗವಾನರ ಪ್ರಥಮ ಸಾಮ್ಯತೆಗೆ ಸ್ಪಷ್ಟನಾದೆನು ಹಾಗು ಸಂತೃಪ್ತಿ ಹೊಂದಿದೆನು. ಆದರೂ ಸಹಾ ನಾನು ವಾದದಲ್ಲಿ ಮೊಂಡನಾಗಿಯೇ ಮುಂದುವರೆದೆನು. ಏಕೆಂದರೆ ಭಗವಾನರು ಸಮಸ್ಯೆಗಳನ್ನು ಹಲವಾರು ವಿಧಗಳಿಂದ ಪರಿಹರಿಸುವುದನ್ನು ಪ್ರತ್ಯಕ್ಷವಾಗಿ ಕಂಡು ಕೇಳಬೇಕೆಂಬ ಬಯಕೆಯಿತ್ತು."

"ಅದ್ಭುತವು ಭಂತೆ! ಅತ್ಯುತ್ತಮವು ಭಂತೆ! ಭಗವಾನರು ಧಮ್ಮವನ್ನು ಹಲವಾರು ವಿಧಗಳಿಂದ ಸ್ಪಷ್ಟೀಕರಣಗೊಳಿಸಿದ್ದಾರೆ. ಹೇಗೆಂದರೆ ತಲೆಕೆಳಗಾಗಿರುವುದನ್ನು ಸರಿಯಾಗಿ, ನೇರವಾಗಿ ನಿಲ್ಲಿಸುವಂತೆ, ಅಡಗಿರುವುದನ್ನು ನಿಲ್ಲಿಸಿದಂತೆ, ದಾರಿ ತಪ್ಪಿದವರಿಗೆ ಮಾರ್ಗದರ್ಶಿಯಂತೆ, ಕಣ್ಣುಳ್ಳವರಿಗೆ ಕತ್ತಲೆಯಲ್ಲಿ ದೀಪವನ್ನು ಹಿಡಿದಂತೆ. ಭಂತೆ ನಾನು ಈಗಿನಿಂದ ಭಗವಾನರಲ್ಲಿ ಶರಣು ಹೋಗುತ್ತೇನೆ ಮತ್ತು ತಮ್ಮ ಧಮ್ಮಕ್ಕೂ ಶರಣು ಹೋಗುತ್ತೇನೆ ಹಾಗೆಯೇ ಸಂಘಕ್ಕೂ ಶರಣು ಹೋಗುತ್ತೇನೆ. ಭಗವಾನರು ನನಗೆ ಜೀವನವಿರುವ ತನಕವೂ ಉಪಾಸಕನೆಂದು ಪರಿಗಣಿಸಿ ಸ್ವೀಕರಿಸಲಿ."

ನಂತರ ಭಗವಾನರು ಆತನಿಗೆ ಅಷ್ಟೇ ಅಲ್ಲದೆ ಸಮಾಜದಲ್ಲಿರುವ ಉನ್ನತ ವರ್ಗದವರಿಗೆ ತಿಳಿ ಬುದ್ಧಿವಾದ ಹೇಳುವಂತಿದೆ. ಅದು ಹೀಗಿದೆ:



"ಒಳ್ಳೆಯದು ಗೃಹಸ್ಥನೇ, ಅನುಯಾಯಿಯಾಗಲು ಆತುರಬೇಡ. ಮೊದಲು ಗಂಭೀರವಾಗಿ ಚಿಂತನೆ ಮಾಡು, ಕೂಲಂಕುಶವಾಗಿ ಅನ್ವೇಷಿಸು ಮತ್ತು ನೀನು ಯೋಗ್ಯವಾದುದರಲ್ಲಿ ಸ್ಪಷ್ಟನೆ ಪಡೆ. ಏಕೆಂದರೆ ಧಮ್ಮವು ಮಿಕ್ಕ ಎಲ್ಲಾ ಸಿದ್ಧಾಂತಗಳಿಗಿಂತ ಶ್ರೇಷ್ಠವಾಗಿದೆ. ಸರಿಯಾದ ಅನ್ವೇಷಣೆಯ ನಂತರವೇ ನಿನ್ನಂತಹವರು ಅನುಯಾಯಿಯಾಗಬೇಕು." ಇದರ ಅರ್ಥವು ಸ್ಪಷ್ಟವಾಗಿಯೆ ಇದೆ. ಅಂದರೆ ಉಪಾಲಿಯಂತಹವರು ಅಂಧರಾಗಿ ಹಿಂಬಾಲಕರಾಗುವುದು ಭಗವಾನರಿಗೆ ಇಷ್ಟವಿರಲಿಲ್ಲ. ಹೀಗೆ ಅವರು ಸತ್ಯಾನ್ವೇಷಣೆಗೆ ಉತ್ತಮವಾಗಿ ಬುದ್ಧಿವಾದ ನೀಡಿ, ಸ್ಪಷ್ಟೀಕರಿಸಿದ್ದಾರೆ. ಇದರ ಸ್ಪಷ್ಟ ಅರ್ಥವೇನೆಂದರೆ ಕೇವಲ ಬಾಹ್ಯದ ರೂಪ ಬದಲಾವಣೆಯಾದರೆ ಸಾಲದು, ನಿಜವಾದ ಚಿತ್ತ ಪರಿವರ್ತನೆಯಾಗಬೇಕಾಗಿದೆ. ಅಂದರೆ ನಿಗಂಠರ ಅನುಯಾಯಿಯಿಂದ, ನಿಜವಾದ ಬೌದ್ಧ ಹಿಂಬಾಲಕ ಅಂದರೆ ಸತ್ಯದ ಹಿಂಬಾಲಕನಾಗಬೇಕಾಗಿದೆ.

ಹೀಗೆ ಭಗವಾನರು ಹೇಳಿದ ತಕ್ಷಣ ಉಪಾಲಿಯು ಹೀಗೆ ಪ್ರತಿಕ್ರಿಯೆ ವ್ಯಕ್ತಪಡಿಸಿದನು: "ನಿಜಕ್ಕೂ ನಾನ ಎಂದೆಂದಿಗಿಂತಲೂ ಸಂತೃಪ್ತನಾದೆನು. ಭಗವಾನರ ಬುದ್ಧಿವಾದವವನ್ನು ಅಪಾರವಾಗಿ ಮೆಚ್ಚಿ ಪಾಲಿಸುವೆನು. ಭಂತೆ, ಇದೇ ಪರಿಸ್ಥಿತಿಯಲ್ಲಿ ಅನ್ಯ ಮತಾವಲಂಬಿಗಳೂ ಏನಾದರೂ ಇದ್ದಿದ್ದರೆ ಅವರು ದೊಡ್ಡ ಪತಾಕೆ ಹಾರಿಸಿ ಹೀಗೆ ಘೋಷಿಸುತ್ತಿದ್ದರು: "ಓ ಉಪಾಲಿಯು ನಮ್ಮ ಶಿಷ್ಯನಾಗಿ ನಮ್ಮಲ್ಲಿಗೆ ಬಂದಿದ್ದಾನೆ". ಆದರೆ ಭಗವಾನರು ಹಾಗೆ ಮಾಡದೆ, ಪೂರ್ಣವಾಗಿ ವಿಶ್ಲೇಷಿಸಲು, ಅನ್ವೇಷಿಸಲು, ಧಮ್ಮವನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಲು ಪ್ರೋತ್ಸಾಹಿಸುತ್ತಾರೆ. ನಂತರ ಸಮ್ಮತವಾದರೆ ಧಮ್ಮವನ್ನು ಸ್ವೀಕರಿಸುವಂತೆ ಹೇಳುತ್ತಾರೆ. ಆದ್ದರಿಂದಾಗಿ ನಾನು ಎರಡನೆಯಬಾರಿಯು ಭಗವಾನರಲ್ಲಿ ಶರಣು ಹೋಗುವೆನು, ಹಾಗೆಯೇ ಧಮ್ಮಕ್ಕೂ ಮತ್ತು ಸಂಘಕ್ಕೂ ಶರಣು ಹೋಗುವೆನು."

ನಂತರ ಭಗವಾನರು ಮತ್ತೊಂದು ಕರಾರನ್ನು ಉಪಾಲಿಗೆ ಹಾಕುತ್ತಾರೆ. ಅದೇನೆಂದರೆ ಆತನ ಹಿಂದಿನ ಗುರುವಾದ ನಿಗಂಠನಾತಪುತ್ತ ಹಾಗು

ಅವರ ಶಿಷ್ಯರಿಗೆ ಹಿಂದಿನಂತೆಯೇ ದಾನವನ್ನು ಮುಂದುವರೆಸುವುದು. ಇದು ಭಗವಾನರ ಅಪಾರ ಕರುಣೆಗೆ ಸಾಕ್ಷಿಯಾಗಿದೆ. ಉಪಾಲಿಯು ತನ್ನ ಧಮ್ಮವನ್ನು ಬದಲಿಸಿದರೂ ಸಹಾ, ದಾನವನ್ನು ಮೈತ್ರಿಯಂತೆಯೇ ಸರ್ವರ ಹಿತಕ್ಕಾಗಿ ಹಾಗೆಯೇ ಪಾಲನೆ ಮಾಡುವಂತೆ ನುಡಿಯುತ್ತಾರೆ.

ಇದನ್ನು ಆಲಿಸಿದ ಉಪಾಲಿಗೆ ಭಗವಾನರ ಘನಶ್ರೇಷ್ಠತೆ ಅರಿವಾಗಿ ಅಪಾರ ಶ್ರದ್ಧೆಯಿಂದ ಭಗವಾನರಲ್ಲಿ ಹೀಗೆ ಹೇಳುತ್ತಾನೆ: "ಭಗವಾನ್ ನಾನು ಮತ್ತಷ್ಟು ಸ್ವಷ್ಟಿತನಾದೆನು ಮತ್ತು ಸಂತೃಪ್ತಿ ಹೊಂದಿದೆನು. ಭಗವಾನ್ ನಾನು ಜನರಲ್ಲಿ ಹಲವು ಮಿಥ್ಯಾ ವದಂತಿಯನ್ನು ಕೇಳಿದ್ದೆನು; ಅದೇನೆಂದರೆ: ಸಮಣ ಗೋತಮರು ಹೀಗೆ ಹೇಳಿದ್ದಾರೆ: "ದಾನವನ್ನು ನನಗೆಯೇ ನೀಡಿ ಮತ್ತು ನನ್ನ ಶಿಷ್ಯರಿಗೆ ಮಾತ್ರ ನೀಡಿ, ಪರರಿಗೆ ನೀಡದಿರಿ; ನನಗೆ ಮತ್ತು ನನ್ನ ಶಿಷ್ಯರಿಗೆ ನೀಡಿದ ದಾನ ಮಾತ್ರ ಫಲಕಾರಿ, ಪರರಿಗೆ ನೀಡುವುದು ನಿಷ್ಫಲ" ಎಂದು. ಆದರೆ ಪ್ರತ್ಯಕ್ಷವಾಗಿ ಇಲ್ಲಿ ಭಗವಾನರೇ ನಿಗಂಠರಿಗೆ ದಾನ ಮುಂದುವರೆಸಲು ಪ್ರೋತ್ಸಾಹಿಸುತ್ತಿದ್ದಾರೆ. ನಾನು ಅಗತ್ಯ ವಾಗಿರುವುದನ್ನು ಖಂಡಿತ ಮಾಡುತ್ತೇನೆ. ಭಗವಾನ್ ಮೂರನೆಯ ಬಾರಿಗೂ ನಾನು ಭಗವಾನರಲ್ಲಿ ಶರಣು ಹೋಗುತ್ತೇನೆ. ಹಾಗೆಯೇ ಧಮ್ಮಕ್ಕೂ ಶರಣು ಹೋಗುತ್ತೇನೆ ಮತ್ತು ಸಂಘಕ್ಕೂ ಶರಣು ಹೋಗುತ್ತೇನೆ. ಭಗವಾನರು ನನಗೆ ಜೀವವಿರುವತನಕ ಉಪಾಸಕನೆಂದು ಪರಿಗಣಿಸಿ ಸ್ವೀಕರಿಸಲಿ."

ಹೀಗೆ ಉಪಾಲಿಯು ತಿಸರಣ ಸ್ವೀಕರಿಸಿದ ನಂತರ ಭಗವಾನರು ಹಂತಹಂತವಾಗಿ ಧಮ್ಮವನ್ನು ಬೋಧಿಸುತ್ತಾರೆ. ಈ ಬಗೆಯ ಬೋಧನೆಗೆ ನವಾಂಗ ಬುದ್ಧಶಾಸನ ಎನ್ನುತ್ತಾರೆ. ಅವೆಂದರೆ: ದಾನದ ಬೋಧನೆ, ಶೀಲದ ಬಗ್ಗೆ ಬೋಧನೆ, ಸುಗತಿಯ ಬಗ್ಗೆ, ಇಂದ್ರಿಯ ಭೋಗಗಳ ಅಪಾಯ, ತ್ಯಾಗದ ಲಾಭ, ಇವನ್ನೆಲ್ಲಾ ಆಲಿಸಿ ಚಿತ್ತವು ಕಶ್ಮಲಗಳಿಂದ ಪರಿಶುದ್ಧಿಯಾದರೆ ಪರಮಾರ್ಥಿಕವಾಗಿ ಉಚ್ಛಾಯ ಸ್ಥಿತಿಗೆ ಏರಿದರೆ, ಆಗ ಭಗವಾನರು ಅಂತಹವರಿಗೆ ಉದಾತ್ತವಾದ ನಾಲ್ಕು ಆರ್ಯ ಸತ್ಯಗಳನ್ನು ಪ್ರಕಟಗೊಳಿಸುತ್ತಾರೆ. ಇದನ್ನೆಲ್ಲಾ ಆಲಿಸಿದ ಉಪಾಲಿಯು ಲೋಕೋತ್ತರ ಹಂತದಲ್ಲಿ ಪರಿವರ್ತಿತನಾಗಿ ಸೋತಪನ್ನನಾದನು, ಆರ್ಯ (ಶ್ರೇಷ್ಠ) ನಾದನು.



ಈ ರೀತಿಯಾಗಿ ಶ್ರೇಷ್ಠವಾಗಿ ಉದ್ಧಾರ ಹೊಂದಿದ ಉಪಾಲಿಯು ಭಗವಾನರ ಪಾದಕ್ಕೆ ವಂದಿಸುತ್ತಾನೆ. ಹಾಗು ತನ್ನ ಕರ್ತವ್ಯಗಳನ್ನು ನೆನೆದು ಹೀಗೆ ಅಪ್ಪಣೆ ಕೇಳುತ್ತಾನೆ: "ಭಗವಾನ್, ನಾನು ಹೋಗಲೇಬೇಕಾಗಿದೆ. ಮಾಡಬೇಕಾದುದು ಬಹಳವಿದೆ" ಎಂದಾಗ ಭಗವಾನರು ಸಹಾ "ಗೃಹಸ್ಥನೇ, ಕಾಲೋಚಿತವಾಗಿ ನಿನಗೆ ಸರಿ ಎನಿಸಿದ್ದನ್ನು ಮಾಡು" ಎನ್ನುತ್ತಾರೆ.

ನಂತರ ಉಪಾಲಿಯು ಮನೆಗೆ ಹಿಂತಿರುಗುತ್ತಾನೆ. ನಂತರ ತನ್ನ ಕಾವಲುಗಾರರಿಗೆ ಕೆಲವೊಂದು ಅಪ್ಪಣೆ ಮಾಡುತ್ತಾನೆ. ಅದೇನೆಂದರೆ ಈ ಕ್ಷಣದಿಂದ ನಿಗಂಠರು ತನ್ನನ್ನು ಭೇಟಿಯಾಗಲು ಅಥವಾ ಕಾಣಲು ಬಂದರೆ ಅವರೊಂದಿಗೆ ಗೌರವಯುತವಾಗಿ ನಡೆದುಕೊಳ್ಳಬೇಕು. ಅವರನ್ನು ಮುಖ್ಯ ಬಾಗಿಲಿನ ಹತ್ತಿರವಿರುವ ಗೃಹದಲ್ಲೇ ಆಹಾರವನ್ನು ದಾನ ಮಾಡಬೇಕು. ಆದರೆ ತಾನು ಅವರಿಗೆ ದೊರೆಯಲಾರೆ ಎಂದು ಹೇಳಿದನು. ಏಕೆಂದರೆ ವಾದವಿವಾದ, ಕಲಹ ನಿವಾರಿಸಲು ಹಾಗೆ ಹೇಳುತ್ತಾನೆ.

ಸ್ವಲ್ಪಕಾಲದ ನಂತರ ದೀಘ ತಪಸ್ಸಿಯು ಉಪಾಲಿಯನ್ನು ಆತನ ಭವನದಲ್ಲಿ ಕಾಣಲು ಇಚ್ಛಿಸುತ್ತಾನೆ. ಆದರೆ ಕಾವಲುಗಾರ ಆತನನ್ನು ಸತ್ಕಾರ ಕೋಣೆಯಲ್ಲಿ ಕುಳಿತುಕೊಳ್ಳುವಂತೆಯು ಹಾಗು ಆಹಾರವನ್ನು ಅಲ್ಲಿಯೇ ತರುವೆವು ಎಂದು ಹೇಳಿದರು. ಅದನ್ನು ಆಲಿಸಿದ ದೀಘ ತಪಸ್ಸಿಯು "ನಾನು ಭಿಕ್ಷೆಗಾಗಿ ಬಂದಿಲ್ಲ, ನಾನು ಉಪಾಲಿಯನ್ನು ಕಾಣಬೇಕು" ಎಂದನು. ಆಗ ಕಾವಲುಗಾರರು ಉಪಾಲಿಯು ಸಿಗುವುದಿಲ್ಲವೆಂದರು. ಹೀಗಾಗಿ ದೀಘ ತಪಸ್ಸಿಯು ಕೋಪದಿಂದ ಹಿಂತಿರುಗಿದನು, ನಂತರ ನಿರಂಠನಾತಪುತ್ತರಲ್ಲಿ ವಿಷಯವೆಲ್ಲ ತಿಳಿಸಿದನು.

ಹಿಂದೆ ತಿಳಿಸಿದಂತೆಯೇ ದೀಘ ತಪಸ್ಸಿಯು ಮತ್ತು ಅತನ ಗುರುವು ಭಗವಾನರ ಮೇಲೆ ಹೀಗೆ ವದಂತಿಯನ್ನು ಹಬ್ಬಿಸಿದರು. "ಸಮಣ ಗೋತಮರು ಮರುಳು ಮಾಡುವರು, ಅವರು ವಶೀಕರಣ ವಿದ್ಯೆಯಿಂದಾಗಿ, ಪರಧರ್ಮೀಯರನ್ನು ಮತಾಂತರ ಮಾಡುತ್ತಾರೆ". ಆದರೆ ಉಪಾಲಿಗೆ ನೈಜ ಸತ್ಯ ಗೊತ್ತಾಗಿತ್ತು. ಭಗವಾನರು ಆತನಿಗೆ ಸತ್ಯ ಪ್ರಕಾಶಿಸಿ ನಂತರವೂ ವಿಶ್ಲೇಷಿಸಿ, ಅನ್ವೇಷಿಸಿ, ನಿರ್ಧಾರ ಕೈಗೊಳ್ಳುವ ಹೊರತು ಆತುರಬೇಡ

ಎನ್ನುತ್ತಾರೆ. ಹೀಗಾಗಿ ಉಪಾಲಿಗೆ ಸತ್ಯದ ಅರಿವಾದಾಗಿನಿಂದ ನಿಗಂಠರಿಗೆ ಭೇಟಿಯಾಗಬಾರದೆಂದು ತೀರ್ಮಾನಿಸುತ್ತಾನೆ. ನಿಗಂಠರಿಗೆ ಯುಕ್ತಿಯು ತಿಳಿದು, ತಾವೇ ಬೃಹತ್ ಸಮೂಹದೊಂದಿಗೆ ಉಪಾಲಿಯ ಬಳಿಗೆ ಬಂದು ತೆರೆದ ಚರ್ಚೆಗೆ ಬರುತ್ತಾರೆ.

ಅವರೆಲ್ಲ ಅಲ್ಲಿಗೆ ಹೋದಾಗ ಕಾವಲುಗಾರರು ಮತ್ತದೇ ಪುನರುಚ್ಚಾರ ಮಾಡುತ್ತಾರೆ. ಆದರೆ ನಾತಪುತ್ತರು ತಾವು ಆತನನ್ನು ಬೇಟಿಯಾಗಲೇಬೇಕು ಎಂದು ಒತ್ತಾಯಿಸಿದಾಗ ಈ ಸಂದೇಶ ಪಡೆದು ಉಪಾಲಿಯು ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಅವರನ್ನು ಭೇಟಿ ಮಾಡಿದನು. ಹಿಂದೆ ಅವರನ್ನು ಅಪಾರ ಗೌರವದಿಂದ ಕಂಡು ಅವರಿಗೆ ಉನ್ನತ ಆಸನ ನೀಡಿ ತಾನು ತಗ್ಗಾದ ಆಸನದಲ್ಲಿ ಕುಳಿತುಕೊಳ್ಳುತ್ತಿದ್ದನು.

ಆದರೆ ಈಗ ಆತನು ವೈಭವಯುತ ಉನ್ನತ ಸ್ಥಾನದಲ್ಲಿ ಕುಳಿತು ನಿಗಂಠರಿಗೆ ಒಳಬಿಡುವಂತೆ ಹೇಳಿದನು. ನಿಗಂಠರೆಲ್ಲ ಅಪಾರ ಸಮೂಹದಿಂದ ಒಳಹೋದಾಗ ಆತನು ಎದ್ದೇಳಲಿಲ್ಲ. ಆದರೆ ಆಸನಗಳಲ್ಲಿ ಕುಳಿತುಕೊಳ್ಳಿ ಎಂದನು. ಆಗ ನಾತಪುತ್ತರು ಆತನಿಗೆ ಹೀಗೆ ಕೇಳಿದರು: "ನಿನ್ನ ತಲೆ ಕೆಟ್ಟಿದೆಯೇ? ಹುಚ್ಚನೇನಾದರೂ ಆಗಿರುವೆಯಾ?"

ಆಗ ಉಪಾಲಿಯು "ಪೂಜ್ಯರೇ, ಹಿಂದೆ ತಲೆ ಕೆಟ್ಟಿ ಹುಚ್ಚನಾಗಿದ್ದೆನು, ಆದರೆ ಈಗ ನಾನು ನೆಟ್ಟಗಾಗಿದ್ದೇನೆ, ಜ್ಞಾನಿಯಾಗಿದ್ದೇನೆ. ಈಗ ಮೋಡದ ಕತ್ತಲೆಯಲ್ಲಿ ಹುಡುಕಾಡುವ ಹಾಗಿಲ್ಲ."

ಆಗ ನಾತಪುತ್ತರು ಆತನಿಗೆ ಸ್ಪಷ್ಟತೆಗಾಗಿ ಒತ್ತಾಯಿಸಿದರು "ಇಡೀ ಜಗತ್ತು ಹಿಂದೆ ನೀನು ನನ್ನ ಶಿಷ್ಯನೆಂದು ಪರಿಗಣಿಸಿತ್ತು, ಈಗ ನೀನು ಯಾರ ಶಿಷ್ಯ ವಿವರಿಸು? ಆಗ ಉಪಾಲಿಯು ಎದ್ದುನಿಂತನು. ತನ್ನ ವಸ್ತ್ರವನ್ನು ಸರಿಪರಿಸಿಕೊಂಡು, ಎಡಭುಜದ ಮೇಲೆ ಹೊದಿಕೆಯನ್ನು ಹಾಕಿಕೊಂಡು, ಭಗವಾನರು ಇರುವಂತಹ ದಿಕ್ಕಿಗೆ ಎದುರಿಗೆ ನಿಂತು ವಂದಿಸಿದನು. ಆ ಸಮಯದಲ್ಲಿ ಭಗವಾನರು ಪಾವಾರಿಕ ವಿಹಾರದಲ್ಲಿದ್ದರು. ನಂತರ ಉಪಾಲಿಯು ಈ ಹತ್ತು ಗಾಥೆಗಳನ್ನು ನುಡಿದನು.



ಉಪಾಲಿಯು ಹೀಗೆ ಹೇಳಿದನು "ನೀವು ತಿಳಿಯಲು ಒತ್ತಾಯಿಸಿದ್ದರಿಂದಾಗಿ ನಾನು ಯಾರ ಶಿಷ್ಯನೆಂದು ತಿಳಿಸುವೆ ಆಲಿಸಿ."

1. "ಧೀರರ, ಮೋಹವಿಲ್ಲದವರ, ಮಾನಸಿಕ ಸಂಕೋಲೆಗಳೆಲ್ಲ ಮುರಿದವರ, ಪಾಪದ ಮೇಲೆ ವಿಜಯ ಸಾಧಿಸಿರುವವರ, ದುಃಖವಿಲ್ಲದವರ, ಸದಾ ಸಮಚಿತ್ತತೆಯಿಂದಿರುವವರ, ಉತ್ತಮೋತ್ತಮ ಪ್ರಜ್ಞೆಯುಳ್ಳವರ, ಎಲ್ಲವನ್ನೊಳಗೊಂಡ, ಅತ್ಯಂತ ವಿಮಲರು ಆಗಿರುವಂತಹ ಭಗವಾನರ ಶಿಷ್ಯನು ನಾನಾಗಿದ್ದೇನೆ."

2. "ಯಾರು ಪರಿಪೂರ್ಣರೋ, ಪರಮಾರ್ಥಿಕತೆಯಲ್ಲಿ ಅನುತ್ತರರೋ, ಸಂಶಯಗಳಿಂದ ಪೂರ್ಣವಾಗಿ ವಿಮುಕ್ತರೋ, ಸದಾ ಸಂತೃಪ್ತರೋ, ಲೌಕಿಕ ವಿಷಯಗಳೆಲ್ಲದರಿಂದ ವಿಮುಖರೋ, ಪರಮಸುಖದಲ್ಲಿ ಆನಂದಿಸುವವರೊ, ಸಮಣರ ಸಾಧನೆಯಲ್ಲಿ ಸಿದ್ಧಿಪಡೆದವರೋ, ಅಂತಿಮ ಶರೀರಧಾರಿಯೋ, ಅತ್ಯುತ್ತಮ ನರರೋ, ಅಂತಹ ಅನುಪಮ ಸಂಪನ್ನರ, ರಜವಿಲ್ಲದವರಾದಂತಹ ಭಗವಾನರ ಶಿಷ್ಯನು ನಾನಾಗಿದ್ದೇನೆ."

3. "ಸಂಶಯರಹಿತರು, ಕುಶಲರು, ಪರರನ್ನು ನಡೆಸುವಂತಹ ಸಾರಥಿಯು, ಅನುತ್ತರರು, ಹೊಳೆಯುವ ಧಮ್ಮ ಬೋಧಿಸುವವರು, ಅನಿಶ್ಚಿತತೆಯಿಲ್ಲದವರು ಪ್ರಭೆಯನ್ನು ತರುವವರು, ಅಹಂಭಾವವನ್ನು ಮುರಿದಂತಹ ವೀರರು, ಅಂತಹ ಭಗವಾನರ ಶಿಷ್ಯನು ನಾನಾಗಿದ್ದೇನೆ."

4. "ಯಾರು ಎಲ್ಲಾ ಬಂಧನಗಳಿಂದ ದಾಟಿರುವರೋ, ನಿಜ ವಿಮೋಚನರೋ, ಸಮೂಹಕ್ಕೆ ಬಲಿಷ್ಠ ನಾಯಕರೋ, ಯಾರ ಸದ್ಗುಣಗಳು ಅಳತೆಗೆ ಮೀರಿದವೋ, ಯಾರ ಆಳವಾದ ಪ್ರಜ್ಞಾವು ಅಳೆಯಲಾರದಂತಹುದೊ, ಯಾರು ಉನ್ನತವಾದ ಸ್ಥಿತಿಯಂತಹ ಮೌನವನ್ನು ಸಾಧಿಸಿದ ಮುನಿಯೋ, ಯಾರು ಪರಮಶ್ರೇಷ್ಠ ಜ್ಞಾನವನ್ನು ಹೊಂದಿರುವರೋ, ಪರಮ ಸುರಕ್ಷತೆ ನೀಡುವವರೋ, ಉದಾತ್ತ ಧಮ್ಮದಲ್ಲಿ ಅವಿಚಲರಾಗಿ ಸ್ಥಾಪಿತ ರಾಗಿರುವರೋ, ಸ್ವ-ಪ್ರಭುತ್ವವನ್ನು ಏಕಾಂಗಿಯಾಗಿಯೇ ಸಾಧಿಸಿದವರೋ – ಅಂತಹ ಭಗವಾನ್‌ರ ಶಿಷ್ಯನು ನಾನಾಗಿದ್ದೇನೆ."

5. "ಯಾರು ತನ್ನಿಂದಲೇ ಪೂರ್ಣವಾಗಿ ಧಮಿಸಲ್ಪಟ್ಟರೋ ಯಾರಿಗೆ ಮತ್ತೆ ಭವವಿಲ್ಲವೋ, ಶ್ರೇಷ್ಠ ಆನೆಯ ತರಹ ಏಕಾಂತದಲ್ಲೇ ಇರುವಂತಹವರೋ, ತಮ್ಮಲ್ಲಿ ತಡೆಗಳನ್ನು ಮುರಿದವರೋ, ಪೂರ್ಣವಾಗಿ ಮುಕ್ತರೋ, ಚರ್ಚೆಯಲ್ಲಿ ಪ್ರಾವೀಣ್ಯರೋ, ಪರಿಶುದ್ಧ ಪ್ರಜ್ಞಾರೋ, ಯಾರು ಅಸ್ತಿತ್ವದ ಧ್ವಜವನ್ನು ಕೆಳಗಿಳಿಸಿದರೊ, ರಾಗವಿಲ್ಲದವರೋ ಅಂತಹ ಭಗವಾನರ ಶಿಷ್ಯನು ನಾನಾಗಿದ್ದೇನೆ."

6. "ದಾತರಲ್ಲಿ ಅಗ್ರರಾದ ಧಮ್ಮದಾತರೋ, ಸರ್ವಶ್ರೇಷ್ಠರೋ, ವಿಪಸ್ಸಿನಂತರ ಏಳನೆಯ ಋಷಿಯೋ, ಅಭಿಜ್ಞಾ ಸಂಪನ್ನರೋ ಪರಮಶ್ರೇಷ್ಠ ಜ್ಞಾನಗಳನ್ನು ಹೊಂದಿರುವರೋ, ಉತ್ಕೃಷ್ಟ ಪವಿತ್ರತೆಯ ಸ್ಥಾನಗಳಿಸಿದವರೋ, ಪರಿಶುದ್ಧ ಹೃದಯಿಯೋ, ಸರ್ವಶ್ರೇಷ್ಠ ಪರಮಾರ್ಥ ಗುರುವೋ, ಅತ್ಯುನ್ನತ ಸತ್ಯದ ಸಂಶೋಧಕರೋ, ಸದಾ ಶಾಂತತೆಯಲ್ಲಿ ನೆಲೆಸುವಂತಹವರೋ ಅಂತಹ ಭಗವಾನ್‌ರ ಶಿಷ್ಯ ನಾನಾಗಿದ್ದೇನೆ."

7. "ಯಾರು ಉದ್ವೇಗರಹಿತರೊ, ಯಾರು ಸರ್ವಜ್ಞಾನಗಳ, ಸರ್ವ ಬಲಗಳ ಮತ್ತು ಸರ್ವ ಸದ್ಗುಣಗಳ ಮೇಲೆ ಪೂರ್ಣ ಪ್ರಾವಿಣ್ಯತೆ ಸಾಧಿಸಿದರುವರೋ, ಹೀಗಾಗಿ ಪರಮಶ್ರೇಷ್ಠರೋ, ಯಾರ ಮನಸ್ಸು ಪೂರ್ಣ ವಿಕಸಿತವೋ, ಅತ್ಯುನ್ನತ ಗುರಿ ಮುಟ್ಟಿದವರೊ, ಪರಮಾರ್ಥ ಸತ್ಯವನ್ನು ಸಾರುವ ಅದ್ವಿತೀಯರೋ, ಉನ್ನತವಾದ ಸ್ಥಿತಿಯನ್ನು ಹಾಗು ಪ್ರಜ್ಞಾವನ್ನು ಹೊಂದಿರುವರೋ ಯಾರಲ್ಲಿ ಏರಿಳಿತಗಳಿಲ್ಲವೋ, ಅಂದರೆ ಆಕರ್ಷಣೆ, ವಿಕರ್ಷಣೆಗಳಿಲ್ಲವೋ ಅಂತಹ ಭಗವಾನರ ಶಿಷ್ಯನು ನಾನಾಗಿದ್ದೇನೆ."

8. "ಯಾರು ದಾಟಿದವರೋ, ಪರರನ್ನು ದಾಟಿಸುವವರೋ, ಆ ದಡದ ಮಾರ್ಗದರ್ಶಿಗಳೋ, ಸದಾ ಉನ್ನತವಾದ ಧ್ಯಾನದಲ್ಲಿ ನಿರತರೋ, ಅಂತರ್ಮುಖಿಯಾಗಿ ಪೂರ್ಣವಾಗಿ ಪವಿತ್ರರೋ, ಕಲೆಯಿಲ್ಲದ ಪರಿಶುದ್ಧರೋ, ಸ್ವತಂತ್ರರೋ, ನಿರ್ಭಯರೋ, ಏಕಾಂತದಲ್ಲಿ ಆನಂದಿಸುವವರೋ, ಪರಮಾರ್ಥದ ಶೃಂಗವನ್ನು ಏರಿದವರೋ ಅಂತಹ ಭಗವಾನರ ಶಿಷ್ಯನು ನಾನಾಗಿದ್ದೇನೆ.

9. "ಯಾರ ನಿರ್ಭಯತೆಯು ಅಸೀಮವೋ, ಸಂತರ ಉತ್ಕೃಷ್ಟ ಪ್ರಾಜ್ಞತೆಯುನ್ನು ಹೊಂದಿರುವವರೋ, ಮಹಾ ಪ್ರಾಜ್ಞರೋ,



ಲೋಭರಹಿತರೋ, ತಥಾಗತರೋ (ನುಡಿದಂತೆ ನಡೆದವರು, ನಡೆದಂತೆ ನುಡಿದವರು) ಸುಗತರೋ, ಹೋಲಿಸಲು ಅಸಾಧ್ಯವಾಗಿರುವರೋ, ಅಸಮಾನರೋ, ವಿಶಾರದರೋ, ನಿಪುಣರೋ ಅಂತಹ ಬುದ್ಧ ಭಗವಾನರ ಶಿಷ್ಯನು ನಾನಾಗಿದ್ದೇನೆ."

10. "ಯಾರು ತೀವ್ರ ಬಯಕೆಗಳನ್ನು (ತನ್ಹಾ) ಕತ್ತರಿಸಿರುವರೋ, ಸ್ವಯಂ ಸಂಶೋಧಿಸಿ ಪರಿಪೂರ್ಣ ಜ್ಞಾನಿಗಳಾಗಿರುವರೋ (ಬುದ್ಧರೋ), ಧೂಮವಿಲ್ಲದವರೊ (ಮೋಹಗಳಂತಹ ಅಸ್ಪಷ್ಟತೆ ಇಲ್ಲದವರೋ) ಪೂರ್ಣವಾಗಿ ಕಲೆರಹಿತರೋ, ದಾನಕ್ಕೆ ಪರಮಯೋಗ್ಯತೆವುಳ್ಳವರೊ, ಯಕ್ಖರೋ (ಬಲಿಷ್ಠ ಜೀವಿಯೋ) ಉತ್ತಮ ಪುರುಷರೋ, ಅಳತೆಗೆ ಮೀರಿದವರೋ, ಮಹಾನ್ ವ್ಯಕ್ತಿಯು, ಯಶಸ್ಸಿನ ತುದಿಯನ್ನು ಏರಿರುವರು, ಅಂತಹ ಭಗವಾನ್ ಬುದ್ಧರ ಶಿಷ್ಯನು ನಾನಾಗಿದ್ದೇನೆ."

ಹೀಗೆ ನುಡಿಯುತ್ತ ಉಪಾಲಿ ಕೋಟ್ಯಾಧೀಶನು ಪುನಃ ಭಗವಾನರು ಇರುವ ದಿಕ್ಕಿಗೆ ಮಂಡಿವೂರಿ ವಂದಿಸಿದನು.

ಆಗ ನಾತಪುತ್ತನು ಹೀಗೆ ಕೇಳಿದನು: "ಗೃಹಸ್ಥನೇ, ಯಾವಾಗ ನೀನು ಶ್ರಮಣ ಗೋತಮರ ಬಗ್ಗೆ ವರ್ಣನೆಯನ್ನು ರಚಿಸುವುದನ್ನು ಕಲಿತೆ?"

"ಪೂಜ್ಯರೇ, ಊಹಿಸಿ! ಅನೇಕ ವರ್ಣದ ಹೂಗಳ ರಾಶಿಯಿದ್ದು, ಕೌಶಲ್ಯಯುತ ಹೂ ರಚನೆಕಾರನಿದ್ದರೆ, ಆತನಿಂದ ಅನೇಕ ವರ್ಣಗಳ ಹೂವಾಲೆಗಳನ್ನು ನಿರ್ಮಿಸಬಹುದು. ಹಾಗೆಯೇ ಭಗವಾನರು ಪರಮಾರ್ಥದ ಶ್ರೇಷ್ಠ ಹೂಗಾರರಾಗಿದ್ದಾರೆ. ಹಾಗು ಪರಮ ಪ್ರಶಂಸಾರ್ಹ ಸದ್ಗುಣಗಳನ್ನು ಹೊಂದಿದವರು ಆಗಿದ್ದಾರೆ. ಅವರು ನೂರಾರು ಸದ್ಗುಣಗಳನ್ನು ಹಾಗೆಯೇ ಸ್ತುತಿಗಳನ್ನು ಪಡೆದಿದ್ದಾರೆ. ಪೂಜ್ಯರೇ, ನೀವೇ ಹೇಳಿ, ಪ್ರಶಂಸಾರ್ಹರನ್ನು ಯಾರು ತಾನೇ ಕೊಂಡಾಡುವುದಿಲ್ಲ?"

ಹೀಗೆ ನುಡಿದ ನಂತರ ಅದನ್ನು ಆಲಿಸಿ ನಾತಪುತ್ತರು ಅತಿಯಾಗಿ ಕ್ಷೋಬೆಗೆ ಒಳಗಾಗಿ ಅಲ್ಲಿಂದ ಹಿಂತಿರುಗುತ್ತಾರೆ ಎಂದು ಹೇಳಲಾಗಿದೆ.

# 'ಸಬ್ಬ ದಾನಂ ಧಮ್ಮ ದಾನಂ ಜಿನಾತಿ'
# ಎಲ್ಲ ದಾನಗಳಲ್ಲಿ ಧಮ್ಮ ದಾನವು ಶ್ರೇಷ್ಠವಾದುದು

– ಧಮ್ಮಪದ

ಈ ಪುಸ್ತಕ ಮತ್ತು ಇಂಥ ಅನೇಕ ಪುಸ್ತಕಗಳು ಸಾವಿರಾರು ಜನರಿಗೆ ಧಮ್ಮದಾನವಾಗಿ ಕೈ ಸೇರಿವೆ. ಇದು ಧಮ್ಮ ದಾನ ಮಾಡಬೇಕೆಂಬ ಕುಶಲ ಚಿತ್ತದಿಂದ ಯೋಚಿಸಿದವರ ಕೊಡುಗೆ.

ನೀವು ಸಹ ನಿಮ್ಮ ಅಥವಾ ನಿಮ್ಮ ಕುಟುಂಬದವರ ಯಾವುದೇ ವಿಶೇಷ ಸಂದರ್ಭದಲ್ಲಿ, ಅಂದರೆ ಹುಟ್ಟು ಹಬ್ಬ, ಮದುವೆ, ನಾಮಕರಣ, ಪುಣ್ಯ ತಿಥಿ, ಗೃಹಪ್ರವೇಶ ಯಾವುದೇ ರೀತಿಯ ಯಶಸ್ಸು ಇತ್ಯಾದಿಗಳನ್ನು ಆಚರಿಸುವಾಗ ಅದರ ನೆನಪಿನಲ್ಲಿ ಇಂಥ ಚಿಕ್ಕ ದೊಡ್ಡ ಧಮ್ಮದ ಪುಸ್ತಕಗಳನ್ನು ಪ್ರಕಟಿಸಿ ದಾನ ಮಾಡಬಹುದು. ಮಿತ್ರರೊಂದಿಗೆ ಸಂಯುಕ್ತವಾಗಿಯೂ ದಾನ ಮಾಡಬಹುದು.

*ಇದಕ್ಕಾಗಿ ಸಂಪರ್ಕಿಸಿ*


**ಮಹಾ ಬೋಧಿ ಸೊಸೈಟಿ**

14, ಕಾಳಿದಾಸ ಮಾರ್ಗ, ಗಾಂಧಿನಗರ, ಬೆಂಗಳೂರು–560 009

ದೂರವಾಣಿ : 080–22250684 ಫ್ಯಾಕ್ಸ್ : 080–22264438

E-mail : books@mahabodhi.info




# ಮಹಾ ಬೋಧಿ ಸೊಸೈಟಿಗೆ
# ನೀವು ಹೇಗೆ ಸಹಾಯ ಮಾಡಬಹುದು ?

ಮಹಾ ಬೋಧಿ ಸೊಸೈಟಿಯು ಅನೇಕ ಧಮ್ಮ ಸೇವಾ ಕಾರ್ಯಗಳಲ್ಲಿ ತೊಡಗಿದೆ. ತಾವು ಮಹಾಬೋಧಿಯಲ್ಲಿನ ಬಿಕ್ಷು ತರಬೇತಿ ಕೇಂದ್ರಕ್ಕೆ, ಶಾಲೆ, ಹಾಸ್ಟೆಲುಗಳಿಗೆ ಪುಸ್ತಕ ಪ್ರಕಟಣೆಗೆ, ಪ್ರತಿನಿತ್ಯ ಬುದ್ಧ ಪೂಜೆಗಾಗಿ ಅಥವಾ ವಿಶೇಷ ಸೌಕರ್ಯಗಳಿಗಾಗಿ ಸಹಾಯ ಮಾಡಬಹುದು. ಮಹಾಬೋಧಿ ಸೊಸೈಟಿಯನ್ನು ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ.

## ಮಹಾಬೋಧಿ ಬೌದ್ಧ ಅಧ್ಯಯನ ಕೇಂದ್ರ

ಈ ಕೇಂದ್ರವು 2 ವರ್ಷದ ಡಿಪ್ಲೊಮಾ ಕೋರ್ಸುಗಳನ್ನು ಬೌದ್ಧ ಧಮ್ಮದ ಬಗ್ಗೆ ನಡೆಸುತ್ತಿದೆ. ಇದು ಅಂಚೆ ಮೂಲಕವಿದ್ದು ನೀವು ಮನೆಯಲ್ಲಿಯೇ ಓದಬಹುದಾಗಿದೆ. ಪ್ರತಿ ಉಪಾಸಕ–ಉಪಾಸಕಿಯರಿಗೆ ಧಮ್ಮದ ಅರಿವು ಮೂಡಿಸುವುದೇ ಇದರ ಉದ್ದೇಶ.

**ಒಂದು ವರ್ಷಕ್ಕೆ ರೂ. 500/– ಎಲ್ಲ ಸೇರಿ.**

ಸಂಪರ್ಕಿಸಿ : **ಮಹಾಬೋಧಿ ಸೊಸೈಟಿ,** ಬೆಂಗಳೂರು